# ಪುಸ್ತಕ ಪ್ರಪಂಚ

ಫೆಬ್ರವರಿ ೧೯೯೫



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

# ಪುಸ್ತಕ ಪ್ರಪಂಚ
## (ಮಾಸ ಪತ್ರಿಕೆ)

ಡೆಮ್ಮಿ ಅಷ್ಟದಳ ೮೦ ಪುಟಗಳು

**ಚಂದಾ ವಿವರಗಳು :**

ಬಿಡಿ ಪತ್ರಿಕೆ ರೂ. 6-00

ವಾರ್ಷಿಕ ಚಂದಾ ರೂ. 60-00

**ಆಜೀವ ಸದಸ್ಯತ್ವದ ಚಂದಾ ವಿವರ :**

ಸಂಸ್ಥೆಗೆ ರೂ. 600-00

ವ್ಯಕ್ತಿಗೆ ರೂ. 400-00

ಸಂಪರ್ಕಿಸಬೇಕಾದ ವಿಳಾಸ :

**ಪ್ರಧಾನ ಕಾರ್ಯದರ್ಶಿ**
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ
ಮೈಸೂರು-570006

ದೂರವಾಣಿ : 512485
515828

# ಪುಸ್ತಕ ಪ್ರಪಂಚ

## ಮಾಸಿಕ

**ಸಂಪುಟ ೪೫ ಸಂಚಿಕೆ ೬**

ರಕ್ಷಾಪುಟದ ಚಿತ್ರ

**ಡಾ|| ಎಚ್. ಆರ್. ಸುದರ್ಶನ್**



## ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-570 006

# ನಿಸ್ವಾರ್ಥಕ್ಕೊಂದು ಹೆಸರು ಸುದರ್ಶನ್

ಕೃಷ್ಣವಟ್ಟಂ

ನಿಸ್ವಾರ್ಥ ಸೇವೆಗೆ ಕ್ಷೇತ್ರಗಳ ಪರಿಮಿತಿ ಅಡ್ಡಗಾಲಾಗುವುದಿಲ್ಲ. ಸೇವೆಯ ಸಮರ್ಪಣೆಗೆ ಪ್ರೇರಣೆಯೂ ಕಾರಣವಾಗಬಹುದು. ಸ್ವಾಮಿ ವಿವೇಕಾನಂದರ ಪ್ರೇರಣೆಗೆ ಒಳಗಾಗಿ ಗಿರಿಜನರ ಅಭ್ಯುದಯಕ್ಕಾಗಿ ತಮ್ಮ ಜೀವನವನ್ನೇ ಪಣವಿಟ್ಟಿರುವ ಹಾಗೂ ಗಿರಿಜನರ ಮಧ್ಯೆಯೇ ಬದುಕುತ್ತಿರುವ ಯುವ ವೈದ್ಯರೊಬ್ಬರು ನಮ್ಮ ಮುಂದೆ ಇದ್ದಾರೆ. ಅವರೇ ಡಾ. ಹನುಮಪ್ಪರೆಡ್ಡಿ ಸುದರ್ಶನ್.

ಸುಮಾರು ೧೫ ವರ್ಷಗಳ ಹಿಂದಿನ ಮಾತು. ಬೆಂಗಳೂರಿನಲ್ಲಿ ವೈದ್ಯ ವೃತ್ತಿ ಆರಂಭಿಸಿ ನಂತರ ವಿವೇಕಾನಂದರ ಪ್ರೇರಣೆಗೆ ಮಾರುಹೋದ ಡಾ. ಸುದರ್ಶನ್ ಸೋಲಿಗರ ಸೇವೆಗಾಗಿ ಗಿರಿಜನರ ತಾಣವಾದ ಮೈಸೂರು ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಕಡೆಗೆ ತಮ್ಮ ಯಾನ ಬೆಳೆಸಿದರು.

ವೈದ್ಯಕೀಯ ಸೌಲಭ್ಯವೇ ಕಾಣದ ಸೋಲಿಗ ಗಿರಿಜನರಿಗೆ ಡಾ. ಸುದರ್ಶನರ ಆಗಮನ ಅನುಮಾನ ದೃಷ್ಟಿಯಿಂದ ನೋಡುವಂತೆ ಮಾಡಿತ್ತು. ಇದು ಗಿರಿಜನರು ತಾವು ಬೆಳೆದು ಬಂದ ವಾತಾವರಣಕ್ಕೆ ವ್ಯತಿರಿಕ್ತ ಎಂಬಂತೆ ಭಾವಿಸಿರಲೂ ಒಂದು ಕಾರಣವಿರಬಹುದು. ಗಿರಿಜನರ ಮನಗೆಲ್ಲಲು ಸುದರ್ಶನ್ ಬಹುಕಾಲ ಕಾಯಬೇಕಾಗಲಿಲ್ಲ. ಅನಿರೀಕ್ಷಿತವೆಂಬಂತೆ ಗಿರಿಜನರ ಒಬ್ಬನಿಗೆ ಹಾವು ಕಚ್ಚಿದ ಪ್ರಕರಣ ಸುದರ್ಶನರಿಗೆ ಎದುರಾಯಿತು. ನಿಸ್ವಾರ್ಥತೆಯ, ಸಮರ್ಪಣ ಮನೋಭಾವದ ಸುದರ್ಶನ ಹಾವು ಕಚ್ಚಿದ ಸೋಲಿಗನನ್ನು ಅಪಾಯದಿಂದ ಪಾರುಮಾಡಿದರು. ಅಂದಿನಿಂದ ೨೦ ಸಾವಿರ ಗಿರಿಜನರ ಆರಾಧ್ಯ ದೈವವಾದರು. ಸುತ್ತಮುತ್ತ ಪ್ರದೇಶಗಳ ಗಿರಿಜನರ ಬಾಳಿಗೆ ಹೊಸ ಬೆಳಕು ನೀಡಿದರು ಡಾ. ಸುದರ್ಶನ್.

ಶ್ರಮಕ್ಕೆ ಫಲ ಖಚಿತವೆಂಬಂತೆ ಸೋಲಿಗ ಗಿರಿಜನರ ನಿರಂತರ ಸೇವೆಗೈದ ಡಾ. ಸುದರ್ಶನ ಅವರನ್ನು ಪ್ರಶಸ್ತಿಗಳೇ ಅರಿಸಿಕೊಂಡು ಬಂದುವು. ಬುಡಕಟ್ಟು ಜನರ ಬಾಳಿಗೆ ಆಶಾಕಿರಣವಾದ ಡಾ. ಸುದರ್ಶನ್ ಅವರ ಸೇವೆಯನ್ನು ಗುರುತಿಸಿ ಅವರಿಗೆ 'ರೈಟ್ ಲೈವ್ಲಿವುಡ್' ಪ್ರಶಸ್ತಿಯನ್ನು ನೀಡಲಾಯಿತು. ೨೫ ಸಾವಿರ ಡಾಲರ್ ಬಹುಮಾನದ ಈ ಪ್ರಶಸ್ತಿಯನ್ನು ಟ್ರಿನಿಡಾನ್ ಕೆನ್ ಸರ್ವೊ-ವಿತ್‌ನೊಂದಿಗೆ ಡಾ. ಸುದರ್ಶನ್ ಹಂಚಿಕೊಂಡಿದ್ದಾರೆ.

ನೊಬೆಲ್ ಪ್ರಶಸ್ತಿಗೆ ಪರ್ಯಾಯವೆಂದು ಭಾವಿಸಲಾಗಿರುವ 'ರೈಟ್ ಲೈವ್ಲಿವುಡ್'

ಪ್ರಶಸ್ತಿಯನ್ನು ಡಿಸೆಂಬರ್ ೯ ರಂದು ನೊಬೆಲ್ ಪ್ರಶಸ್ತಿ ನೀಡುವ ಒಂದು ದಿನದ ಮುಂಚೆ ಸ್ವಿಡನ್ ಸಂಸತ್ತಿನಲ್ಲಿ ಪ್ರಶಸ್ತಿಯನ್ನು ಸಂಪ್ರದಾಯಿಕವಾಗಿ ನೀಡಲಾಯಿತು. ಪ್ರಸಕ್ತ ಸನ್ನಿವೇಶದಲ್ಲಿ ಮುಂದಿರುವ ಸವಾಲನ್ನು ಸಮರ್ಥವಾಗಿ ಕಾರ್ಯಗತ ಮಾಡುವವರಿಗೆ ಗೌರವ ನೀಡುವ ಸಲುವಾಗಿ ಈ ಪ್ರಶಸ್ತಿಯನ್ನು ೧೯೮೦ರಲ್ಲಿ ಆರಂಭಿಸಲಾಯಿತು.

**ಹಿನ್ನೆಲೆ:** ತಂದೆಯವರಾದ ಹನುಮಂತ ರೆಡ್ಡಿಯವರು ಅಗತ್ಯ ವೈದ್ಯಕೀಯ ಸೌಲಭ್ಯವಿಲ್ಲದೆ ನರಳುತ್ತಿದುದು ೧೨ ವರ್ಷದ ಸುದರ್ಶನ್ ಅವರಿಗೆ ನೋಡಲಾಗಲಿಲ್ಲ. ಇದೊಂದು ನಿದರ್ಶನ ಯುವ ಬಾಲಕನಿಗೆ ಹೃದಯ ಪರಿವರ್ತನೆಗೆ ಕಾರಣವಾಯಿತು. ಅಂದಿನಿಂದಲೇ ಡಾಕ್ಟರ್ ಆಗುವ ಬಯಕೆ ಬಾಲಕನಿಗೆ ಕಾಡಿತಲ್ಲದೆ ಗ್ರಾಮಾಂತರ ಜನರ ಸೇವೆಗಿಳಿಯಬೇಕೆಂಬ ಸುದರ್ಶನ ಅವರ ಅಂದಿನ ಪರಿವರ್ತನೆಗೆ ಪ್ರೇರಣೆ ನೀಡಿತು.

ಲೆಕ್ಕಾಚಾರದಂತೆ ಎಲ್ಲಾ ನಡೆಯುವುದಿಲ್ಲವೆಂಬ ನುಡಿ ಸುದರ್ಶನ್ ಅವರಿಗೆ ಎದುರಾಯಿತು. ಇಳಿಯ ವಯಸ್ಸು ಎಂಬ ಕಾರಣದಿಂದಾಗಿ ಅದ್ಭುತ ವಿದ್ಯಾರ್ಥಿ ಸುದರ್ಶನ್‌ಗೆ ೧೯೬೨ ರಲ್ಲಿ ಎಂ.ಬಿ.ಬಿ.ಎಸ್‌ಗೆ ಪ್ರವೇಶ ನಿರಾಕರಿಸಲಾಯಿತು. ಪ್ರವೇಶಕ್ಕಾಗಿ ಮುಂದಿನ ವರ್ಷವೂ ಯತ್ನಿಸಿದರು ಸುದರ್ಶನ್. ಅಷ್ಟರಲ್ಲಿಯೇ ಸ್ವಾಮಿ ವಿವೇಕಾನಂದರ ಬೋಧನೆಗಳು ಸುದರ್ಶನರ ಮನದಾಳ ಹೊಕ್ಕವು. ಸನ್ಯಾಸಿಯಾಗಲು ಇದಕ್ಕಾಗಿ ಕಲ್ಕತ್ತಾದ ಬೇಲೂರು ಮಠಕ್ಕೆ ತೆರಳಿದರು. ನಂತರ ಮನಸ್ಸು ಬದಲಿಸಿದ ಸುದರ್ಶನ್ ಬೆಂಗಳೂರಿಗೆ ವಾಪಸ್ಸಾಗಿ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದರು.

ಎಂ.ಬಿ.ಬಿ.ಎಸ್ ಓದುವ ಹಂತದಲ್ಲಿಯೇ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ೧೯೪೦ರ ಅವಧಿಯಲ್ಲಿ ನೀಲಗಿರಿ ಮೂಲದ ಆದಿವಾಸಿಗರ ಕಲ್ಯಾಣಕ್ಕಾಗಿ ದುಡಿದ ಡಾ. ನರಸಿಂಹನ್‌ರ ವಿಷಯ ಕುರಿತು ಓದಿದರು. ಡಾ. ನರಸಿಂಹನ್‌ರ ನಿಧನದ ತರುವಾಯವೂ ಆದಿವಾಸಿ ಕಲ್ಯಾಣ ಸಂಘವನ್ನು ಅವರ ಪುತ್ರಿ ಡಾ. ರಾಜಲಕ್ಷ್ಮಿ ಮತ್ತು ಪತಿ ಡಾ. ಸುಬ್ರಮಣ್ಯಂ ಮುಂದುವರಿಸಿಕೊಂಡು ಬಂದುದನ್ನೂ ಓದಿ ಮತ್ತಷ್ಟು ಪ್ರಭಾವಿತರಾದರು ಸುದರ್ಶನ್.

ನೀಲಗಿರಿ ಆದಿವಾಸಿ ಕಲ್ಯಾಣ ಸಂಘದ ದೃಷ್ಟಿಯು ಯಾವೊಂದೂ ಸೌಲಭ್ಯ ಕಾಣದ ೨ ಸಾವಿರ ಸೋಲಿಗ ಜನ ಸಂಖ್ಯೆಯಿರುವ ಬಿಳಿಗಿರಿರಂಗನ ಬೆಟ್ಟದ ಕಡೆ ಹರಿಯಿತು. ಬಿಳಿಗಿರಿರಂಗನ ಬೆಟ್ಟದ ಈ ಜನರು ವೈದ್ಯಕೀಯ ಸೌಲಭ್ಯಕ್ಕಾಗಿ ೪೦ ಕಿ.ಮಿ. ದೂರದ ಚಾಮರಾಜ ನಗರಕ್ಕೆ ಆಗಮಿಸಬೇಕಾಗಿತ್ತು. ಇಲ್ಲಿಯೇ ಒಂದು ವೈದ್ಯಕೀಯ ಕೇಂದ್ರ ತೆರೆಯಬೇಕೆಂಬ ಆದಿವಾಸಿ ಕಲ್ಯಾಣ ಸಂಘದ ಯೋಜನೆಗೆ ನಿಸ್ವಾರ್ಥ ಸಮರ್ಪಣಾ ಮನೋಭಾವದ ಡಾ. ಸುದರ್ಶನ್ ಎದುರಾದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿಜಿಯವರು ಸುದರ್ಶನರ ಭಕ್ತಿಪೂರ್ವಕ ಸೇವೆಗೆ ಮರುಳಾದರು. ಗಿರಿಜನರ ಜೀವನ ಸ್ಥಿತಿ ಸುಧಾರಿಸಲು ಗ್ರಾಮೀಣ ಸಮಗ್ರ ಅಭಿವೃದ್ಧಿ ಕಾರ್ಯಕ್ರಮ

ಆರಂಭಿಸಲು ನೆರವಾದರು. ಗಿರಿಜನರ ಸಾಮಾಜಿಕ ಹಾಗೂ ಆರ್ಥಿಕ ಗುಣಮಟ್ಟ ಕಾಯ್ದುಕೊಳ್ಳಲು ಪರಿಣಾಮಕಾರಿ ಸಂಘಟನಾ ಗುಂಪಿನ ಚಳುವಳಿ ಆರಂಭವಾಯಿತು.

ಇದರ ಪ್ರತಿಫಲವೇ ೧೯೮೧ರಲ್ಲಿ ವಿವೇಕಾನಂದ ಗಿರಿಜನರ ಕಲ್ಯಾಣ ಕೇಂದ್ರ ಜನ್ಮತಾಳಲು ಕಾರಣವಾಯಿತು. ಇದರ ನೇತೃತ್ವವನ್ನು ವಹಿಸಿದವರು ಸೋಲಿಗರೇ ಆದ ಚಾಲುವಾದಿ ಮಾದೇಗೌಡರು. ಮಾದೇಗೌಡರು ಕೇಂದ್ರದ ಅಧ್ಯಕ್ಷರಾದರೆ, ಡಾ. ಸುದರ್ಶನ್ ಕಾರ್ಯದರ್ಶಿಯಾದರು.

ಕೇಂದ್ರದ ಧ್ಯೇಯೋದ್ದೇಶ ಬರೀ ವೈದ್ಯಕೀಯ ಕ್ಷೇತ್ರಕ್ಕೆ ಮೀಸಲಾಗಲಿಲ್ಲ. ಜನಾಂಗದ ಅಭಿವೃದ್ಧಿಯ ಕಡೆಗೂ ಕೇಂದ್ರವು ದೃಷ್ಟಿ ಹರಿಸಿತು. ಸಮಗ್ರ ಗಿರಿಜನರ ಅಭಿವೃದ್ಧಿ ಯೋಜನೆಯು ಬರೀ ಬಿಳಿಗಿರಿರಂಗನ ಬೆಟ್ಟದಲ್ಲಿ ಮಾತ್ರ ಸೀಮಿತವಾಗದೆ ಇದರ ವಿಸ್ತಾರವು ೨೦ ಸಾವಿರ ಗಿರಿಜನ ಸಂಖ್ಯೆಯ ಯಳಂದೂರು, ಚಾಮರಾಜ ನಗರ ಹಾಗೂ ಕೊಳ್ಳೇಗಾಲ ತಾಲ್ಲೂಕುಗಳಿಗೂ ಹಬ್ಬಿತಲ್ಲದೆ ತಮಿಳುನಾಡಿನ ಸತ್ಯಮಂಗಲ ತಾಲ್ಲೂಕಿನವರಿಗೆ ಪಸರಿಸಿತು.

ಗಿರಿಜನರ ಸಾಮಾಜಿಕ-ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಕಾಣಲು ೧೯೮೧ರಲ್ಲಿ ಸ್ಥಾಪಿತವಾದ ಕೇಂದ್ರವು ಬಹಳಷ್ಟು ಕಾಲ ಕಾಯಬೇಕಾಯಿತು. ಇದಕ್ಕೆ ಕಾರಣವೂ ಇಲ್ಲದಿಲ್ಲ. ಇದಕ್ಕೆ ಮುಂಚೆ ಸೋಲಿಗ ಮಕ್ಕಳು ಸರಕಾರಿ ಶಾಲೆಗೆ ಹಾಜರಾಗುತ್ತಿರಲಿಲ್ಲ. ಇದಕ್ಕೆ ತಿಳುವಳಿಕೆ ಹಾಗೂ ಬಡತನ ಮುಖ್ಯ ಕಾರಣಗಳು. ಸೋಲಿಗರ ಸಂಸ್ಕೃತಿ ಹಾಗೂ ಮೌಲ್ಯವಿಲ್ಲದ ಬೋಧನ ವಿಧಾನವು ಸೋಲಿಗರ ಮನಸ್ಸಿಗೊಪ್ಪಲಿಲ್ಲ. ಇದರಿಂದ ಮತ್ತಷ್ಟು ತೊಂದರೆಗಳು ಎದುರಾದವು. ಕಟ್ಟುನಿಟ್ಟಿನ ನಿಯಮವು ಕಾಡಿನಲ್ಲಿ ಹಾಯಾಗಿರುವ ಗಿರಿಜನರಿಗೆ ಬಂಧನವಾಯಿತು. ಇದರಿಂದ ಶಾಲೆಯಲ್ಲಿರುವವರ ಹಾಜರಾತಿಯೂ ಕಡಿಮೆಯಾಯಿತು. ಗಿರಿಜನರ ಗಡಿಯ ಹೊರಗೆ ಅವರಿಗೆ ಶಿಕ್ಷಣ ನೀಡುವ ಯತ್ನ ವಿಫಲವೆಂಬುದು ಸಾಬೀತಾಯಿತು.

೬ ವಿದ್ಯಾರ್ಥಿಗಳನ್ನು ಒಳಗೊಂಡ ಏಕೈಕ ಉಪಾಧ್ಯಾಯರಿರುವ ಶಾಲೆಯನ್ನು ನಂತರ ತೆರೆಯಲಾಯಿತು. ಶಾಲೆಯು ವೃದ್ಧಿಯಾದಂತೆ ದಿನ ನಿತ್ಯದ ಆಗುಹೋಗುಗಳ ಪರಿಚಯದ ಬೋಧನೆಯನ್ನು ನೀಡಲಾಯಿತು. ಇದು ಫಲಕಾರಿಯಾಯಿತು.

ಈಗ ಕೇಂದ್ರ ನಡೆಸುತ್ತಿರುವ ನರ್ಸರಿ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ೨೧೮ ವಿದ್ಯಾರ್ಥಿನಿಯರೂ ಸೇರಿದಂತೆ ಒಟ್ಟು ೫೦೦ ವಿದ್ಯಾರ್ಥಿಗಳಿದ್ದರೆ, ೧೬೦ ವಿದ್ಯಾರ್ಥಿ / ವಿದ್ಯಾರ್ಥಿನಿಯರ ಸೋಲಿಗರ ವಿದ್ಯಾರ್ಥಿ ನಿಲಯ ಸ್ಥಾಪಿತವಾಗಿರುವುದು. ಸೋಲಿಗರ ಶಿಕ್ಷಣದಲ್ಲಿಯೇ ಇತಿಹಾಸದ ಮೈಲುಗಲ್ಲಾಗಿದೆ. ವಯಸ್ಕರ ಶಿಕ್ಷಣ, ಅರಣ್ಯ ರಕ್ಷಣೆ, ಕ್ರೀಡೆಗಳು ಮತ್ತು ಪರಿಸರ ಶಿಕ್ಷಣ, ಸಾಂದರ್ಭಿಕ ತರಬೇತಿ ಈ ಕೇಂದ್ರದ ಇನ್ನಿತರ ಚಟುವಟಿಕೆಗಳಾಗಿವೆ.


ಬಿಳಿಗಿರಿರಂಗನ ಬೆಟ್ಟದಲ್ಲಿನ ಒಟ್ಟು ೬ ಸಾವಿರ ಸೋಲಿಗ ಕುಟುಂಬಗಳಿಗೆ ೧೫೦ ಎಕರೆ ಭೂಮಿ ಇದ್ದು ಇದರಲ್ಲಿ ಅಲ್ಪ ಭೂಮಿ ವನ್ಯಜೀವಿ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಕಾರಣದಿಂದಾಗಿ ಕೈಬಿಟ್ಟಿದೆ.

ಎಪ್ಪತ್ತೈದು ಎಕರೆಯಷ್ಟು ಭೂಮಿಯನ್ನು ಆನೆಗಳಿಂದ ಸಂರಕ್ಷಿಸಲಾಗಿದ್ದು ಇದನ್ನು ಕೃಷಿಗೆ ಮಾರ್ಪಡಿಸಲಾಗಿದೆ. ಜನಾಂಗದ ಶ್ರೇಯೊಭಿವೃದ್ಧಿಗಾಗಿ ಸಹಕಾರಿ ಸಂಘಗಳನ್ನು ವ್ಯವಸ್ಥಿಗೊಳಿಸಲಾಗಿದೆ.

ಸರ್ಕಾರ ಹಾಗೂ ಇತರ ಏಜೆನ್ಸಿ ನಡುವಿನ ಸಂಬಂಧದಿಂದಾಗಿ ಸರ್ಕಾರದ ಯೋಜನೆಯ ಫಲಗಳನ್ನು ತುಳಿತಕ್ಕೊಳಗಾದ ಈ ಗುಂಪಿಗೆ ಮುಟ್ಟಿಸುವುದರಲ್ಲಿ ಕೇಂದ್ರವು ಗಣನೀಯ ಪಾತ್ರ ವಹಿಸಿದೆ.

ಇಂದು ಸೋಲಿಗರು ತಮ್ಮದೇ ಆದ ವ್ಯಕ್ತಿತ್ವ ಹಾಗೂ ಘನತೆಯನ್ನು ಹೊಂದಿದ್ದಾರೆ. ಸಾಧನೆಯ ಪರಮೋಚ್ಚದ ಒಂದೇ ದೃಷ್ಟಿಯಿಂದ ಸೋಲಿಗರು ಹಾಗೂ ಕೇಂದ್ರದ ಕೆಲಸಗಾರರು ಅಭಿವೃದ್ಧಿಯನ್ನು ಕಾಣುತ್ತಿದ್ದಾರೆ. ಗಿರಿಜನರ ಪರಿವರ್ತನೆಗೆ ಹಾಗೂ ಇತರ ಸ್ಫೂರ್ತಿಗೆ ಕಾರಣವಾಗಿರುವ ಕೀರ್ತಿ ಈ ಯುವ ವೈದ್ಯರಿಗೆ ಸಲ್ಲಬೇಕು.

ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಗಿರಿಜನರ ಸೇವೆಗಾಗಿ ಡಾ. ಬಾಲಸುಬ್ರಮಣ್ಯಂ ಕಟಿಬದ್ಧರಾಗಿದ್ದರೆ, ಬಂಡೀಪುರದಲ್ಲಿ ಗಿರಿಜನರ ಪ್ರದೇಶದಲ್ಲಿಯೇ ಕಾರ್ಯನಿರತರಾಗಿರುವ ಮಹೇಶ್ವರ ಅವರುಗಳು ಡಾ. ಸುದರ್ಶನ್ ಅವರ ಸೇವಾ ಸ್ಫೂರ್ತಿಗೆ ಸಿಲುಕಿದ ಉದಾಹರಣೆಗಳು ಎನ್ನಬಹುದು.




ಸಿರಿವಂತರು ರೋಗಗ್ರಸ್ತರಾದಾಗಲೆಲ್ಲ ಅವರಿಗೆ ತಮ್ಮ ಸಂಪತ್ತಿನ ನಿಷ್ಪ್ರಯೋಜಕತೆಯು ಅರಿವಾಗುವುದು. ಆದರೆ ರೋಗಮುಕ್ತರಾದೊಡನೆ ಪುನಃ ಸಂಪತ್ತಿನ ಸಂಗ್ರಹಕ್ಕೆ ತೊಡಗುವದು ಅವರ ಗುಣ.

—ಕೋಲ್ಟನ್

# ಬಲಿ

ದೇಜಗೌ

'ಅವ್ವ, ಅವ್ವಾ, ನನ್ನ ಹಸು....ನನ್ನ ಹಸು ಎಲ್ಲಿ? ನನ್ನ ತುಂಗಭದ್ರೆಯನ್ನು ಅಪ್ಪ ಎಳ್ಕೊಂಡೋಗ್ತಾ ಅವ್ನೆ.... ಅಯ್ಯಯ್ಯೋ, ನೋಡವ್ವ ಎಳ್ಕೊಂಡೋಗ್ತಾ ಅವ್ನೆ' ಎಂದು ಕಿಟಾರನೆ ಕಿರಿಚಿಕೊಂಡಳು, ನಿದ್ದೆ ಮಾಡುತ್ತಿದ್ದ ಚೆನ್ನಿ.

ಅವಳನ್ನು ತಟ್ಟಿ ಸಮಾಧಾನ ಪಡಿಸುವ ಜನ ಯಾರೂ ಬಳಿ ಇರಲಿಲ್ಲ. ಅರ್ಧಾಂತಿಕವಾಗಿ ಕಟ್ಟಿದ್ದ ಅರೆ ಗೋಡೆಗಳುಳ್ಳ ತೊಟ್ಟಿ ಹಟ್ಟಿಯ ಹೆಂಚಿನ ಚಾವಣಿಯ ಮೂಲಕ ಚುಕ್ಕಿಗಳು ಕಾಣಿಸುತ್ತಿದ್ದವು. ಆ ಹಟ್ಟಿಯ ಮತ್ತೊಂದು ಭಾಗದಲ್ಲಿ ಹೆಣ್ಣು ಗಂಡುಗಳ ಪಿಸುದನಿಯೂ, ದನಗಳ ಕೋಡಣಿತದ ಸದ್ದೂ ಕೇಳಿಸುತ್ತಿದ್ದುವು. ಚೆನ್ನಿಯ ನರಳು ಕನವರಿಕೆಗಳು ಮಾತ್ರ ನಿಲ್ಲಲಿಲ್ಲ. ಮಕ್ಕಳು ಪಡೆದ ಯಾವ ಕರುಳಾದರೂ ಅದನ್ನು ಕೇಳಿದಾಗ ಚುರುಕೆನ್ನಬೇಕು.

ತುಸುಹೊತ್ತಾದನಂತರ ಪಕ್ಕದ ಮಠಾರದ ಲಿಂಗಯ್ಯ ಹರಕು ಈಚಲ ಚಾಪೆಯ ಮೇಲೆ, ಚಿಂದಿ ಹೊದ್ದು ಬಿದ್ದುಕೊಂಡಿದ್ದ ಚೆನ್ನಿಯ ಬಳಿ ಬಂದು 'ಯಾಕೆ ಮಗ? ಏನಾಯ್ತು?' ಎಂದು ಕೇಳಿದನು. ತೂಕಡಿಸುತ್ತಿದ್ದ ಸೀಮೆಯೆಣ್ಣೆ ಬುಡ್ಡಿಯ ನಸು ಬೆಳಕಿನಲ್ಲಿ ಮುಚ್ಚಿದ್ದ ಕಣ್ಣುಗಳಿಂದ ಹರಿಯುತ್ತಿದ್ದ ನೀರನ್ನವನು ಕಂಡು, ಅವಳ ಮೈ ಅಲುಗಾಡಿಸಿ 'ನಿಮ್ಮವ್ವ ಎಲ್ಲಿ, ಎಲ್ಲಿ ಹೋಗಾಯ್ತು?' ಎಂದನು.

ಚೆನ್ನಿ ಕಣ್ಣರಳಿಸಿ 'ಅವ್ವ, ಅವ್ವ, ನನ್ನ ತುಂಗಭದ್ರೆ ಎಲ್ಲಿ?' ಎಂದು ಕೂಗಿಕೊಂಡಳು.

'ನಾನು ಕಣಮ್ಮ; ನಿಮ್ಮವ್ವ ಎಲ್ಲಿ?' ಎಂದು ಲಿಂಗಯ್ಯ ಕೇಳಿದನು.

ಚೆನ್ನಿ ನೇರವಾಗಿ ಅವನ ಕಣ್ಣುಗಳಲ್ಲಿ ತನ್ನ ನೋಟನಾಟಿ 'ಅಯ್ಯೋ ಚಿಕ್ಕಪ್ಪ, ನೀನ್ಯಾಕೆ ಬಂದೆ? ಅಪ್ಪ ಕಂಡರೆ ಬಿಟ್ಟಾನೆ? ನನ್ನ ಹಸು ಒಡ್ಕೊಂಡು ಹೋದ. ಅಯ್ಯೋ ನನ್ನ ಹಸು ಬೇಕು. ನೀನು ಹೊರಟು ಹೋಗು' ಎಂದು ಮತ್ತೆ ಕಣ್ಣು ಮುಚ್ಚಿಕೊಂಡಳು.

'ನಿನ್ನಪ್ಪ ಇಲ್ವೆ?'

'ಎಲ್ಲೋದ್ನೋ ಕಾಣೆ.'

'ಒಂದಿಷ್ಟು ಅಂಬಲಿ ತರಲೆ?'

'ಅಪ್ಪಂಗೆ ಗೊತ್ತಾದ್ರೆ ಚರ್ಮ ಸುಲಿದು ಬಿಡ್ತಾನೆ.'

ಎರಡು ದಿನದಿಂದ ಒಲೆ ಬೆಂಕಿ ಕಂಡಿರಲಿಲ್ಲ. ಚೆನ್ನಿಯ ಅವ್ವ ನಿಂಗಮ್ಮ ಕೂಲಿ ನಾಲಿಗೂ ಹೋಗಿರಲಿಲ್ಲ. ಹಿಂದಿನ ದಿನ ಬೆಳಗ್ಗೆ ಈಯಲಿಗೆ ಬಂದಿದ್ದ ಹಸು

ಹೊಡೆದುಕೊಂಡು ಹೋಗಿದ್ದ ಅಪ್ಪ ಕಾಡಯ್ಯ ಮನೆಗೆ ಹಿಂದಿರುಗಿರಲಿಲ್ಲ. ಸಂಜೆಯ ಹೊತ್ತಿಗೆ ಹಸು ಬಾರದಿದ್ದಾಗ ಅವ್ವನಿಗೆ ಕಳವಳವಾಯಿತು. ಎಂಟು ವರ್ಷದ ಚೆನ್ನಿಗೆ ರಾತ್ರಿಯೆಲ್ಲ ಹಸುವಿನದೇ ಚಿಂತೆ. ಆ ಚಿಂತೆಯ ಕೆಂಡದಲ್ಲಿ ಅವಳ ಮೈ ಬೇಯುತ್ತಿತ್ತು. ನಿಂಗಮ್ಮ ಅವಳ ಬಳಿ ಕುಳಿತು, ಮೈ ತಟ್ಟುತ್ತ 'ಅಳ ಬೇಡ, ಕಂದ. ನೀ ನೊಬ್ಬೇ ನನ್ಗೆ ದಿಕ್ಕು. ನಿನ್ನೋಡ್ಕೊಂಡು ಜೀವ ಇಡ್ಕೊಂಡಿದ್ದೀನಿ' ಎಂದು ಗೋಳ್ಗರೆದಳು.

'ಅಂಥ ಚೆಂದುಳ್ಳ ಹಸು, ಅಜ್ಜ ಕೊಟ್ಟ ಹಸು ಮತ್ತೆ ಸಿಕ್ಕೀತೆ ಅವ್ವ? ಇನ್ನು ಮೇಲೆ ಯಾರ ಜತೇಲಿ ಹೊಲಕ್ಕೆ ಓಗ್ಲಿ, ಯಾರಾಗಿ ಹುಲ್ತರ್ಲಿ, ಯಾರ್ಹತ್ರ ಮಾತಾಡ್ಲಿ, ಯಾರ್ಸಂಗ್ಡ ಆಟ ಆಡ್ಲಿ? ಏಳೆಂಟು ದಿನದಲ್ಲಿ ಈಯ್ತದೆ, ಹಾಲು ಮೊಸರು ಕುಡೀಬೌದು; ಹಾಲು ಮಾರಿ ರವಿಕೆ ಲಂಗ ಒಲಿಸ್ಕೋಬೌದು; ಕರು ಸಂಗಡ ಮುದ್ದಾಡ್ಬೌದು, ಅಂದ್ಕೊಂಡಿದ್ದೆ' ಎಂದು ಚೆನ್ನಿ ಬಿಕ್ಕಿ ಬಿಕ್ಕಿ ಅತ್ತಳು. 'ಬೆಳಕ್ಹರಿದ್ಮೇಲೆ ನೋಡೂವ ಮಲೀಕೊ ಈಗ' ಎಂದು ಅವ್ವ ಮಗಳನ್ನು ಮುದ್ದಿಸಿ, ಅವಳ ಪಕ್ಕದಲ್ಲಿ ಮುದುರಿಕೊಂಡಳು.

ಹೊತ್ತು ಹುಟ್ಟಿ ನಾಲ್ಕಾಳುದ್ದ ಮೇಲೆ ಬಂದರೂ ಅವ್ವ ಮಗಳು ಮೇಲೇಳಲಿಲ್ಲ. ಎದ್ದು ಮಾಡುವುದೇನಿದೆ? ಮೇಯಿಸಲು ಹಸುವಿಲ್ಲ. ಬೇಯಿಸಲು ಹಿಟ್ಟಿಲ್ಲ; ಕೂಲಿಗೆ ಹೋಗಲು ಮನಸ್ಸಿಲ್ಲ. ಅವ್ವ ಮಕ್ಕಳಿಬ್ಬರೂ ಗುಬರುಹಾಕಿಕೊಂಡು, ನಡು ನಡುವೆ ಬಿಕ್ಕಿ ಬಿಕ್ಕಿ ಅಳುತ್ತ, ಸಂಜೆಯ ತನಕ ಬಿದ್ದುಕೊಂಡಿದ್ದರು. ಮಗಳು ನಿದ್ದೆ ಮಾಡುತ್ತಿದ್ದುದನ್ನು ನೋಡಿ ನಿಂಗಮ್ಮ ಬುಡ್ಡಿ ಹೊತ್ತಿಸಿಟ್ಟು ಬೀದಿಗೆ ನಡೆದಳು. ನೇರವಾಗಿ ಊರ ಗೌಡನ ಮನೆಗೆ ಹೋದಳು. ಗೌಡ ಜಗಲಿಯ ಮೇಲೆ ಕುಳಿತಿದ್ದ. ಚಿಂದಿಯ ಮೂಲಕ ಮೈ ಕಾಣುತ್ತಿದ್ದ, ಮುಖದ ಮೇಲೆ ಮುಸುಕು ಹಾಕಿಕೊಂಡು ನಿಂತಿದ್ದ ನಿಂಗಮ್ಮನನ್ನು ಕುರಿತು 'ಏನ್ಬಂದೆ, ನಿಂಗೀ?' ಎಂದು ಪ್ರಶ್ನಿಸಿದನು,

ನಿಂಗಮ್ಮ ದುಃಖೋದ್ವೇಗದಿಂದ 'ಏನ್ರಪ್ಪ, ಯಾಕ್ಬಂದೆ ಅಂತ ನಿಮಗರ್ಥವಾಗೊಲ್ವೆ?' ಎಂದು ಮಾತುಗಳಿಗೆ ತಡವರಿಸಿದಳು.

'ಮನೇಲಿ ಅಡುಗೆ ಕೆಲಸ ಮಾಡ್ಕೊಂಡಿರು ಅಂತ ಎಷ್ಟೋ ಸಾರಿ, ಹೇಳಿ ಕಳಿಸ್ದ್ರೇನು ಬರ್ದೇ ಇದ್ದೋಳು ಈಗ್ಬಂದೆಯಾ? ಈಗಲಾದ್ರೂ ಹೇಳು, ನಿನಗಿಷ್ಟವಿದೆಯೇನು?'

'ನಾವು ಬಡವರಪ್ಪ, ಕೂಲಿನಾಲಿ ಮಾಡ್ಕೊಂಡು ತಿನ್ತೀವಿ. ಇಲ್ದೇ ಇದ್ರೆ, ಹೊಟ್ಟೆ ಮೇಲೆ ತಣ್ಣೀರ್ಬಟ್ಟೆ ಹಾಕೊಂಡು ಮಲಗ್ತೀವಿ.'

'ನಿಮ್ಮಪ್ಪನಿಗೆ ಬುದ್ಧಿಯಿಲ್ಲ. ನಿನ್ನಂಥ ಗರತೀನ, ಚೆಲುವೀನ ಆ ಪೋಲೀಗೆ ಮದುವೆ ಮಾಡಿಕೊಡೋದೆ'?

'ನನ್ನಣೇಲಿ ಬರೆದದ್ದಕ್ಕೆ ಯಾರೇನು ಮಾಡ್ತಾರೆ? ನನ್ಗಂಡನ್ನ ಕೈಹಿಡಿದಾಗ ಆ ಮನೆ ಅನುಕೂಲವಾಗಿರ್ಲಿಲ್ವೆ? ಮದುವೆ ಯಾದ್ಮೇಲೆ ಮಗ ಸರಿಹೋಗ್ತಾನೆ ಅಂತ ಮಾವ ನಂಬಿದ್ರು; ನಮ್ಮಪ್ಪೂ ನಂಬಿದ್ರು. ಅದೆಲ್ಲ ಈಗ್ಯಾಕೆ ಬಿಡಿ. ನಮ್ಮ ಆಸ್ತೀನೆಲ್ಲ ನಿಮ್ಮ ಸುಫರ್ದಿಗೆ ತೆಗೆದುಕೊಂಡ್ರಿ. ಗೇಯ್ಮೋಕೆ ಅತ್ಕಂಟಿ ಹೊಲ ಇಲ್ಲ. ಅಷ್ಟಿಷ್ಟು ಚಿನ್ನ ಇತ್ತು. ಅದೂ ಹೋಯ್ತು. ಈ ಬೂವಿ ಮೇಲ್ಯಾಕಿರ್ಬೇಕಂತ ಅನ್ನಿಸ್ತದೆಕಣಪ್ಪ.'

ಗೌಡ ಮೂಗಿಗೆ ನಶ್ಯ ಏರಿಸುತ್ತ 'ಏನೆ, ಏನೇನೋ ಮಾತಾಡ್ತೀ. ನಿನ್ತಲೆ ಕೆಟ್ಟದೆ ಯೇನು? ನಿಮ್ಮ ಆಸ್ತಿ ನಾನೇನೂ ಬಿಟ್ಟಿ ಹೊಡ್ಕೊಂಡಿದ್ದೀನಿ ಅಂತ ತಿಳಿದಿದ್ದೀಯಾ? ನಿನ್ಗಂಡ್ನಂಗೆ ನಾನೇನೂ ಜೂಜು ಆಡೋಲ್ಲ; ಮೂರು ಹೊತ್ತು ಹೆಂಡದಂಗಡೀಲಿ ಕುಳಿತಿರೋಲ್ಲ. ಸಾಲಗಾರರು ಹೆಂಡದಂಗಡಿಯೋರು ಮಾನಮರ್ಯಾದೆ ಕಳೆಯುವಾಗ ಬರ್‍ತಾನೆ, ಹಲ್ಗಿಂಜ್ತಾನೆ, ಕಾಲಿಗೆ ಬೀಳ್ತಾನೆ, ಅವನ ಗೋಳು ನೋಡಲಾರ್ದೆ ಹಣ ಕೊಡ್ತೀನಿ. ನನ್ನ ಹಣ ಜೂಜಿನಲ್ಲಿ ಸಂಪಾದನೆ ಮಾಡಿದ್ದಲ್ಲ; ಅವರಿವರ ಹತ್ರ ಹೊಡ್ಕೊಂಡು ಬಂದದ್ದಲ್ಲ. ಕಷ್ಟಪಟ್ಟು ಸಂಪಾದನೆ ಮಾಡಿದ್ದು, ತಿಳೀತೆ. ಸಾಲ ತೀರಿಸಲಾರ್ದೆ ಇದ್ದಾಗ ನಿನ್ಗಂಡನೇ ಆಸ್ತಿ ನನಗೆ ಬರೆಸಿದ. ಅದು ತಪ್ಪೆ? ಈಗಲಾದ್ರೂ ನನ್ನ ದುಡ್ಡು ತಂದುಕೊಡು. ಆಸ್ತಿ ಹಿಂದಕ್ಕೆ ಬರ್ಕೊಟ್ಟು ಬಿಡ್ತೀನಿ.'

'ಆ ಆಸ್ತಿ ನಮ್ಗೆ ಬೇಡ್ರಪ್ಪ. ನಿಮ್ಮಂಥವರ ಮನೇಲಿ ಕೂಲಿನಾಲಿ ಮಾಡ್ಕೊಂಡ್ ಬದಕ್ತೀವಿ. ಅವರಿಗೆ ಒಂದಿಷ್ಟು ಬುದ್ಧಿ ಹೇಳಿ.'

'ಓಹೋ, ನಿನ್ಗಂಡನೆ ಬುದ್ಧಿ ಹೇಳಿದರೆ ಕೇಳೋನು, ಹೋಗು, ಹೋಗೆ.'

'ನಿನ್ನೆ ದಿನ ಗಬ್ಬದ ಹಸು ಒಂದಿತ್ತು, ಅದನ್ನೂ....'

'ನಾನೇನೂ ಕೊಡು ಅಂತ ಕೇಳ್ಲಿಲ್ಲ ಕಣೆ; ಅವನೇ ಹೊಡ್ಕೊಂಡು ಬಂದು ಬಿಟ್ಟು, ನೂರು ರೂಪಾಯಿ ಈಸಿಕೊಂಡು ಹೋದ.'

ನಿಂಗಮ್ಮನ ಕಣ್ಣಿಗೆ ಕತ್ತಲೆ ಕವಿದಂತಾಯಿತು; ಕಂಠ ಗದ್ಗದಿಸಿತು. 'ಅದು ನನ್ಮಗಳು ಮೇಯಿಸ್ತಾ ಇದ್ದದ್ರಪ್ಪ. ಅದು ಅಂದ್ರೆ ಅವಳಿಗೆ ಪ್ರಾಣ. ನನ್ನ ಕಿವಿ ವಾಲೆ ಹೋದಾಗ ನಾನು ಚಿಂತಿಸಲಿಲ್ಲ. ಕೂಲಿನಾಲಿ ಮಾಡಿ ತೀರಿಸ್ತೀನಿ, ಹಸು ಬಿಟ್ಟು ಕೊಡ್ರಪ್ಪ. ಅದಿಲ್ಲ ಅಂದ್ರೆ ನನ್ಮಗ್ಳು ಸತ್ತೋಗ್ತದೆ ಕಣ್ರಪ್ಪ.'

'ನೋಡು ನಿಂಗಿ, ನಿನ್ನ ಮೈದುನ ನೋಡು, ಹೇಗೆ ಬದುಕ್ತಾ ಅವ್ನೆ. ಅವನು ಎಂಥಾದ್ದೂ ಕೆಟ್ಟ ಚಾಳಿ ಕಲಿತಿಲ್ಲ. ಆಸ್ತಿ ಕಳ್ಕೊಳ್ಳಿಲ್ಲ. ನಿನ್ಗಂಡ ನಿನ್ನ ಮಾರೋದೊಂದೇ ಉಳಿದಿರೋದು. ನೀನು ತೆಪ್ಪಗೆ ನಮ್ಮನೇಲಿ ಅಡುಗೆ ಮಾಡ್ಕೊಂಡಿದ್ದುಬಿಡು. ನಿನ್ಗಂಡನ್ನ ನಾನ್ ವಿಚಾರಿಸ್ಕೋತೀನಿ.'

ನಿಂಗಮ್ಮ ಗೌಡನ ಮಾತಿನ ದಾಟಿಯಿಂದ ಕಳವಳಗೊಂಡು ನಿರುತ್ತರಳಾದಳು. ಅಲ್ಲಿಯೇ ನಿಂತದ್ದಾದರೆ ಅಪಾಯ ಸಂಭವಿಸಬಹುದೆಂದು ತಿಳಿದು, ಮರುಮಾತಾಡದೆಯೆ ಮನೆಗೆ ಹಿಂದಿರುಗಿದಳು.

ಅವಳು ಒಳಗೆ ಕಾಲಿಡುತ್ತಿದ್ದಂತೆಯೇ ಮಗಳ ಬಳಿ ಕುಳಿತಿದ್ದ ಲಿಂಗಯ್ಯ ಬಿರುಬಿರನೆ ತನ್ನ ಹಜಾರದ ಕಡೆಗೆ ಹೆಜ್ಜೆಯಿಡಲನುವಾದನು. 'ಏಕೆ ಮೊಗ, ಓಡೋಗ್ತೀಯೆ?' ಎಂದು ನಿಂಗಮ್ಮ ಅವನನ್ನು ಕೇಳಿದಳು.

'ಚೆನ್ನಿ ಅಳ್ತಾ ಇದ್ದಳು. ಸಮಾಧಾನ ಮಾಡೋಣ ಅಂತ ಬಂದೆ.'

ಅಷ್ಟರಲ್ಲಿ ಚೆನ್ನಿ ಕಣ್ಣು ಬಿಟ್ಟು ಹಸು ಇಡ್ಕೊಂಡು ಬಂದೆಯಾ; ಅದೆಲ್ಲಿದೆ, ಅವ್ವ?' ಎಂದು ಕಿರಿಚಿಕೊಂಡಳು. 'ನನ್ನ ಮುದ್ದು ಹಸು, ನನ್ನ ತುಂಗೆ ಎಲ್ಲವ್ವ?' ಎಂದು ಗೋಳ್ಗರೆಯಲಾರಂಭಿಸಿದಳು.

'ಅಳ್ಬೇಡ, ಕಂದ. ಇನ್ನೊಂದು ಹಸು ತರ್‍ತೀನಿ.'

'ನನ್ನ ತುಂಗಭದ್ರೇನೇ ಬೇಕು. ಅಜ್ಜಿ ಕೊಟ್ಟ ಹಸೂನೇ ಬೇಕು.'

'ಬೆಳಗಿನಿಂದ ಹೊಟ್ಟೆಗೇನೂ ತಿಂದಿಲ್ಲ ಅಂತ ಕಾಣ್ತದೆ. ಏನಾದ್ರೂ ತಂದು ಕೊಡ್ತೀನಿ, ಅತ್ತಿಗೆ' ಎಂದು ಲಿಂಗಯ್ಯ ಹೊರಡುತ್ತಿದ್ದಂತೆ ಹೊರಗಿನಿಂದ ಚೀರಾಟ ಕೂಗಾಟ ಕೇಳಿಸಿದುವು. 'ಈ ರಂಡೆ ಎಲ್ಲಿ ದ್ದಾಳೋ ಕಾಣೆ. ಲೇ, ಲೇ ಮುಂಡೆ' ಎಂದು ಕೂಗುತ್ತ ತೊದಲುತ್ತ ಕಾಡಯ್ಯ ಜೋರು ಜೋರಾಗಿ ಒಳಗೆ ನುಗ್ಗಿದ. ಲಿಂಗಯ್ಯ ಸರ ಸರನೆ ಕಾಲುಕಿತ್ತ. ಅವನ ನೆರಳನ್ನು ಕಂಡ ಕಾಡಯ್ಯ 'ಲೇ, ಅವನ ಜತೇಲಿ ಏನ್ಮಾಡ್ತಿದ್ದೆ, ಹಾದರಗಿತ್ತಿ?' ಎಂದು ಹೆಂಡತಿಯ ಕುರುಳು ಹಿಡಿದು ದರದರನೆ ಎಳೆಯುತ್ತ, ಬೆನ್ನ ಮೇಲೆ ಗುದ್ದಿದ. ಕುಡಿದ ಹೊತ್ತಿನಲ್ಲಿ ಅವನ ಅವಾಚ್ಯ ಶಬ್ದಗಳನ್ನು ಕೇಳಬೇಕಾದೀತೆಂದು ಲಿಂಗಯ್ಯ ಹಿಂದಿರುಗಿ ನೋಡದೆ, ತನ್ನ ಕೋಣೆಯೊಳಗೆ ಹೋಗಿ, ಒಳಗಣಿಂದ ತಾಳು ಹಾಕಿಕೊಂಡ.

'ಅಯ್ಯೋ ದೇವರೆ, ಇನ್ನೇನು ಗತಿ? ಚೆನ್ನಾಗಿ ಕುಡಿದು ಬಂದು ಬಿಟ್ಟವ್ನಲ್ಲ' ಎಂದು ನಿಂಗಮ್ಮ ಕೂಗಿಕೊಂಡಳು. ಅವಳ ಮಾತುಮಾತಿಗೂ ಅವನು ಗುದ್ದುತ್ತಿದ್ದ. 'ಬಂದ ಕೂಡಲೇ ಊಟ ಹಾಕ್ದೆ ಏನೇನೊ ಹರಟ್ತಾ ಇದ್ದೀಯೆ, ಲೌಡಿ' ಎಂದು ಹಲ್ಲು ಕಡಿದನು. ಏನಾದರೂ ಕಾಳು ಕಡ್ಡಿ ಇದ್ದರಲ್ವೆ ಅಡುಗೆ ಮಾಡಿ ಬಡಿಸೋದು.' 'ಬಗುಳೆ, ತಂಗ್ಳು ಗಿಂಗ್ಲು ಉಂಟೋ ಇಲ್ಲವೋ' ಎಂದವನು ಒರಲಾಡಿದ. 'ಸಾಮಾನಿರಲಿಲ್ಲ, ಅಡುಗೆ ಮಾಡ್ಲಿಲ್ಲ!' 'ಬೆಳಗ್ಗೆಯಿಂದ ಕೆಲಸಕ್ಕೆ ಹೋಗ್ಲಿಲ್ವ?' 'ಮಗುವಿಗೆ ಜ್ವರ, ಹೋಗ್ಲಿಲ್ಲ' ಎನ್ನುತ್ತಿರುವಾಗ ಚೆನ್ನಿ 'ಅವ್ವ, ನನ್ನ ಹಸು ಎಲ್ಲಿ? ಅಪ್ಪ ಹೊಡೀತಾನೆ' ಎಂದು ಕೂಗಿಕೊಂಡಳು.

'ಥೂ ಇವಳು ಹಾಳಾಗ. ಇದೊಂದು ಪಿಶಾಚಿ' ಎಂದು ಕಾಡಯ್ಯ ಬಯ್ಗುಳ ಸುರಿಯಲಾರಂಭಿಸಿದ. 'ನಿನ್ನ ದಮ್ಮಯ್ಯ, ಕಾಲಿಗೆ ಬೀಳ್ತೀನಿ. ಆ ಕಂದನನ್ನು ಬಯ್ಯ್ ಬೇಡಿ. ನನ್ನ ಬೇಕಾದರೆ ಸಿಗಿದು ಬಿಡಿ. ಎಲ್ಲ ಕಳಕೊಂಡಿನಿ. ಇದೊಂದು ಮಾತ್ರ ಉಳಿದಿದೆ. ಅದೇ ನನ್ನ ಪ್ರಾಣ. ದೇವರೇ, ನಿನ್ಗೂ ದಯೆಯಿಲ್ಲವೆ? ನನ್ಗಂಡನ್ನ ಕೆಟ್ಟ ಚಾಳಿಯಿಂದ ಪಾರು ಮಾಡಪ್ಪ' ಎಂದು ಮಗುವನ್ನು ರಕ್ಷಿಸುವ ಸಲುವಾಗಿ ಎಂಬಂತೆ, ಅವಳನ್ನು ಕವುಚಿಕೊಂಡಳು.

ಕಾಡಯ್ಯ ತುಸು ಹೊತ್ತು ಅವರಿಬ್ಬರ ಕಡೆಗೆ ನೋಡುತ್ತಿದ್ದ. 'ಅವ್ವ, ನನ್ನ ಹಸು ಎಲ್ಲವ್ವ? ಅದರ ಜತೇಲಿ ನಾನೂ ಹೋಗ್ತೀನವ್ವ. ಅಪ್ಪ ಕುಡಿದು ಬಂದವ್ನೆ ಕಣವ್ವ' ಎಂದು ಚೆನ್ನಿ ಕಣ್ಣು ಬಿಟ್ಟು ಅವನ ಕಡೆಗೆ ನೋಡಿದಳು. ಕಾಡಯ್ಯ ಕೋಪಾರೂಢನಾಗಿ, ಹೆಂಡತಿಯನ್ನು ಕೈಹಿಡಿದೆಳೆದು ಪಕ್ಕಕ್ಕೆ ಉರುಳಿಸಿದ. ಮಗಳನ್ನು ಮೇಲಕ್ಕೆತ್ತಿ 'ನೀನು ಚೋಟುದ್ದ ಇದ್ದೀಯೆ. ನೀನೂ ನನ್ನನ್ನ ಆಡ್ಕೋತೀಯ?' ಎಂದು ಕೂಗಿ, ಕೆಳಕ್ಕೆ ಬಿಸಾಡಿದನು. ಮಗುವಿನ ತಲೆ ಗೋಡೆಗೆ ಬಡಿಯಿತು. 'ಅವ್ವ, ಸತ್ತನಲ್ಲೆ. ನನ್ನ ಹ....ಸು....ಎ....ಲ್ಲೆ? ತುಂಗೀ....' ಎಂದು ಚೆನ್ನಿ ತೊದಲಿದಳು 'ಅಯ್ಯೋ ನನಗಿನ್ನಾರು ಗತಿ? ಸಾಕು ಮಾಡಪ್ಪ, ದೇವರೆ, ನನ್ನೂ ನಿನ್ಪಾದಕ್ಕೆ ಕರಕೋಪ್ಪ' ಎಂದು ನಿಂಗಮ್ಮ ಎದೆ ಬಡಿದುಕೊಂಡಳು. ಕಾಡಯ್ಯನ ಹೊಡೆತದ ರಭಸಕ್ಕೆ ಹಣತೆ ಆರಿತು; ಅವನು ಹೊರಗೆ ನಡೆದ.

# ಪ್ರಿಸನ್ ಐಲೆಂಡಿನ ಸಂಚಯ

ಟಿ. ಆರ್. ನಾಗಪ್ಪ

ಜಾಂಜಿಬಾರು ಟಾನ್ಜೇನಿಯ ಗಣ ರಾಜ್ಯಕ್ಕೆ ಸೇರಿದ್ದು. ಅದು ಮೊದಲು ಒಂದಲ್ಲಾ ಒಂದು ರಾಷ್ಟ್ರದ ಆಡಳಿತಕ್ಕೆ ಒಳಪಟ್ಟಿತ್ತು. ಶಿರಾಜಪರ್ಷಿಯನ್ನರು ಮತ್ತು ಒಮಾನಿ ಅರಬ್ಬರು ಜಾಂಜಿಬಾರಿನಲ್ಲಿ ನೆಲಸಿದ್ದರು. ರಾಜ್ಯದ ಆಡಳಿತ ಸೂತ್ರ ಹಿಡಿದರು. ಅವರು ೧೯೬೩ರಲ್ಲಿ ಆಫ್ರೊಶಿ ರಾಜಪಕ್ಷವನ್ನು ಕಟ್ಟಿ ಅಲ್ಲಿದ್ದ ಸುಲ್ತಾನನನ್ನು ಅಧಿಕಾರದಿಂದ ಇಳಿಸಿದರು. ಮೇಲೆ ಹೇಳಿದಂತೆ ೧೯೬೪ರಲ್ಲಿ ಜಾಂಜಿಬಾರು ಟಾನ್ಜೇನಿಯ ಗಣರಾಜ್ಯದಲ್ಲಿ ವಿಲೀನ ಆಯಿತು. ರಕ್ಷಣೆ ಮತ್ತು ವಿದೇಶಾಂಗ ಟಾನ್ಜೇನಿಯದ ಹೊಣೆ ಆಂತರಿಕ ಪ್ರಜಾ ರಾಜ್ಯದ ಆಡಳಿತ ಜಾಂಜಿಬಾರಿನ ಕೈನಲ್ಲಿದೆ. ಟಾನ್ಜೇನಿಯ ಗಣರಾಜ್ಯದ ಲೋಕ ಸಭೆಗೆ ಜಾಂಜಿಬಾರ ೧೦ ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು. ನ್ಯಾಯಾಲಯದಲ್ಲಿ ಸೇಕಡ ೫೦ ಮಂದಿ ನ್ಯಾಯಾಧೀಶರು ಜಾಂಬಿಯಾದವರು.

ಜಾಂಜಿಬಾರು ಬಂದರಿಂದ ಒಂದು ಕಾಲಕ್ಕೆ ಪ್ರತಿ ವರ್ಷ ಐವತ್ತು ಸಾವಿರ ಮಂದಿ ಗುಲಾಮರು ಹೊರ ದೇಶಗಳಿಗೆ ರವಾನೆ ಆಗುತ್ತಿದ್ದರು. ಯೂರೋಪಿಯನ್ನರ ವಲಸೆಗೆ ಮುನ್ನ ಇದೊಂದು ಗುಲಾಮರ ಪ್ರಸಿದ್ಧ ವ್ಯಾಪಾರ ಕೇಂದ್ರ ಆಗಿತ್ತು. ಗುಲಾಮರ ವ್ಯಾಪಾರ ಅನಾಗರೀಕ ಮತ್ತು ಕ್ರೂರ. ಅನೇಕ ಗುಲಾಮರು ಚಿತ್ರಹಿಂಸೆಗೆ ಗುರಿ ಆಗಿದ್ದರು. ಒಬ್ಬ ಗುಲಾಮ ಜಾಂಜೀಬಾರು ತಲುಪುವ ವೇಳೆಗೆ ಹತ್ತು ಮಂದಿ ಸಾವಿಗೆ ಬಲಿಯಾಗುತ್ತಿದ್ದರು. ತಾಯಂದಿರು ತಮ್ಮ ಕೈನಲ್ಲಿದ್ದ ಮಕ್ಕಳನ್ನು ಪ್ರಯಾಣದಲ್ಲಿ ತಾವೇ ಭರ್ಜಿಯಿಂದ ಕೊಲ್ಲುವ ಪರಿಸ್ಥಿತಿ ಒದಗುತ್ತಿತ್ತು. ಆಫ್ರಿಕಾದಿಂದ ದಂತ ಹೊರ ದೇಶಗಳಿಗೆ ಹೋಗುತ್ತಿತ್ತು. "ದಂತ ಮೊದಲು, ನಂತರ ಮಕ್ಕಳು" ಎಂಬುದು ಅಂದಿನ ವ್ಯಾಪಾರ ಧರ್ಮ ಆಗಿತ್ತು.

ಗುಲಾಮರ ವ್ಯಾಪಾರ ಬ್ರಿಟಿಷರಿಗೆ ಲಾಭದಾಯಕ ಆಗಿತ್ತು. ಕ್ರಮೇಣ ದುಸ್ಥಿತಿಯ ಒತ್ತಡದ ಪರಿಣಾಮವಾಗಿ ಅವರು ಗುಲಾಮಿ ವ್ಯಾಪಾರವನ್ನು ನಿಲ್ಲಿಸಿದ್ದು ಒಂದು ವಿಪರ್ಯಾಸವೇ ಸರಿ.

ಇಂದಿಗೂ ಜಾಂಜಿಬಾರು ಒಂದು ವ್ಯಾಪಾರ ಕೇಂದ್ರ-ಗುಲಾಮರಿಗಲ್ಲ. ಟಾನ್ಜೇನಿಯ ಮತ್ತು ಇತರ ಪ್ರದೇಶಗಳಿಂದ ಜನರು ವ್ಯಾಪಾರಕ್ಕೆ ಜಾಂಜಿಬಾರಿಗೆ ಹೋಗುವರು. ಉದಾಹರಣೆಗೆ, ಜಾಂಜಿಬಾರಿನಲ್ಲಿ ಒಂದು ಜೊತೆ ಬೂಡ್ಸಿನ ಬೆಲೆ

೬,೦೦೦ ಷಿಲಿಂಗ್ ಅದರ ಬೆಲೆ ದರಾಸಲಂನಲ್ಲಿ ೧೦,೦೦೦೦ ಷಿಲಿಂಗ್. ದೂರದರ್ಶನ ಮುಂತಾದ ವಿದ್ಯುತ್ ಉಪಕರಣಗಳು (Electronic goods) ಜಾಂಜಿಬಾರಿನಲ್ಲಿ ಕಡಿಮೆ ಬೆಲೆಗೆ ಸಿಗುವುವು.

೧೮೧೫ ರಲ್ಲಿ ಸುಲ್ತಾನನ ಕಾಲದಲ್ಲಿ ಲವಂಗದ ಮರವನ್ನು ನೆಟ್ಟರು. ಇಂದು ಅಲ್ಲಿ ಲವಂಗದ ಬೆಳೆ ವಾಣಿಜ್ಯ ಬೆಳೆ. ವಿಶ್ವದ ಉತ್ಪನ್ನದಲ್ಲಿ ಸೇಕಡ ೭೫ ಭಾಗ ಇಲ್ಲಿಂದ ಹೊರಕ್ಕೆ ರಫ್ತಾಗುವುದು.

ಹಲವಾರು ಭಾರತೀಯರು ಸುಮಾರು ಮುನ್ನೂರು ವರ್ಷಗಳಿಂದ ಜಾಂಜಿಬಾರಿನಲ್ಲಿ ನೆಲಸಿರುವರು ಅರಬ್ಬರು ಮಾತ್ರ ಇಲ್ಲಿಯ ಜನತೆಯೊಂದಿಗೆ ಬೆರೆತು ಒಂದಾಗಿರುವರು. ಇಲ್ಲಿಯ ರಸ್ತೆಗಳು ಇಕ್ಕಟ್ಟಾಗಿ ಗಲ್ಲಿಗಳಂತೆ ಇವೆ. ಆದರೆ ಅವು ದರಾಸಲಂ ರಸ್ತೆಗಳಿಗಿಂತ ಚೆನ್ನಾಗಿದೆ.

ಅಮೆರಿಕನ್ನರಿಂದ ಸ್ಥಾಪಿಸಲ್ಪಟ್ಟ ಮಲೇರಿಯ ಕೇಂದ್ರ ಇಲ್ಲಿದೆ. ಅಲ್ಲಿ ಮಲೇರಿಯ ರೋಗಿಗಳಿಗೆ ಮುಫತ್ತಾಗಿ ಪರೀಕ್ಷೆ ಮಾಡುವರು.

ದರಾಸೆಲಂನಿಂದ ಜಾಂಜಿಬಾರಿಗೆ ವಿಮಾನ ಇಲ್ಲವೇ ಸಮುದ್ರ ಯಾನ ಮಾಡಬೇಕು. ಒಂದು ಕಾಲದಲ್ಲಿ ಭಾರತದಲ್ಲಿ ಸಮುದ್ರ ಯಾನ ಮಾಡಿದವರಿಗೆ ಬಹಿಷ್ಕಾರ ವಿಧಿಸುತ್ತಿದ್ದರು. ಸುಮಾರು ೬೦ ವರ್ಷಕ್ಕೂ ಹಿಂದೆ ಹಳೆಯ ಮೈಸೂರು ಸಂಸ್ಥಾನದಿಂದ ಒಬ್ಬ ವೈದ್ಯರು ವೈದ್ಯ ಶಾಸ್ತ್ರದಲ್ಲಿ ಹೆಚ್ಚಿನ ಪರಿಣಿತಿಯನ್ನು ಪಡೆಯಲು ಸಮುದ್ರ ಯಾನ ಮಾಡಿ ಇಂಗ್ಲೆಂಡಿಗೆ ಹೋದರು. ತಮ್ಮ ಅಧ್ಯಯನದ ನಂತರ ಮೈಸೂರಿಗೆ ವಾಪಸಾದರು. ಅವರ ನೆಂಟರಿಷ್ಟರು ಅವರಿಗೆ ಬಹಿಷ್ಕಾರ ಹಾಕಿದರು. ಸಹಪಂಕ್ತಿ ಭೋಜನವನ್ನು ಅವರಿಗೆ ಕೊಡಲಿಲ್ಲ. ಆಗ ಅವರು ಪುರೋಹಿತರ ಮೊರೆ ಹೊಕ್ಕರು. ಅವರು ಎಲ್ಲವನ್ನು ಸರಿಪಡಿಸಿದರು. ಅನಂತರ ಅವರು ತಮ್ಮ ನೆಂಟರಿಷ್ಟರಿಗೆ ಚಿರೋಟಿ ಚೊಕ್ಕ ಭೋಜನ ವ್ಯವಸ್ಥೆ ಮಾಡಿದರು. ಹಿಂದೆ ಬಹಿಷ್ಕಾರ ಹಾಕಿದ್ದವರು ಭೋಜನ ಕೂಟದಲ್ಲಿ ಪಾಲುಗೊಂಡು ತೃಪ್ತಿಯಾಗಿ ಭೋಜನ ಮಾಡಿದರು.

ವಿಮಾನ ಪ್ರಯಾಣ ಮಾಡಿದವರಿಗೆ ಬಹಿಷ್ಕಾರ ಹಾಕಿದ್ದನ್ನು ನಾನು ಕೇಳಿಲ್ಲ ಹಾಗೂ ಕಂಡಿಲ್ಲ. ಕಾರಣ ದೇವಾನುದೇವತೆಗಳು ಪುಷ್ಪಕ ವಿಮಾನದಲ್ಲಿ ಪ್ರಯಾಣ ಮಾಡಿರುವ ನಿದರ್ಶನಗಳಿವೆ. ರಾಕ್ಷಸ ರಾಜನಾದ ರಾವಣನ ಹತ್ತಿರ ವಿಮಾನ ಇತ್ತಂತೆ. ರಾಮ ರಾವಣನನ್ನು ಸಂಹರಿಸಿದನು. ಅನಂತರ ಅವನು ಸೀತೆ, ಲಕ್ಷ್ಮಣ ಮತ್ತು ಇತರ ಇಷ್ಟ ಮಿತ್ರರೊಂಗಿಗೆ ಲಂಕೆಯಿಂದ ಅಯೋಧ್ಯೆಗೆ ಪುಷ್ಪಕ ವಿಮಾನದಲ್ಲಿ ಪ್ರಯಾಣ ಮಾಡಿದನಷ್ಟೆ. ಅದರಿಂದ ವಿಮಾನಯಾನಕ್ಕೆ ಬಹಿಷ್ಕಾರ ಇಲ್ಲ. ವಿಮಾನ ಪ್ರಯಾಣ ಮಾಡುವವರು ಶ್ರೀಮಂತರು ಪ್ರಾಯಶಃ ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿದವರು ಇರಬೇಕು.

ದರಾಸೆಲಂನಿಂದ ಜಾಂಜಿಬಾರಿಗೆ ವಿಮಾನ ಪ್ರಯಾಣ ಮಾಡುವಷ್ಟು ದೂರ ಇಲ್ಲ. ಸಮುದ್ರಯಾನ ಒಂದು ಹೊಸ ಅನುಭವ. ಅದರಿಂದ ನಮ್ಮ ಸಂಸಾರದವರು ಹಡಗಿನಲ್ಲಿ ಜಾಂಜಿಬಾರಿಗೆ ಹೊರಟೆವು. ಪ್ರಯಾಣದ ಅವಧಿ ಕೇವಲ ಒಂದೂವರೆ ಗಂಟೆ. ಪ್ರಯಾಣದ ಶುಲ್ಕ ಒಬ್ಬನಿಗೆ ೫,೦೦೦ ಷಿಲಿಂಗ್ ಅಂದರೆ ೫೩೪ ರೂಪಾಯಿಗಳು (೧೫

ಷಿಲಿಂಗಿಗೆ ಒಂದು ರೂಪಾಯಿ) ಮಧ್ಯಾಹ್ನ ಹೊರಟಾಗ ೪-೧೫ ಗಂಟೆ ಪ್ರಯಾಣದ ಅನುಭವ ಚೆನ್ನಾಗಿತ್ತು. ಕೆಲವು ವೇಳೆ ಅಲೆಗಳ ಹೊಡೆತದ ಶಬ್ದ ಗಾಬರಿ ಉಂಟು ಮಾಡುತ್ತಿತ್ತು. ಅದನ್ನು ಕಿಟಕಿಯಿಂದ ನೋಡಬಹುದಾಗಿತ್ತು. ಅನೇಕರು ಹಡಗಿನ ಮೇಲೆ ನಿಂತು ವಿಶಾಲವಾದ ಸಮುದ್ರದ ಅಲೆಗಳನ್ನು ನೋಡಿ ಆನಂದಿಸುತ್ತಿದ್ದರು. ಸಂಜೆಯ ವೇಳೆ ಸಮುದ್ರದ ಉಬ್ಬರ ವಿಳತ ಹೆಚ್ಚಲ್ಲದೆ? ಪ್ರಯಾಣದಲ್ಲಿ ನಮಗೆ ಯಾರಿಗೂ ವಾಂತಿ ಆಗಲಿಲ್ಲ. ವಾಂತಿಯನ್ನೂ ತಡೆಯಲು ತೆಗೆದುಕೊಂಡು ಹೋಗಿದ್ದ ಮಾತ್ರೆಗಳು ಉಪಯೋಗಕ್ಕೆ ಬರಲಿಲ್ಲ. ಸಂಜೆ ೫-೪೫ ಗಂಟೆಗೆ ಜಾಂಜಿಬಾರು ತಲುಪಿದೆವು.

ಜಾಂಜಿಬಾರು ಬಂದರಿನಿಂದ ನಮ್ಮ ಹೊಟೇಲಿಗೆ ಕೇವಲ ಐದು ನಿಮಿಷದ ಪ್ರಯಾಣ. ಈ ಹೊಟೇಲು ಮಾರುಕಟ್ಟೆಯ ಮಧ್ಯದಲ್ಲಿದೆ. ಅದರಿಂದ ಆ ಪ್ರದೇಶ ಮಾರುಕಟ್ಟೆಯ ಗಲೀಜಿನಿಂದ ತುಂಬಿತ್ತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಗಲೀಜಿನ ಮಧ್ಯೆ ಇದ್ದ ನಮ್ಮ ಹೊಟೇಲಿನ ಒಳಗಡೆ ಚೆನ್ನಾಗಿತ್ತು. ಅಲ್ಲಿ ನಾಲ್ಕನೆಯ ಮಹಡಿಯಲ್ಲಿ ಎರಡು ಕೊಠಡಿಗಳನ್ನು ಪಡೆದೆವು. ಒಂದೊಂದು ಕೊಠಡಿಯ ಬಾಡಿಗೆ ದಿನಕ್ಕೆ ಹತ್ತು ಸಾವಿರ ಷಿಲಿಂಗ್.

ನನಗೆ ಇಲ್ಲಿಗೆ ಬಂದಿದ್ದು ಒಂದು ರೀತಿಯಲ್ಲಿ ಸಂತೋಷ ಆಗಿತ್ತು. ದರಾಸಲಂನಲ್ಲಿ ನನ್ನ ಮಗನ ಮನೆ ೧೫ ಮಹಡಿಗಳ ಕಟ್ಟಡದಲ್ಲಿ ಇದೆ. ಅವನು ಇರುವುದು ಎಂಟನೆಯ ಮಹಡಿ. ಅಲ್ಲಿ ವಿದ್ಯುಚ್ಛಕ್ತಿಯಿಂದ ಚಾಲನೆ ಆಗುವ ಲಿಫ್ಟ್ ಇತ್ತು. ಅನೇಕ ವೇಳೆ ಲಿಫ್ಟ್‌ನಲ್ಲಿ ಹೋಗುವಾಗ ವಿದ್ಯುಚ್ಛಕ್ತಿ ನಿಂತು ತೊಂದರೆ ಆಗುತ್ತಿತ್ತು. ಒಂದು ಬಾರಿ ಎಂಟನೆಯ ಮಹಡಿಯಿಂದ ಲಿಫ್ಟ್‌ನಲ್ಲಿ ಇಳಿಯುವಾಗ ಎರಡನೆಯ ಮಹಡಿ ತಲುಪುವ ವೇಳೆಗೆ ವಿದ್ಯುಚ್ಛಕ್ತಿ ಐದು ನಿಮಿಷ ಕೈಕೊಟ್ಟಿತು. ಆಗ ಮೈಸೂರಿನ ಜ್ಞಾಪಕ ಬಂತು. ಎರಡನೆಯದಾಗಿ ನನ್ನ ಮನೆಯ ಸ್ನಾನದ ತೊಟ್ಟಿಯಲ್ಲಿ ಸ್ನಾನ ಮಾಡುವುದು ತಪ್ಪಿತ್ತು. ಕಾರಣ ಅದರಲ್ಲಿ ಸ್ನಾನ ಮಾಡುವುದು ಒಂದು ರೀತಿಯಲ್ಲಿ ಸಾಹಸ ಕಾರ್ಯ ಆಗಿತ್ತು. ಸ್ನಾನದ ತೊಟ್ಟಿ (bath tub, ಸುಮಾರು ಎರಡಡಿ ಎತ್ತರ ಇತ್ತು. ಸ್ನಾನ ಮಾಡುವಾಗ ಅದರಲ್ಲಿ ಇಳಿಯುವುದು ಮತ್ತು ಹೊರಗೆ ಬರುವುದು ನನಗೆ ಪ್ರಯಾಸ ಆಗಿತ್ತು. ಕೆಲವು ಬಾರಿ ತೊಟ್ಟಿಯಲ್ಲಿ ಜಾರಿ ಬಿದ್ದಿದ್ದೇನೆ. ಎದ್ದ ಹೊತ್ತು, ಗ್ರಹಚಾರಕ್ಕೆ ಏನು ಆಗಲಿಲ್ಲ. ಬಿದ್ದ ಶಬ್ದ ಕೇಳಿ ನನ್ನ ಮಗ ಮತ್ತು ಸೊಸೆ ಗಾಬರಿಯಾಗಿ ಬಚ್ಚಲು ಮನೆಗೆ ಓಡಿ ಬಂದರು. ಬಚ್ಚಲು ಮನೆಗೆ ಒಳಗಿನಿಂದ ಚಿಲಕ ಹಾಕದಂತೆ ನನಗೆ ತಿಳಿಸಿದರು. ದರಾಸಲಂನಲ್ಲಿ ಇರುವವರಿಗೆ ಅವರ ಸೂಚನೆಯನ್ನು ಪರಿಪಾಲಿಸಿದೆ.

ವಾಷಿಂಗ್‌ಟನ್ನಿನಲ್ಲಿ ಸ್ನಾನದ ತೊಟ್ಟಿ ½ ಅಡಿಗಿಂತ ಎತ್ತರ ಇರಲಿಲ್ಲ. ದರಾಸಲಂನ ಇಂಜಿನಿಯರಿಂಗ್ ತಂತ್ರ ವಿಶೇಷ ರೀತಿಯದು. ನಾವಿದ್ದ ಹೊಟೇಲಿನ ಬಚ್ಚಲು ಮನೆ ಚಿಕ್ಕದು. ಅಲ್ಲಿ ಕಮೋಡಿನ ಮುಚ್ಚಳವನ್ನು ಪೂರ್ತಿ ತೆಗೆಯಲು ಆಗುತ್ತಿರಲಿಲ್ಲ. ಅದರಿಂದ ಅವನ್ನು ಒರಗಿಕೊಂಡೇ ಕೂರಬೇಕಾಗಿತ್ತು. ಕನ್ನಡಿಯ ಮುಂದೆ ನಿಂತು ಕ್ಷೌರಮಾಡಿಕೊಳ್ಳಲು ಆಗುತ್ತಿರಲಿಲ್ಲ.

ಕನೋಡು ಮತ್ತು ಕನ್ನಡಿಯ ಮಧ್ಯೆ ಬಲು ಕಿಷ್ಕಿಂಧ ಆಗಿತ್ತು. ಅದರಿಂದ ಕನ್ನಡಿ ಹೆಚ್ಚೂ ಕಡಿಮೆ ಉಪಯೋಗಕ್ಕೆ ಬರಲಿಲ್ಲ. ಕನ್ನಡಿಯ ಪಕ್ಕದಲ್ಲಿ ನಿಂತು ಕ್ಷೌರ ಮಾಡಿ ಕೊಳ್ಳುವುದು ಹೇಗೆ?

ಹೊಟೇಲಿನ ಮಾಲೀಕ ಏಷ್ಯನ್ ಇಲ್ಲಿ ಭಾರತೀಯರಿಗೆ ಮತ್ತು ಪಾಕೀಸ್ತಾನೀಯ ರಿಗೆ ಏಷ್ಯನ್ನರು ಎಂದು ಕರೆಯುವರು. ಆತ ಜಾಂಜಿಬಾರಿನಲ್ಲಿ ೩-೪ ಹೊಟೇಲುಗಳ ಮಾಲೀಕ ಅದರಿಂದ ಈ ಹೊಟೇಲಿನ ಅಚ್ಚು ಕಟ್ಟಿನ ಬಗ್ಗೆ ಆತ ಅಷ್ಟಾಗಿ ಗಮನ ಹರಿಸ ಲಿಲ್ಲ ಎಂದು ಹೇಳಿದಲ್ಲಿ ತಪ್ಪಾಗದು.

ಈ ಹೊಟೇಲಿನಲ್ಲಿ ಭೋಜನದ ವ್ಯವಸ್ಥೆ ಇರಲಿಲ್ಲ. ಅದರಿಂದ ಈ ಹೊಟೇಲಿನ ಎದರು ಗಲ್ಲಿಯಲ್ಲಿದ್ದ ಅನೆಕ್ಸ್ ಹೊಟೇಲಿಗೆ ಊಟಕ್ಕೆ ಹೋದೆವು. ಅದನ್ನು ರಸ್ತೆಯೆಂದೇ ಹೇಳು ವರು. ನಮ್ಮಲ್ಲಿ ಗಲ್ಲಿಗಳು ಅಲ್ಲಿಯ ರಸ್ತೆ ಗಿಂತ ವಿಶಾಲ ಆಗಿರುವುವು ಪ್ರಾಯಶಃ ನಾವು ಹೋದ ಗಲ್ಲಿಯ ಅಗಲ ೮–೧೦ ಅಡಿ ಇರ ಬಹುದು ಎಂಬುದು ನನ್ನ ಅಂದಾಜು. ಈ ರಸ್ತೆಯಲ್ಲಿ ಕಾರುಗಳು ಚಲಿಸುತ್ತಿದ್ದವು. ಅಲ್ಲಿ ಕಾರುಗಳು ಹೋಗುವಾಗ ನಾವು ಅಲ್ಲಿ ಒಂದು ಪಕ್ಕದಲ್ಲಿ ನಿಂತು ನಮ್ಮ ಜೀವವನ್ನು ಭದ್ರವಾಗಿ ಹಿಡಿದಿಟ್ಟುಕೊಂಡಿರಬೇಕು. ಅನೆಕ್ಸ್ ಹೊಟೇಲಿನ ಬಾಗಿಲುಗಳು ಜಾಂಜಿ ಬಾರು ತರಹ ಕೆತ್ತನೆಯ ಕೆಲಸದಿಂದ ಕೂಡಿ ದ್ದವು. ಬಾಗಿಲಿಗೆ ನಮ್ಮ ಹಳ್ಳಿಗಳಲ್ಲಿ ಹಿಂದೆ ಇದ್ದಂತೆ ಹಿತ್ತಾಳಿಯ ಗುಬುಟು ಮೊಳೆ ಗಳನ್ನು ಹೊಡೆದಿದ್ದರು. ಕಳ್ಳ ಸುಲಭವಾಗಿ ಒಡೆಯಲಾಗದ ಬಾಗಿಲುಗಳು. ಈಗ ಕಾಲ ಬದಲಾಗಿದೆ. ಅಂತಹ ಬಾಗಿಲುಗಳು ಈಗ ಇಲ್ಲ. ಇದೂ ಸಹ ಬಹು ಇಕ್ಕಟ್ಟಾದ ಮತ್ತು ಚಿಕ್ಕದಾದ ಹೊಟೇಲು. ಹೊಟೇಲಿನ ನಾಲ್ಕ ನೆಯ ಮಹಡಿ ಏರಿದೆವು. ಮೈಸೂರಿನ ಹೊಟೇಲುಗಳಂತೆ ಇಲ್ಲಿ ಸಿದ್ಧಪಡಿಸಿದ ಅಡಿಗೆ ಇರುವುದಿಲ್ಲ. ನಾವು ಆರ್ಡರು ಕೊಟ್ಟ ನಂತರ ಅವುಗಳನ್ನು ತಯಾರಿಸಿ ನಮ್ಮ ಮೇಜಿನ ಮೇಲೆ ತಂದಿಡಲು ೪೫ ನಿಮಿಷ ತೆಗೆದು ಕೊಳ್ಳುವರು. ಕೆಲವು ಹೊಟೇಲುಗಳಲ್ಲಿ ಬಿಗಿಯಾದ ಅಡಿಗೆ ಆರದಂತೆ ಇಜ್ಜಲು ಒಲೆ ಮೇಲಿಟ್ಟು ತಂದು ಕೊಡುವ ರೂಢಿ ಇದೆ. ಈ ವಿಷಯ ನನ್ನ ಅನುಭವಕ್ಕೆ ಬಂದಿದೆ. ನಾವು ಹೇಳಿದಂತೆ ಸಸ್ಯಾಹಾರಿ ಬಿರಿಯಾನಿ ಮತ್ತು ಚೈನಾ ರೈಸ್‌ನ ಘಂ ಎಂಬ ವಾಸನೆ ನಮ್ಮ ಮೂಗನ್ನು ಅಡರುತ್ತಿತ್ತು. ತಿಂಡಿ ಬಿಸಿಯಾಗಿದ್ದು ಹೊಗೆ ಬರುತ್ತಿತ್ತು. ಚೈನಾ ರೈಸ್ ನಮ್ಮ ಹುಳಿಯನ್ನದಂತೆ ರುಚಿಯಾಗಿತ್ತು. ನಮ್ಮಲ್ಲಿ ಮೊದಲೇ ತಯಾರಿಸಿಟ್ಟದ್ದ ತಿಂಡಿ ಮತ್ತು ಅಡಿಗೆ ಬಡಿಸುವರು ತಂದಿದ್ದನ್ನು ಮೂಗು ಮುಚ್ಚಿ ಕೊಂಡು ತಿಂದರೆ ಸರಿ. ಆಕ್ಷೇಪಣೆ ಎತ್ತಿದಲ್ಲಿ ನಾವು ಹೊಟೇಲಿನ ಮ್ಯಾನೇಜರ್ ಜೊತೆ ವಾಗ್ವಾದಕ್ಕೆ ಸಿದ್ಧವಾಗಿರಬೇಕು. ಕೆಲವು ಕಡೆಗಳಲ್ಲಿ ಇಂತಹ ವಾಗ್ವಾದಗಳಿಗೆ ಅವಕಾಶ ಕೊಡದೆ ಬೇರೆ ತಿಂಡಿಯನ್ನು ತಂದಿಡುವರು.

ಊಟ ಮುಗಿಸಿ ನಮ್ಮ ಹೊಟೇಲಿಗೆ ಹೋಗಿ ಮಲಗಿದೆವು. ಒಳ್ಳೆಯ ನಿದ್ದೆ ಬಂತು. ರಗ್ಗು ಹೊದ್ದಿದ್ದರೂ ಒಂದು ಹೊತ್ತಿನಲ್ಲಿ ಛಳಿ ಆಯಿತು. ಅವನ್ನು ಸಹಿಸಿ ಕೊಂಡು, ಎರಡು ಕಾಲುಗಳನ್ನು ಮುದುರಿ ಮಲಗಿದೆ. ರಾತ್ರಿ ಕಳೆಯಿತು. ರಾತ್ರಿ ಎ.ಸಿ. ಚಾಲು ಇದ್ದಿದ್ದರಿಂದ ಛಳಿ ಆಯಿತು ಎಂಬ ಅಂಶ ಬೆಳಗ್ಗೆ ತಿಳಿಯಿತು. ಸ್ನಾನ ಮಾಡಲು ಗೈಜರ್‌ಗೆ ಸ್ವಿಚ್ ಹಾಕಿದೆವು.

ಪ್ರಾತರ್ವಿಧಿಗಳನ್ನು ಪೂರೈಸಿ ನಲ್ಲಿ ತಿರುಗಿಸಿದಾಗ ಬಿಸಿನೀರು ಬರಲಿಲ್ಲ. ಆಗ ಗ್ರೈಜರ್ ಕೆಟ್ಟಿದೆ ಎಂಬುದು ಗೊತ್ತಾಯಿತು. ನನ್ನ ಮಗನ ಕೊಠಡಿಯ ಬಚ್ಚಲು ಮನೆಗೆ ಹೋಗಿ ಸ್ನಾನ ಮುಗಿಸಿದೆವು. ಮಾರನೆಯ ದಿನ ಈ ಬಚ್ಚಲು ಮನೆಯಲ್ಲಿ ನೀರು ಇರಲಿಲ್ಲ. ಅದರಿಂದ ನನ್ನ ಮಗ ನನ್ನ ಬಚ್ಚಲು ಮನೆಗೆ ಸ್ನಾನಕ್ಕೆ ಬಂದ. ಒಂದು ರೀತಿಯಲ್ಲಿ ಮುಯ್ಯಿ ತೀರಿಸಿದಂತಾಯಿತು. ಸೋಪು ಹಚ್ಚಿಕೊಂಡು ನಲ್ಲಿ ತಿರುಗಿಸಿದರೆ ನೀರೆ ಇಲ್ಲ. ಆಗ ದೂರವಾಣಿಯಲ್ಲಿ ಹೊಟೇಲಿನ ಮ್ಯಾನೇಜರಿಗೆ ಸ್ನಾನದ ಪರಿಸ್ಥಿತಿಯನ್ನು ತಿಳಿಸಲಾಯಿತು. ಹತ್ತು ನಿಮಿಷದ ನಂತರ ಒಂದು ಬಕೆಟ್ ತಣ್ಣೀರು ಬಂತು. ಪಾಲಿಗೆ ಬಂದಿದ್ದು ಪಂಚಾಮೃತ ಎಂದು ತಿಳಿದು ಸ್ನಾನದ ಶಾಸ್ತ್ರ ಮುಗಿಸಿದ್ದಾಯಿತು. ಬಕೆಟ್ಟಿನ ತಳದಲ್ಲಿ ಕಸ ತೇಲುತ್ತಿತ್ತು. ಆದರೆ ವಿಧಿಯಿಲ್ಲ ಅದೂ ಈ ವಿಷಯ ತಿಳಿದಿದ್ದು ಸ್ನಾನ ಆದ ನಂತರ.

ಅನಂತರ ಉಪಹಾರ ಮುಗಿಸಲು ಹೋದೆವು. ಹೊಟೇಲಿನಲ್ಲಿ ಇದ್ದವರಿಗೆ ಬೆಳಗ್ಗೆ ಕಾಫಿ ಮತ್ತು ಉಪಹಾರಕ್ಕೆ ಪ್ರತ್ಯೇಕ ಹಣ ತೆಗೆದುಕೊಳ್ಳುವುದಿಲ್ಲ. ಅವನ್ನು ಕೊಠಡಿಯ ಬಾಡಿಗೆಯಲ್ಲೇ ಸೇರಿಸಿರುವರು. ತಿಂಡಿಯ ನಂತರ ಕಾಫಿ ಕುಡಿದೆವು. ಕುಡಿದಿದ್ದು ಕಾಫಿ ಎಂಬುದು ಅಲ್ಲಿಯ ಸೇವಕನಿಂದ ತಿಳಿಯಿತು.

ಹಿಂದಿನ ರಾತ್ರಿ ಪ್ರವಾಸ ಏಜೆಂಟ್ ಜೊತೆಗೆ ಮಾತನಾಡಿದಂತೆ ಬೆಳಗ್ಗೆ ೯ ಗಂಟೆಗೆ ಪ್ರಿಸನ್ ಐಲೆಂಡಿಗೆ ಹೋಗಬೇಕಾಗಿತ್ತು. ಬೆಳಗ್ಗೆ ೮-೩೦ ಗಂಟೆಗೆ ಪ್ರವಾಸಿ ಏಜೆಂಟು ಬಂದು 'ಪೆಟ್ರೋಲ್ ಕೊರತೆ ಇದೆ' ಆದ್ದರಿಂದ ಪೆಟ್ರೋಲ್ ಹಾಕಿಸಿಕೊಂಡು ಬೆಳಗ್ಗೆ ೧೧-೩೦ ಗಂಟೆಗೆ ಬರುವುದಾಗಿ ಹೇಳಿ ಹೋದ. ಹನ್ನೊಂದೂವರೆಗೆ ಬಂದ ಮೆಟಡಾರ್‌ನಲ್ಲಿ ಕುಳಿತು ಬಂದರಿಗೆ ಹೋದೆವು. ಅಲ್ಲಿ ದೋಣಿ ಸಿದ್ಧವಾಗಿತ್ತು. ನಾವು ಮತ್ತು ಪ್ರವಾಸಿ ಏಜೆಂಟ್ ಅದರಲ್ಲಿ ಕುಳಿತೆವು. ಆ ದೋಣಿ ೧೫-೨೦ ಮಂದಿ ಕುಳಿತುಕೊಳ್ಳಬಹುದಾಗಿತ್ತು. ಪ್ರಿಸನ್ ಐಲೆಂಡು ಬೀಚನ್ನು ತಲುಪಲು ಅರ್ಧ ಗಂಟೆ ಹಿಡಿಯಿತು. ಇಲ್ಲಿಗೆ ಹೋಗುವಾಗ ಸ್ನೇಕ್ ಐಲೆಂಡ್ ಮತ್ತು ಗ್ರೇವ್ ಐಲೆಂಡುಗಳು ಸಿಕ್ಕಿದೆವು. ವಿಶ್ವದ ಮೊದಲನೆಯ ಯುದ್ಧದಲ್ಲಿ ಮಡಿದ ಸೈನಿಕರ ಸಮಾಧಿ ಮಾಡಿರುವುದು. ಗ್ರೇವ್ ಐಲೆಂಡು ಮೊದಲು ಅದು ಬ್ರಿಟಿಷರ ವಶದಲ್ಲಿತ್ತು. ಈಗ ಅದು ಸ್ಥಳೀಯ ಸರಕಾರದ ವಶದಲ್ಲಿದೆ. ಸ್ನೇಕ್ ಐಲೆಂಡು ತುಂಬ ಹಾವುಗಳು ಇವೆಯಂತೆ. ಅದನ್ನು ನಮಗೆ ತೋರಿಸಲಿಲ್ಲ.

ಒಂದು ಬಾರಿ ಇಂಡಿಯನ್ ಹೈಕಮಿಷನ್ ಅಧಿಕಾರಿ ಮತ್ತು ಅಮೆರಿಕದ ರಾಯಭಾರಿ ದೋಣಿಯಲ್ಲಿ ಪ್ರಿಸನ್ ಐಲೆಂಡಿನಿಂದ ಬರುತ್ತಿದ್ದರು. ರಾತ್ರಿ ಆಗಿತ್ತು. ದೋಣಿಯಲ್ಲಿದ್ದ ಎಂಜಿನ್ನಿನ ಪೆಟ್ರೋಲ್ ಮುಗಿಯಿತು. ಮಾಡುವುದೇನು? ಅಲೆಗಳ ಸಹಾಯದಿಂದ ದೋಣಿ ಒಂದು ಹಳ್ಳಿಯನ್ನು ಮುಟ್ಟಿತು. ರಾತ್ರಿ ಅಲ್ಲೇ ಕಳೆಯಬೇಕಾಯಿತು. ದೋಣಿಯಲ್ಲಿ ದೊಡ್ಡವರಿದ್ದರೆ ಕೇಳಬೇಕೆ? ಆಗ ಎರಡು ರಾಯಭಾರಿ ಕಚೇರಿ ಅಧಿಕಾರಿಗಳ ಗಮನ ಈ ಕಡೆಗೆ ಹರಿಯಿತು. ಬೆಳಗ್ಗೆ ಜಾಂಜಿಬಾರಿನಿಂದ ಪೆಟ್ರೋಲ್ ತೆಗೆದುಕೊಂಡು ಹೋಗಿ ದೋಣಿಯನ್ನು ಜಾಂಜಿಬಾರಿಗೆ ತಂದರು. ಅನಂತರ ಇಬ್ಬರು

ರಾಯಭಾರಿ ಕಚೇರಿಯ ಅಧಿಕಾರಿಗಳು ಜಾಂಜಿಬಾರಿನಿಂದ ದರಾಸೆಲಂಗೆ ವಿಮಾನ ದಲ್ಲಿ ಪ್ರಯಾಣ ಮಾಡಿದರು. ಈ ಅನುಭವ ನಮಗೆ ಆಗಲಿಲ್ಲ. ಪ್ರಾಯಶಃ ನಮ್ಮ ಅದೃಷ್ಟ.

ನಿಗದಿಯಾದ ಪ್ರವೇಶ ಶುಲ್ಕ ನೀಡಿ ಪ್ರಿಸನ್ ಐಲೆಂಡನ್ನು ಪ್ರವೇಶಿಸಿದೆವು. ಅದಕ್ಕೆ ಚಂಗ್ ದ್ವೀಪ ಎಂದು ಹೆಸರು. ಇಲ್ಲಿ ಚಂಗ್ ಎಂಬ ಜಾತಿಯ ಮೀನು ಹೇರಳವಾಗಿ ಸಿಗುವುದು. ಈ ಮೀನು ಬಹಳ ರುಚಿಯಂತೆ. ಆದರಿಂದ ಚಂಗ್ ಎಂಬ ಹೆಸರು ಈ ದ್ವೀಪಕ್ಕೆ ಬಂದಿದೆ. ಈ ದ್ವೀಪ ಅರ್ಧ ಮೈಲಿ ಉದ್ದ. ಒಂದು ಫರ್ಲಾಂಗ್ ಅಗಲ. ಮೊದಲಿಗೆ ಈ ದ್ವೀಪದ ಮಾಲೀಕ ಒಬ್ಬ ಅರಬ್ಬಿಯವನು. ಅದನ್ನು ಜನರಲ್ ಮ್ಯಾಥ್ಯೂಸ್ ೧೮೯೩ ರಲ್ಲಿ ಕೊಂಡು ಅಲ್ಲಿ ಗುಲಾಮರನ್ನು ಇಡಲು ಒಂದು ಬಂದೀಖಾನೆಯನ್ನು ಕಲ್ಪಿಸಿದನು. ಐಲೆಂಡಿನಲ್ಲಿ ಈಗ ಹಲವಾರು ಶಿಥಿಲವಾದ ಕಟ್ಟಡಗಳಿವೆ. ಹತ್ತು ಅಡಿ ಉದ್ದ ಹತ್ತು ಅಡಿ ಅಗಲದ ಕೊಠಡಿಯಲ್ಲಿ ೩೦-೩೫ ಮಂದಿ ಗುಲಾಮರನ್ನು ಕೂಡಿ ಹಾಕು ತ್ತಿದ್ದರಂತೆ. ಅಲ್ಲಿ ನೆಲಕ್ಕೆ ಹೂಳಿದ ಕಬ್ಬಿಣ ಬಳೆಗಳಿವೆ. ಈ ಕಟ್ಟಡಕ್ಕೆ ಸ್ವಲ್ಪ ದೂರದಲ್ಲಿ ಒಂದು ಹೊಂಡ ಇದೆ. ಅದಕ್ಕೆ ಸಮುದ್ರ ದಲ್ಲಿ ಉಬ್ಬರವಿಳಿತ ಇದ್ದಾಗ ಅದರ ನೀರು ಹೊಂಡಕ್ಕೆ ಹೋಗಿ ತುಂಬುವುದಂತೆ. ಆ ಹೊಂಡದ ನೀರಿನಲ್ಲಿ ಗುಲಾಮರನ್ನು ಕರೆ ತಂದು ಸ್ನಾನ ಮಾಡಿಸುತ್ತಿದ್ದರು.

ಈ ದ್ವೀಪದ ಸುಣ್ಣದ ಕಲ್ಲನ್ನು ದರಾಸಲಂನಲ್ಲಿ ಮನೆ ಕಟ್ಟಲು ಒಯ್ಯು ತ್ತಿದ್ದರು. ಅವುಗಳನ್ನು ತೆಗೆದ ಕಡೆ ಭಾರಿ ಗುಂಡಿಗಳಾಗಿರುವುದನ್ನು ನೋಡಬಹುದು.

ದ್ವೀಪದ ಮಧ್ಯದಲ್ಲಿ ಒಂದು ಕಟ್ಟಡ ಇದೆ. ಸುಲ್ತಾನನು ಅಲ್ಲಿಗೆ ಆಗಾಗ್ಗೆ ಬಂದು ವಿಶ್ರಮಿಸುತ್ತಿದ್ದನಂತೆ. ಈಗ ಕಟ್ಟಡದ ಸ್ವಲ್ಪ ಭಾಗ ಹೊಟೇಲು. "ಸಮುದ್ರದ ನೆಂಟಸ್ತನ, ಉಪ್ಪಿಗೆ ಬಡತನ" ಎಂಬಂತೆ ಇಲ್ಲಿ ಕುಡಿಯುವ ನೀರಿನ ಕೊರತೆ. ಸಿಮೆಂಟು ಕಾಂಕ್ರೀಟಿನಿಂದ ಮಾಡಿದ ಬಾವಿಯಲ್ಲಿ ಮಳೆಯ ನೀರನ್ನು ಸಂಗ್ರಹಿಸು ವರು. ನೀರನ್ನು ಸಂಗ್ರಹಿಸಲು ಆಳೆತ್ತರದ ಹಲವಾರು ಡ್ರಂಗಳು ಇವೆ. ನೀರನ್ನು ಸಂಗ್ರಹಿಸಲು ತಗಡಿನಿಂದ ತಯಾರಿಸಿದ ದೋಣಿಗಳನ್ನು ಸೂರಿಗೆ ಕಟ್ಟಿಸಿರುವರು. ನಾವು ಅಲ್ಲಿಗೆ ಹೋದ ದಿನ ಬಾವಿಯಲ್ಲಿ ಹತ್ತು ಅಡಿ ನೀರಿತ್ತು. ಈ ವಾತಾವರಣ ಇರುವ ಕೆಲವು ಪ್ರದೇಶಗಳಲ್ಲಿ ಇಂಡಿಯನ್ ಹೈಕಮಿಷನ್ ಕಚೇರಿಗಳು ಇರುವುದಾಗಿ ನನ್ನ ಮಗ ತಿಳಿಸಿದ. ಅಲ್ಲಿ ವಾಸಿಸುವ ಅಧಿಕಾರಿಗಳ ಮತ್ತು ಜನರ ಬವಣೆ ದೇವರಿಗೆ ಪ್ರೀತಿ.

ಇಲ್ಲಿ ನನ್ನ ಎರಡೂ ಕೈಗಳಿಂದ ಬಾಚಿ ತಬ್ಬಲಾಗದ ಆಮೆಗಳಿವೆ. ಅಂತಹ ಆಮೆ ಗಳ ಸಂಖ್ಯೆ ೮೦ ರಿಂದ ೯೦ ಇರಬಹುದು- ಒಂದು ಸಣ್ಣ ಮನೆಯಲ್ಲಿ ಸುಮಾರು ೫೦– ೬೦ ಆಮೆಮರಿಗಳನ್ನು ಸಾಕಿರುವರು. ಹೊರಗೆ ಓಡಾಡುವ ಆಮೆಗಳು ಈಗಾಗಲೇ ಹೇಳಿದಂತೆ ದೊಡ್ಡವು ಸುಮಾರು ೭೦–೮೦ ವರ್ಷದವು. ನನ್ನಂಥಹವರು ಕುಳಿತು ಅವು ಗಳ ಸವಾರಿ ಮಾಡುವರು. ನನ್ನ ಮೊಮ್ಮಗ ವಿಪಿನ್ ಆಮೆಯ ಮೇಲೆ ಕುಳಿತು ಮನ ತಣಿಯುವಷ್ಟು ಸವಾರಿ ಮಾಡಿದ. ನಾವು ಅಲ್ಲಿಂದ ಹೊರಡುವವರೆಗೆ ನನ್ನ ಮೊಮ್ಮಗ ಮತ್ತು ಮೊಮ್ಮಗಳು ಅವುಗಳ ಜೊತೆ

ಆಟವಾಡಿ ಆನಂದಿಸಿದರು. ಅಪರೂಪಕ್ಕೆ ತನ್ನ ಮೇಲೆ ಸವಾರಿ ಮಾಡಿ ಆನಂದಿಸುವವರು ಸಿಕ್ಕಿದರಲ್ಲ ಎಂಬ ಸಂತೋಷದಿಂದ ಆ ಆನೆ ಸಹಕರಿಸಿರಬೇಕು.

ಮೇಲೆ ಹೇಳಿದ ಹೊಟೇಲಿನಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಊಟ. ವಿಧಿಯಿಲ್ಲದೆ ಕೋಕಕೋಲ ಮುಂತಾದ ಪಾನೀಯಗಳನ್ನು ಕುಡಿಯಬೇಕು. ಮುಂಚಿತವಾಗಿ ಹೇಳಿದಲ್ಲಿ ಅನ್ನ ಮಾಡುವರು. ಈ ವಿಷಯ ನಮಗೆ ತಿಳಿದಿರಲಿಲ್ಲ. ಆದರಿಂದ ಫ್ರೆಂಚ್ ಫ್ರೈಸ್, ಮೀನು ಮುಂತಾದುವೇ ಗತಿ. ಆಲೂಗೆಡ್ಡೆಯನ್ನು ದಪ್ಪ ದಪ್ಪ ಹೋಳು ಮಾಡಿ ಎಣ್ಣೆಯಲ್ಲಿ ಬೇಯಿಸಿ ಅದರ ಮೇಲೆ ಉಪ್ಪನ್ನು ಉದುರಿಸುವರು. ಅದೇ ಫ್ರೆಂಚ್ ಫ್ರೈಸ್. ಅದೇ ನನಗೆ, ನನ್ನ ಸೊಸೆ ಮತ್ತು ಮೊಮ್ಮಗಳ ಆಹಾರ. ಉಳಿದವರಿಗೆ ಅಲ್ಲಿ ದೊರೆಯುತ್ತಿದ್ದ ಆಹಾರ ಚೆನ್ನಾಗಿತ್ತು.

ಊಟದ ಶಾಸ್ತ್ರ ಮುಗಿಸಿದ ನಂತರ ಸಂಜೆ ನಾಲ್ಕು ಗಂಟೆವರಿವಿಗೆ ಬೀಚಿನಲ್ಲಿ ಕುಳಿತು ಕಾಲಕಳೆದೆವು. ೧೦–೧೨ ಮಂದಿ ಯೂರೋಪಿಯನ್ ಗಂಡಸರು ಮತ್ತು ಹೆಂಗಸರು ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಮರ್ಯಾದೆ ಕಾಪಾಡುವಷ್ಟು ಬಟ್ಟೆಯನ್ನು ಧರಿಸಿ ಬಿಸಿಲು ಕಾಯುತ್ತಿದ್ದರು. ಅನಂತರ ಅವರು ಸಮುದ್ರಕ್ಕೆ ಇಳಿದು ಈಜಿದರು. ಕೆಲವು ಮಂದಿ ಅಲ್ಲೇ ಬಾಡಿಗೆಗೆ ಸಿಗುತ್ತಿದ್ದ ರಬ್ಬರು ಪಾದುಕೆಗಳನ್ನು ಕಾಲುಗಳಿಗೆ ಸಿಗಿಸಿಕೊಂಡು ಈಜುತ್ತಿದ್ದರು. ಹೆಂಗಸರೂ ಸಹ ಈಜುಗಾರಿಕೆಯಲ್ಲಿ ಹಿಂದೆ ಬೀಳಲಿಲ್ಲ.

ನಾಲ್ಕು ಗಂಟೆಯ ನಂತರ ದೋಣಿಯಲ್ಲಿ ಕುಳಿತು ಜಾಂಜ ಬಾರಿಗೆ ವಾಪಸಾದೆವು. ಆಗಲೇ ಸಮುದ್ರದಲ್ಲಿ ಉಬ್ಬರವಿಳಿತ ಹೆಚ್ಚಾಗಿತ್ತು. ಸಂಜೆ ಆಗುತ್ತ ಸಮುದ್ರದಲ್ಲಿ ಅಲೆಗಳ ಹೊಡೆತ ಹೆಚ್ಚಾಯಿತು. ಆದರಿಂದ ನಮ್ಮ ಮೇಲೆ ಸಮುದ್ರದ ನೀರು ಹಾರಿ ನಮ್ಮ ಬಟ್ಟೆಯೆಲ್ಲಾ ಒದ್ದೆ ಆಯಿತು. ಅಲೆಗಳ ಹೊಡೆತಕ್ಕೆ ದೋಣಿ ಸಿಕ್ಕಿ ಅಲುಗಾಡುತ್ತಿತ್ತು. ನಾನು ದೋಣಿಯಲ್ಲಿದ್ದ ಕಬ್ಬಿಣದ ಸಲಾಕಿಯನ್ನು ಭದ್ರವಾಗಿ ಹಿಡಿದು ಕುಳಿತೆ. ಬಂದರು ತಲುಪುವ ವೇಳೆಗೆ ನಮ್ಮ ಮೊದಲನೆಯ ದಿನದ ಪ್ರವಾಸ ಮುಕ್ತಾಯ ಆಯಿತು. ದೋಣಿಯಿಂದ ಇಳಿದ ತಕ್ಷಣ ನನ್ನ ಮನಸ್ಸು ಹಗುರಾಯಿತು. ದೋಣಿಯಲ್ಲಿ ಹೋಗಿ ಬರಲು ೬೦೦೦ ಷಿಲಿಂಗ್ ಕೊಡಬೇಕಾಯಿತು. ಎರಡು ದಿವಸದ ಪ್ರವಾಸದ ಖರ್ಚು ೨೪,೦೦೦ ಷಿಲಿಂಗನ್ನು ಟ್ರಾವಲ್ ಏಜೆಂಟನಿಗೆ ಪಾವತಿ ಮಾಡಿದೆವು. ಅಂದು ರಾತ್ರಿ ಯೂನಿಸೆಫ್ ಅಧಿಕಾರಿ ಬೆಂಗಳೂರಿನ ಸೀನಪ್ಪನವರ ಮನೆಯಲ್ಲಿ ಮೈಸೂರಿನ ಊಟ ಮುಗಿಸಿ ನಮ್ಮ ಹೊಟೇಲಿಗೆ ಹೋಗಿ ಮಲಗಿದೆವು.

ಮೂರನೆಯ ದಿನ ಬೆಳಗ್ಗೆ ಒಂಬತ್ತು ಗಂಟೆಗೆ ವಾಹನದಲ್ಲಿ ಕುಳಿತು ಹಳ್ಳಿಯ ಕಡೆ ಹೊರೆಟೆವು. ಪ್ರಿಸನ್ ಐಲೆಂಡನ್ನು ಸ್ಪೈನ್ ಐಲೆಂಡು ಎಂದು ಕರೆಯುವರು. ಮಲೆನಾಡು ಪ್ರದೇಶದ ಪರಿಚಯವಿದ್ದ ನನಗೆ ಅಲ್ಲಿಯ ದೃಶ್ಯ ಹೊಸದಾಗಿ ಕಾಣಲಿಲ್ಲ. ನಾಲ್ಕೈದು ಮೈಲಿ ದೂರದಲ್ಲಿರುವ ಒಂದು ತೋಟಕ್ಕೆ ಹೋದೆವು. ಟ್ರಾವೆಲ್ ಏಜೆಂಟನ ದಯದಿಂದ ನಮಗೆ ತೋಟದಲ್ಲಿ ಎಳನೀರು ಮತ್ತು ಮೋಸುಂಬಿ ಸಿಕ್ಕಿತು. ಲವಂಗ ಮತ್ತು ಜಾಯಿಕಾಯಿ ಮರಗಳನ್ನು ನೋಡಿಲ್ಲದ

ನಮಗೆ ಅವುಗಳ ಪರಿಚಯ ಆಯಿತು. ಜಾಯಿಕಾಯಿಯ ಹೊರಗಿನ ಸಿಪ್ಪೆ ನಿಂಬೆ ಕಾಯಿ ಬಣ್ಣ. ಅದರಿಂದ ಉಪ್ಪಿನಕಾಯಿ ಮಾಡುವರಂತೆ. ಸಿಪ್ಪೆ ಸ್ವಲ್ಪ ಹುಳಿ ಮತ್ತು ಕಹಿ. ಲವಂಗದ ಹೂವನ್ನು ನೋಡಿದೆವು. ತೋಟದ ಮನೆಯ ಮುಂದೆ ಸಾವಿರಾರು ತೆಂಗಿನಕಾಯಿಗಳ ರಾಶಿ ಹಾಕಿದ್ದರು. ಸ್ಥಳೀಯವಾಗಿ ಕೊಬ್ಬರಿ ಎಣ್ಣೆ ತಯಾರಿಸುವುದನ್ನು ಕೇಳಿ ತಿಳಿದೆವು. ಅಲ್ಲಿ ತಯಾರಾದ ಕೊಬ್ಬರಿ ಎಣ್ಣೆ ಮಧ್ಯಏಷ್ಯಾಕ್ಕೆ ಹೋಗುವುದು. ಅದು ನಮ್ಮ ಕೊಬ್ಬರಿ ಎಣ್ಣೆಯಷ್ಟು ಪರಿಶುದ್ಧ ಆಗಿರುವುದಿಲ್ಲ.

ಟಾನ್ಜಾನಿಯ ಜೇನುತುಪ್ಪ ತಯಾರಿಸಿ ರಫ್ತು ಮಾಡುವುದು. ೧೯೭೧–೭೨ರಲ್ಲಿ ಟಾನ್ಜಾನಿಯ ೧೨೩ ಟನ್ ಜೇನುತುಪ್ಪವನ್ನು, ೯೬ ಟನ್ ಜೇನುಮೇಣವನ್ನು ರಫ್ತು ಮಾಡಿ ೨.೩ ಮಿಲಿಯನ್ ಡಾಲರು ವಿದೇಶಿ ವಿನಿಮಯವನ್ನು ಪಡೆಯಿತು. ನೆದರ್‌ಲ್ಯಾಂಡು ಮತ್ತು ಜರ್ಮನಿ ಅನುಕ್ರಮವಾಗಿ ಜೇನನ್ನು ರಫ್ತು ಮಾಡುವುದರಲ್ಲಿ ಎರಡು ಮತ್ತು ಮೂರನೆಯ ಸ್ಥಾನವನ್ನು ಪಡೆದಿದೆಯಂತೆ. ಮೊದಲನೆಯದಾಗಿ ಟಾನ್ಜಾನಿಯ ಜೇನುತುಪ್ಪದ ಗುಣಮಟ್ಟದ ಬಗ್ಗೆ ಹೆಚ್ಚಿನ ಗಮನ ಹರಿಸತಕ್ಕದ್ದು. ಎರಡನೆಯದಾಗಿ ಅದರ ಮಾರಾಟದ ವ್ಯವಸ್ಥೆ ಸುಧಾರಣೆ ಆಗಬೇಕು. ಆಫ್ರಿಕ ಒಟ್ಟು ಮೂರು ಲಕ್ಷ ಟನ್ ಜೇನುತುಪ್ಪವನ್ನು ರಫ್ತು ಮಾಡುವುದು.

ಸುಲ್ತಾನನ ಅಂತಃಪುರದ ಅವಶೇಷವನ್ನು ನೋಡಿದ್ದು ಪ್ರವಾಸದ ಕಡೆಯ ಹಂತ. ಆ ಸ್ಥಳದ ಮೂಲ ಮಾಲೀಕ ನೂರುಭಾಯಿ. ೧೮೯೦ರಲ್ಲಿ ಬರ್ಗಾಶ್ ಎಂಬುವನು ಅರಮನೆಯನ್ನು ಈ ಸ್ಥಳದಲ್ಲಿ ಕಟ್ಟಿಸಿದನು. ಓಮನ್ ಅರಬ್ ರಾಜರಲ್ಲಿ ಮೂರನೆಯವನಾದ ಬರ್ಗಾಶ್ ರಾಣೀವಾಸದ ಮಹಿಳೆಯರಿಗೆ ಅಂತಃಪುರವನ್ನು ಕಟ್ಟಿಸಿದನು.

ಸುಲ್ತಾನ್ ಸೈಯದ್ ಸೆಡ್‌ನ ಹೆಂಡತಿ ಪರ್ಷಿಯ ದೇಶದವಳು. ಅವಳಿಗೆ ಸ್ನಾನ ಮಾಡಲು ಸೊಗಸಾದ ಸ್ನಾನದ ಮನೆಯನ್ನು ಅವನು ನಿರ್ಮಿಸಿದನು. ಟರ್ಕಿಷ್ ಬಾತ್ ಎಂಬುದು ಹೆಸರಾದುದು. ೧೮೯೯ರಲ್ಲಿ ಅರಮನೆಗೆ ಬೆಂಕಿ ಬಿದ್ದು ಭಸ್ಮ ಆಯಿತು. ಆಗಿನ ಕಾಲಕ್ಕೆ ನಿರ್ಮಿಸಿದ್ದ ಟರ್ಕಿಷ್ ಬಾತ್ ಕೊಠಡಿಗಳು ಹೀನಸ್ಥಿತಿಯಲ್ಲಿ ಇರುವುದನ್ನು ಕಾಣಬಹುದು. ಕಟ್ಟಡ ಭಸ್ಮವಾದ ನಂತರ ಅಲ್ಲಿ ಕೇವಲ ಬೋಳುಕಂಬಗಳು ಮಾತ್ರ ನಿಂತಿವೆ. ಈ ಕಟ್ಟಡವನ್ನು ನಾವು ನೋಡುತ್ತಿದ್ದಾಗ ಕತ್ತೆಯಿಂದ ಎಳೆಯಲ್ಪಡುತ್ತಿದ್ದ ಗಾಡಿ ನನ್ನ ಮೊಮ್ಮಗನ ಕಣ್ಣಿಗೆ ಬಿತ್ತು. ಅವನು ಅದರಲ್ಲಿ ಕುಳಿತು ತನ್ನ ಆಸೆಯನ್ನು ತೀರಿಸಿಕೊಂಡು ಆನಂದಿಸಿದ.

ಜಾಂಜಬಾರಿನಲ್ಲಿ ಭಾರತದ ಕಾನ್ಸ್ಯುಲೇಟ್ ಕಚೇರಿ ಇದೆ. ಅಲ್ಲಿಯ ಅಧಿಕಾರಿ ಬಂಗಾಳ ರಾಜ್ಯದವರು. ಅವರ ಆಹ್ವಾನದ ಮೇರೆ ಅವರ ಮನೆಗೆ ಮಧ್ಯಾಹ್ನ ಎರಡು ಗಂಟೆಗೆ ಹೋದೆವು. ನಾವೇ ಬಡಿಸಿಕೊಂಡು ಊಟ ಮಾಡುವ (butter) ವ್ಯವಸ್ಥೆ ಅಲ್ಲಿತ್ತು. ಮನೆಯ ಯಜಮಾನರು ನನ್ನ ಹತ್ತಿರ ಬಂದು ಹೀಗೆ ಹೇಳಿದರು 'ಕಡೆಯ ಪಾತ್ರೆಯಲ್ಲಿರುವುದನ್ನು ಬಿಟ್ಟು ಉಳಿದಿದ್ದೆಲ್ಲವನ್ನು ನೀವು ಉಪಯೋಗಿಸಬಹುದು.' ಅದರಿಂದ ನನ್ನ ಮನಸ್ಸಿಗೆ ಆತಂಕ ಆಗಲಿಲ್ಲ.

ಒಟ್ಟಿನಲ್ಲಿ ನನಗೆ ಬಂಗಾಳಿ ಊಟದ ರುಚಿ ತಿಳಿಯಿತು.

ಊಟ ಮಾಡಿ ಮಧ್ಯಾಹ್ನ ೪-೧೫ ಗಂಟೆಗೆ ಹೊರಡುವ ಹಡಗಿನಲ್ಲಿ ಕುಳಿತೆವು. "ಹಡಗಿನಲ್ಲಿ ಸ್ವಲ್ಪ ತೊಂದರೆ ಉಂಟು. ಅದರಿಂದ ಅದು ದರಾಸಲಂಗೆ ತಲುಪುವುದು ತಡ. ತೊಂದರೆ ಆದವರು ಇಳಿಯುಬಹುದು" ಎಂಬ ಸೂಚನೆ ಹಡಗಿನ ನೌಕರನಿಂದ ಬಂತು. ಆದರೆ ಯಾರೂ ಇಳಿಯಲಿಲ್ಲ.

ಪ್ರಯಾಣ ಶುರುವಾಗಿ ೪ ಗಂಟೆ ಆಗಿರಬಹುದು. ಕೆಲವರಿಗೆ ವಾಕರಿಗೆ ಪ್ರಾರಂಭ ಆಯಿತು. ಕೆಲವರು ತಮಗೆ ಕೊಟ್ಟಿದ್ದ ಪ್ಲಾಸ್ಟಿಕ್ ಚೀಲಕ್ಕೆ ವಾಂತಿ ಮಾಡಿದರು. ಸಹವಾಸ ದೋಷ ನನ್ನ ಮಗನೂ ವಾಂತಿ ಮಾಡಿ ಸುಸ್ತಾದ. ರಾತ್ರಿ ಒಂಬತ್ತು ಗಂಟೆಗೆ ಹಡಗು ದರಾಸೆಲಂ ಮುಟ್ಟಿತು. ಬಂದರಿನಲ್ಲಿ ಆಗತಾನೆ ಸ್ವಲ್ಪ ಮಳೆ ಆಗಿತ್ತು. ಸಾಕಷ್ಟು ಬೆಳಕಿರಲಿಲ್ಲ. ಅದರಿಂದ ನನಗೆ ಅಲ್ಲಿಗೆ ಸಲೀಸಾಗಿ ಹೋಗಲು ಆಯಿತು. ಹಡಗಿನ ಕೆಲಸಗಾರರ ಪೈಕಿ ಒಬ್ಬ ನನ್ನ ಕೈಹಿಡಿದು ಕರೆದುಕೊಂಡು ಹೋದರು.

ಹಡಗನ್ನು ಇಳಿದ ತಕ್ಷಣ ಸ್ವಲ್ಪ ದೂರ ನಡೆದವು. ಅಲ್ಲೊಂದು ಲಾರಿ ನಮ್ಮನ್ನು ಕೂರಿಸಿಕೊಂಡಿತು. ಆತ ಏಷ್ಯನ್. "ಈ ಹೊತ್ತಿನಲ್ಲಿ ನಡೆದು ಹೋಗುವುದು ಅಪಾಯಕಾರಿ. ಇಲ್ಲೇ ಹತ್ತಿರವಲ್ಲಿ ಎರಡು ದಿನ ಹಿಂದೆ ದರೋಡೆ ನಡೆಯಿತು" ಎಂದು ಹೇಳಿ ನಮ್ಮನ್ನು ಮನೆಯ ಹತ್ತಿರ ಇಳಿಸಿದ. ನಾವು ಆತನ ದಾಕ್ಷಿಣ್ಯಕ್ಕೆ ಒಳಗಾಗಲಿಲ್ಲ. ಐನೂರು ಶಿಲಿಂಗ್ ಕೊಟ್ಟೆವು.



ನಮ್ಮ ಕೋಪ ಇತರರನ್ನು ಸುಡುವದಿಲ್ಲ. ಮೊದಲು ಸುಡುವದು ನಮ್ಮನ್ನೇ.

—ಸೆನಿಕಾ

ಹಣಗಳಿಸುವ ಹೆದ್ದಾರಿಯೆಂದರೆ ಹಣ ಉಳಿಸಲು ಕಲಿಯುವದೇ ಆಗಿದೆ.

—ಕೋಲ್ಟನ್

# ಸೌರ ಶಕ್ತಿ

**ಜೆ. ಆರ್. ಲಕ್ಷ್ಮಣರಾವ್**

ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಒಂದು ಮೂಲಭೂತ ವ್ಯತ್ಯಾಸವಿದೆ. ಮನುಷ್ಯ ದುಡಿಮೆ ಮಾಡುತ್ತಾನೆ, ಇತರ ಪ್ರಾಣಿಗಳು ಮಾಡುವುದಿಲ್ಲ. ನಿಸರ್ಗದಲ್ಲಿ ಏನು ಸಿಕ್ಕುವುದೋ ಅದನ್ನು ಪ್ರಾಣಿಗಳು ನೇರವಾಗಿ ಉಪಯೋಗಿಸಿಕೊಂಡು ಜೀವಿಸುತ್ತವೆ. ಮನುಷ್ಯನಾದರೋ ನಿಸರ್ಗದಲ್ಲಿ ನೇರವಾಗಿ ಸಿಕ್ಕುವುದಕ್ಕಿಂತ ಹೆಚ್ಚಿಗೆ ಪಡೆಯಲು ಶ್ರಮಿಸುತ್ತಾನೆ; ಹಾಗೆ ಪಡೆದುದನ್ನು ಸಂಸ್ಕರಿಸಿ ಉಪಯೋಗಿಸುತ್ತಾನೆ. ಅದನ್ನೇ ದುಡಿಮೆ ಎಂದು ಕರೆದಿರುವುದು. ದುಡಿಮೆಗೆ ಶಕ್ತಿ ಬೇಕು. ಆದಿಮಾನವಿಗೆ ಇದ್ದ ಶಕ್ತಿ ಆಕರ ಒಂದೇ ಒಂದು. ಅದು ಅವನ ತೋಳು ಬಲ. ನಾಗರಿಕತೆ ಬೆಳೆದಂತೆ ಇತರ ಶಕ್ತಿ ಆಕರಗಳು ಬಳಕೆಗೆ ಬಂದವು. ಕಾಡು ಪ್ರಾಣಿಗಳನ್ನು ಪಳಗಿಸಿ ಆ ಸಾಕು ಪ್ರಾಣಿಗಳ ಶಕ್ತಿಯನ್ನು ಉಪಯೋಗಿಸಿಕೊಳ್ಳತೊಡಗಿದರು. ಬೀಸುವ ಗಾಳಿ, ಹರಿಯುವ ನೀರು, ಸೂರ್ಯನಿಂದ ಬರುವ ಶಾಖ, ಗಿಡಮರಗಳಿಂದ ದೊರಕುವ ಕಟ್ಟಿಗೆ- ಇವೆಲ್ಲ ಮನುಷ್ಯನ ದುಡಿಮೆಗೆ ಶಕ್ತಿ ಒದಗಿಸಿ ತೊಡಗಿದುವು. ಸುಮಾರು ಇನ್ನೂರು ವರ್ಷಗಳ ಕೆಳಗೆ ಪ್ರಾರಂಭವಾದ ಕೈಗಾರಿಕಾ ಕ್ರಾಂತಿ ಈ ಎಲ್ಲ ಶಕ್ತಿ ಆಕರಗಳನ್ನು ಹಿಂದಕ್ಕೆ ಹಾಕಿತು; ಈಗಿನ ನಮ್ಮ ನಾಗರಿಕ ಜೀವನದ ಅಗತ್ಯಗಳನ್ನು ಪೂರೈಸಲು ಬೇಕಾಗುವ ಶಕ್ತಿಯು ಬಹುಭಾಗ ನಮಗೆ ದೊರಕುತ್ತಿರುವುದು ಕಲ್ಲಿದ್ದಲು ಮತ್ತು ಪೆಟ್ರೋಲಿಯಮ್‌ಗಳಿಂದ. ಇವು ಹೊತ್ತಿಕೊಂಡು ಉರಿಯಬಲ್ಲವು. ಅದರಿಂದ ಬರುವ ಶಾಖದಿಂದ ನೀರು ಕಾಸಿ ಉಗಿ ಉತ್ಪತ್ತಿ ಮಾಡಬಹುದು. ಉಗಿ ಎಂಜಿನ್ನುಗಳು ನಮ್ಮ ಕೆಲಸಗಳನ್ನೆಲ್ಲ ಮಾಡಿಕೊಡುತ್ತವೆ. ಬೇಕಾದಲ್ಲಿ ಉಗಿಯಿಂದ ಟರ್ಬೈನುಗಳನ್ನು ತಿರುಗಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು ಅದು ನಮ್ಮ ಕೆಲಸಗಳನ್ನು ಇನ್ನೂ ಸುಗಮವಾಗಿ ಮಾಡಿಕೊಡುತ್ತದೆ. ಹೀಗಾಗಿ, ಇಂದು ನಾವು ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳನ್ನು ಅಗಾಧ ಪ್ರಮಾಣದಲ್ಲಿ ಉರಿಸುತ್ತಿದ್ದೇವೆ. ಅದರಿಂದ ನಮ್ಮ ಜೀವನ ಮಟ್ಟ ತುಂಬ ಏರಿದೆ. ಯಂತ್ರಗಳು ನಮ್ಮ ದೈಹಿಕ ಶ್ರಮವನ್ನು ಕಡಿಮೆ ಮಾಡಿವೆ. ಪ್ರಯಾಣ ಸುಗಮವಾಗಿದೆ. ಬಗೆಬಗೆಯ ಸಂಪರ್ಕ ಸಾಧನಗಳು ಬಂದು ದೇಶ ದೇಶಗಳ ನಡುವೆ ಸಂಪರ್ಕ ಸುಲಭವಾಗಿದೆ.

ಕಲ್ಲಿದ್ದಲು, ಪೆಟ್ರೋಲಿಯಂ ಎರಡೂ ಕೋಟ್ಯಂತರ ವರ್ಷಗಳ ಹಿಂದೆ ಜೀವಿಸಿದ್ದ

ಗಿಡಮರಗಳ ಮತ್ತು ಪ್ರಾಣಿಪಕ್ಷಿಗಳ ಅವಶೇಷಗಳು. ಪ್ರಾಚೀನ ಜೀವಿಗಳ ಅವಶೇಷಗಳನ್ನು ಫಾಸಿಲ್ ಎಂದು ಕರೆಯು ವರಷ್ಟೆ. ಆ ಕಾರಣದಿಂದ ಇವೆರಡನ್ನೂ ಒಟ್ಟಾಗಿ ಫಾಸಿಲ್ ಇಂಧನಗಳೆಂದು ಕರೆಯುವುದು ರೂಢಿ. ಈ ಫಾಸಿಲ್ ಇಂಧನಗಳು ಭೂಮಿಯಲ್ಲಿ ಸಿಕ್ಕುತ್ತವೆ. ಗಣಿ ತೋಡಿ ಕಲ್ಲಿದ್ದಲು ತೆಗೆಯುತ್ತಾರೆ. ಬಾವಿ ಕೊರೆದು ಎಣ್ಣೆಯನ್ನು ಮೇಲೆತ್ತುತ್ತಾರೆ. ಭೂಮಿಯಲ್ಲಿರುವ ಅವುಗಳ ದಾಸ್ತಾನು ಅಕ್ಷಯವಾಗಿರುವುದು ಸಾಧ್ಯವಿಲ್ಲವಷ್ಟೆ. ಎಂದಾದರೊಂದು ದಿನ ಅದು ಮುಗಿದು ಹೋಗಲೇಬೇಕು. ಇಂದು, ನಾಳೆ ಹಾಗಾಗುವ ಸಂಭವವಿಲ್ಲ, ಸಹಸ್ರಾರು ವರ್ಷಗಳವರೆಗೆ ಆ ಭಯವಿಲ್ಲ ಎಂಬ ಒಂದು ಬಗೆಯ ಕುರುಡು ಭರವಸೆ ತಳೆದು ನಾವು ಫಾಸಿಲ್ ಇಂಧನಗಳನ್ನು ಪೋಲು ಮಾಡುತ್ತ ಬಂದಿದ್ದೇವೆ. ಕಳೆದ ಸುಮಾರು ಐವತ್ತು ಅರವತ್ತು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಭೂಗರ್ಭದಲ್ಲಿರುವ ಫಾಸಿಲ್ ಇಂಧನ ಎಷ್ಟು ಎಂಬ ಬಗ್ಗೆ ವಿಜ್ಞಾನಿಗಳು ಅಂದಾಜು ಮಾಡಲು ಸಾಧ್ಯವಾಗಿದೆ. ನಾವು ಪ್ರತಿ ವರ್ಷ ಅವುಗಳನ್ನು ಎಷ್ಟು ಬಳಸುತ್ತಿದ್ದೇವೆ. ಎಂಬ ಬಗ್ಗೆ ಅಂಕಿ ಅಂಶಗಳು ಸಿಕ್ಕುತ್ತವೆ. ಅದೆಲ್ಲದರ ಆಧಾರದ ಮೇಲೆ ಲೆಕ್ಕ ಮಾಡಿ ನೋಡಲಾಗಿ, ಬರುವ ನೂರಿನ್ನೂರು ವರ್ಷಗಳಲ್ಲಿ ಕಲ್ಲಿದ್ದಲ ಗಣಿಗಳೆಲ್ಲ ಬರಿದಾಗುತ್ತವೆ ಎಂಬುದರ ಬಗ್ಗೆ ಸಂದೇಹವೇ ಇಲ್ಲ. ಎಣ್ಣೆ ಬಾವಿಗಳು ಬರುವ ಐದಾರು ದಶಕಗಳಲ್ಲೇ ಬರಿದಾಗಿ ಬಿಡುತ್ತವೆ. ಈಗಾಗಲೇ ಪರ್ಯಾಯ ಶಕ್ತಿ ಆಕರಗಳನ್ನು ಪತ್ತೆ ಮಾಡಿ ಫಾಸಿಲ್ ಇಂಧನಗಳ ಬಳಕೆಯನ್ನು ಕನಿಷ್ಠ ಮಟ್ಟಕ್ಕೆ ಇಳಿಸದೆ ಹೋದರೆ ನಮ್ಮ ಕಲ್ಪನೆಗೆ ಮೀರಿದ ಭಾರೀ ದುರಂತ ಕಟ್ಟಿಟ್ಟದ್ದು.

ಫಾಸಿಲ್ ಇಂಧನಗಳ ದಾಸ್ತಾನು ಕರಗಿ ಹೋಗುವ ಭಯ ಹಾಗಿರಲಿ ಅವುಗಳ ಉಪಯೋಗದಿಂದ ಇನ್ನೊಂದು ಭಾರೀ ವಿಪತ್ತನ್ನು ನಾವು ಆಹ್ವಾನಿಸುತ್ತಿದ್ದೇವೆ. ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳನ್ನು ಉರಿಸಿ ತಾನೆ ನಾವು ಶಕ್ತಿ ಪಡೆಯುವುದು. ಅವು ಉರಿದಾಗ ಕಾರ್ಬನ್ ಡೈಆಕ್ಸೈಡ್ ಉತ್ಪತ್ತಿಯಾಗುತ್ತದೆ. ಅದು ವಾಯು ಮಂಡಲಕ್ಕೆ ಸೇರಿಕೊಳುತ್ತದೆ. ಈಗಾಗಲೇ ನಮ್ಮ ಸುತ್ತಲ ವಾಯುವಿನಲ್ಲಿ ಕಾರ್ಬನ್ ಡೈಆಕ್ಸೈಡ್ ಇದೆ. ಅದರಿಂದ ನಮಗೆ ಒಳ್ಳೆಯದೂ ಆಗುತ್ತಿದೆ. ಸೂರ್ಯನ ಕಿರಣಗಳು ಭೂಮಿಗೆ ಬಡಿದು ಪ್ರತಿಫಲನಗೊಳ್ಳುವಾಗ ಅವುಗಳಲ್ಲಿರುವ ಶಾಖದ ಬಹುಭಾಗವನ್ನು ವಾಯುವಿನಲ್ಲಿರುವ ಕಾರ್ಬನ್ ಡೈಆಕ್ಸೈಡ್ ಹೀರಿಕೊಂಡು ಬಿಡುವುದರಿಂದ ನಮ್ಮ ವಾತಾವರಣ ಬೆಚ್ಚಗೆ ಉಳಿಸಿದೆ; ನಾವು ಮತ್ತು ಇತರ ಜೀವಿಗಳು ಇಲ್ಲಿ ಜೀವಿಸುವುದು ಸಾಧ್ಯವಾಗಿದೆ. ಫಾಸಿಲ್ ಇಂಧನಗಳ ಸುಡುವಿಕೆಯಿಂದ ನಾವು ವಾಯುಮಂಡಲದಲ್ಲಿನ ಕಾರ್ಬನ್ ಡೈಆಕ್ಸೈಡ್ ಪ್ರಮಾಣವನ್ನು ಹೆಚ್ಚಿಸುತ್ತಿದ್ದೇವೆ. ಪರಿಣಾಮವಾಗಿ ವಾಯು ಮಂಡಲದ ಸರಾಸರಿ ತಾಪ ಹೆಚ್ಚುತ್ತಿದೆ. ಕಳೆದ ಒಂದು ಶತಮಾನದಲ್ಲಿ ಅದು ಅರ್ಧ ಡಿಗ್ರಿಯಷ್ಟು ಹೆಚ್ಚಾಗಿರುವುದು ಕಂಡುಬಂದಿದೆ. ಫಾಸಿಲ್ ಇಂಧನಗಳ ಸುಡುವಿಕೆ ಹೀಗೇ ಮುಂದುವರಿದರೆ ಕ್ರಿ.ಶ. ೨೦೫೦ರ ಮೇಳೆಗೆ ಇನ್ನೂ ಒಂದೂವರೆ

ಡಿಗ್ರಿ ಹೆಚ್ಚಾಗುವುದೆಂದು ಅಂದಾಜು ಮಾಡಲಾಗಿದೆ. ಅದರ ಫಲವಾಗಿ ಧ್ರುವ ಪ್ರದೇಶಗಳಲ್ಲಿರುವ ಹಿಮ ಕರಗಿ, ಆ ನೀರು ಸಾಗರಗಳಿಗೆ ಬಂದು ಸೇರುವುದರಿಂದ ಪ್ರಪಂಚಾದ್ಯಂತ ಸಮುದ್ರ ಮಟ್ಟ ೬೦-೭೦ ಸೆಂಟಿಮೀಟರ್‌ಗಳಷ್ಟು ಏರುವುದೆಂದು ನಿರೀಕ್ಷಿಸಲಾಗಿದೆ. ಹಾಗೇನಾದರೂ ಆದರೆ ಕೆಳಮಟ್ಟದಲ್ಲಿರುವ ಹಾಲೆಂಡ್, ಬಂಗ್ಲಾ ದೇಶ, ಇಂಡೊನೇಷ್ಯ ಮುಂತಾದ ದೇಶಗಳು ಹೆಚ್ಚುಕಡಮೆ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಹೋಗುವ ಸಂಭವವಿದೆ. ಇತರ ರಾಷ್ಟ್ರಗಳಲ್ಲಿಯೂ ಕರಾವಳಿಯ ಸಮೀಪದಲ್ಲಿ ವಾಸಿಸುತ್ತಿರುವ ಕೋಟ್ಯಂತರ ಜನ ಒಳನಾಡಿಗೆ ವಲಸೆ ಹೋಗಬೇಕಾಗುವುದು.

ಅಂಥ ವಿಪತ್ತಿನಿಂದ ಪಾರಾಗಲು ಜರೂರಾಗಿ ಪರ್ಯಾಯ ಶಕ್ತಿ ಆಕರಗಳನ್ನು ರೂಢಿಸಿಕೊಳ್ಳಬೇಕಾಗಿದೆ. ಆ ಶಕ್ತಿ ಆಕರಗಳು ಫಾಸಿಲ್ ಇಂಧನಗಳಂತೆ ಮುಗಿದು ಹೋಗುವಂಥವಾಗಿರಬಾರದು, ಅವುಗಳ ನವೀಕರಣ ಸಾಧ್ಯವಿರಬೇಕು. ಅಲ್ಲದೆ ಅವುಗಳ ಬಳಕೆಯಿಂದ ಪರಿಸರಕ್ಕೆ ಘಾಸಿಯಾಗಬಾರದು, ಪರಿಸರದ ಮೇಲೆ ಅವುಗಳ ಪ್ರಭಾವ ಕಡೆಗಣಿಸುವಷ್ಟಿರಬೇಕು.

ಜಗತ್ತು ಎದುರಿಸಬೇಕಾಗಿರುವ ಈ ಸಮಸ್ಯೆಯ ಅರಿವು ಮೂಡತೊಡಗಿದ ಈ ಐದಾರು ದಶಕಗಳಲ್ಲಿ ಮೇಲುನೋಟಕ್ಕೆ ಆಕರ್ಷಕವಾಗಿ ಕಂಡ ಪರಮಾಣುಶಕ್ತಿ ಕರಗತವಾಯಿತು. ಈ ಆಕರ ನವೀಕರಣೀಯವೂ ಅಲ್ಲ, ಪರಿಸರದ ದೃಷ್ಟಿಯಿಂದ ಸುರಕ್ಷಿತವೂ ಅಲ್ಲವೆಂಬುದು ಈಚೀಚೆಗೆ ಎಲ್ಲರಿಗೂ ಗೊತ್ತಾಗುತ್ತಿದೆ. ಸಾಗರಗಳ ಅಲೆಗಳು, ಸಮುದ್ರದ ಉಬ್ಬರ ಇಳಿತಗಳು, ಬೀಸುಗಾಳಿ, ಹರಿಯುವ ನೀರು, ಸೂರ್ಯರಶ್ಮಿ ಮುಂತಾದಹಲವಾರು ನವೀಕರಣೀಯ ಶಕ್ತಿ ಆಕರಗಳನ್ನು ಪಳಗಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಆ ಪ್ರಯತ್ನಗಳಿಗೆ ದೊರೆಯುತ್ತಿರುವ ಪ್ರತಿಫಲ ಆಶಾದಾಯಕವಾಗಿಯೂ ಇದೆ. ಈ ಬದಲಿ ಶಕ್ತಿ ಆಕರಗಳ ಪೈಕಿ ಎಲ್ಲಕ್ಕಿಂತ ಹೆಚ್ಚು ಆಶಾದಾಯಕವಾಗಿ ಕಾಣಿಸುತ್ತಿರುವುದು, ಅದರಲ್ಲಿಯೂ ಬಹುಪಾಲು ಉಷ್ಣವಲಯದಲ್ಲಿರುವ ಅಭಿವೃದ್ಧಿಶೀಲ ರಾಷ್ಟ್ರಗಳ ದೃಷ್ಟಿಯಲ್ಲಿ ತುಂಬ ಆಶಾದಾಯಕವಾಗಿರುವುದು ಸೌರಶಕ್ತಿ, ಅಂದರೆ ಸೂರ್ಯರಶ್ಮಿಗಳಲ್ಲಿರುವ ಅಪಾರ ಶಕ್ತಿ.

ಸೌರಶಕ್ತಿಯ ಬಳಕೆ ಎಂದೊಡನೆಯೇ ಮೊತ್ತಮೊದಲು ನೆನಪಿಗೆ ಬರುವುದು ಸೌರಾ ಕುಕರ್—ಸೂರ್ಯರಶ್ಮಿಯ ನೆರವಿನಿಂದ ಅಡುಗೆ ಮಾಡುವ ಸಾಧನ. ಸೌರ ಕುಕರ್ ಯಶಸ್ವಿಯಾಗಿ ಕೆಲಸ ಮಾಡುವುದು ನಿಜ. ಆದರೆ ಅದಕ್ಕೆ ಹಲವಾರು ಪರಿಮಿತಿಗಳಿವೆ. ಅನಿರೀಕ್ಷಿತವಾಗಿ ಮೋಡ ಕವಿದಿರೆ ಅಂದು ಅದು ಕೆಲಸ ಮಾಡುವುದಿಲ್ಲ. ರೊಟ್ಟಿ ಸುಡುವುದೇ ಮುಂತಾದ ಕೆಲಸಗಳಿಗೆ ಅವನ್ನು ಅಳವಡಿಸಿಕೊಳ್ಳುವುದು ಕಷ್ಟ. ನಮ್ಮ ಜನರ ಜೀವನಶೈಲಿಯಲ್ಲಿ ತುಂಬ ಬದಲಾವಣೆಗಳಾಗುತ್ತಿವೆ. ನಗರಗಳಲ್ಲಿ ಕೆಲಸಕ್ಕೆ ಹೋಗುವವರಿಗೆ ಮತ್ತು ಶಾಲಾ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಬೆಳಿಗ್ಗೆ ಬೇಗ ಅಡುಗೆ ಆಗಬೇಕು. ಸೌರ ಕುಕರ್‌ನಿಂದ ಅದು ಸಾಧ್ಯವಿಲ್ಲ. ಈ ಎಲ್ಲ ಕಾರಣಗಳಿಂದ ಸೌರ ಕುಕರ್‌ನ ಉಪಯುಕ್ತತೆ ಸೀಮಿತ.

ಮನೆ ಬಳಕೆಗೆ ಹಾಗೂ ಔದ್ಯಮಿಕ ಉದ್ದೇಶಗಳಿಗೆ ಬೇಕಾಗುವ ಬಿಸಿ ನೀರನ್ನು ಸೌರ ತಾಪಕಗಳು ಸಮರ್ಪಕವಾಗಿ ಒದಗಿಸಬಲ್ಲವು. ಕಪ್ಪು ಬಣ್ಣ ಬಳಿದ ಉಷ್ಣ ಸಂಗ್ರಾಹಕಗಳನ್ನು ಬಿಸಿಲಿಗೆ ಒಡ್ಡಿದರೆ ಅವಿರ ಕೊಳವೆಗಳಲ್ಲಿನ ನೀರು ಬಹುಬೇಗ ಕಾಯುತ್ತದೆ. ಅದು ಸಂವಹನಕ್ರಿಯೆಯಿಂದ ಮೇಲೇರಿ ಹೋಗಿ ಶಾಖನಿರೋಧಕ ಹೊದಿಕೆಯುಳ್ಳ ಸ್ಟೇನ್‌ಲೆಸ್ ಸ್ಟೀಲ್ ತೊಟ್ಟಿಗಳಲ್ಲಿ ಶೇಖರಗೊಳ್ಳುವಂತೆ ಏರ್ಪಡಿಸಿಬಹುದು. ಅಂಥ ಸೌರ ತಾಪಕಗಳನ್ನು ಮನೆಗಳ ಅಥವಾ ಕಾರ್ಖಾನೆಗಳ ಸೂರುಗಳ ಮೇಲೆ ಸ್ಥಾಪಿಸಿದರೆ ಗುರುತ್ವದ ನೆರವಿನಿಂದ ಕೊಳವೆಗಳ ಮೂಲಕ ಹರಿದು ಬರುವ ನೀರನ್ನು ನಲ್ಲಿಗಳ ಮುಖಾಂತರ ಪಡೆಯಬಹುದು.

ಸೌರತಾಪಕಗಳಿಂದ ಆಗುವ ಶಕ್ತಿಯ ಉಳಿತಾಯ ಮೇಲುನೋಟಕ್ಕೆ ಅಲ್ಪವಾಗಿ ಕಾಣಬಹುದು. ಅದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಸರ್ವವಿದ್ಯುತ್ ಗೃಹಗಳು ಸ್ನಾನದ ನೀರನ್ನು ಕಾಯಿಸಲು ಬಳಸುತ್ತಿರುವ ವಿದ್ಯುತ್ತು, ಒಟ್ಟು ರಾಜ್ಯದ ವಿದ್ಯುತ್ ಬಳಕೆಯ ಹತ್ತರಲ್ಲೊಂದು ಭಾಗ ಎಂಬುದು ಅಂಕೆ ಅಂಶಗಳಿಂದ ಗೊತ್ತಾಗುತ್ತದೆ. ಅಷ್ಟು ವಿದ್ಯುತ್ತನ್ನು ಉತ್ಪಾದಿಸಲು ಸುಮಾರು ೩೫೦–೪೦೦ ಮೆಗಾವಾಟ್ ಉತ್ಪಾದನ ಸಾಮರ್ಥ್ಯಬೇಕು. ಅಂದ ಮೇಲೆ ನಾವು ಶರಾವತಿಯಲ್ಲಿ ಉತ್ಪಾದಿಸುತ್ತಿರುವ ವಿದ್ಯುತ್ತಿನ ಮೂರರಲ್ಲೊಂದು ಭಾಗ ಅದಕ್ಕೆ ವ್ಯಯವಾಗುತ್ತಿದೆ. ಅದಲ್ಲದೆ ಕಾರ್ಖಾನೆಗಳೂ ನೀರು ಕಾಯಿಸಲು ವಿದ್ಯುತ್ತನ್ನು ಬಳಸುತ್ತಿವೆ. ಅಷ್ಟು ಶಕ್ತಿಯನ್ನು ಸೌರತಾಪಕಗಳಿಂದ ಪಡೆಯಬಹುದು.

ಪರಾಬೋಲ ಆಕಾರದ ಕನ್ನಡಿಗಳನ್ನು ಬಿಸಿಲಿಗೆ ಒಡ್ಡಿ, ಪ್ರತಿಫಲಿಸಿದ ಸೂರ್ಯರಶ್ಮಿಗಳು ಒಂದು ಬಿಂದುವಿನಲ್ಲಿ ಸಾಂದ್ರೀಕರಿಸುವಂತೆ ಮಾಡಿದರೆ ಆ ಬಿಂದುವಿನಲ್ಲಿ ಅತ್ಯಧಿಕ ತಾಪ ಉಂಟಾಗುತ್ತದೆ. ಅದರ ಸಹಾಯದಿಂದ ನೀರನ್ನು ಕುದಿಸಿ, ಅದರಿಂದ ಒದಗುವ ಉಗಿಯಿಂದ ಉಗಿ ಟರ್ಬೈನುಗಳನ್ನು ಓಡಿಸಿ ವಿದ್ಯುತ್ತನ್ನು ಉತ್ಪಾದಿಸಬಹುದು. ಲಾಸ್ ಏಂಜಲೀಸ್ ನಗರದ ಲಾಜ್ ಕಾರ್ಪೊರೇಷನ್ನಿನವರು ಈ ವಿಧಾನದಿಂದ ೩೭೫ ಮೆಗಾವಾಟ್ ಸಾಮರ್ಥ್ಯದ ಒಂದು ವಿದ್ಯುತ್ ಸ್ಥಾವರವನ್ನು ನಿರ್ಮಿಸಿದ್ದಾರೆ. ಈ ವಿಧಾನದಿಂದ ಉತ್ಪಾದಿಸುವ ವಿದ್ಯುತ್ತಿನ ಬೆಲೆ ಸ್ವಲ್ಪ ಹೆಚ್ಚು: ಯೂನಿಟ್ಟಿಗೆ ೩೪ ಸೆಂಟ್ ಆಗುತ್ತದೆ. ಇದು ಪ್ರಸಕ್ತ ಬೆಲೆಯ ಸುಮಾರು ೧.೭೫ ರಷ್ಟು. ಸುಧಾರಿಸಿದ ತಂತ್ರಜ್ಞಾನವನ್ನು ಬಳಸಿಕೊಂಡು ಅಧಿಕ ಸಾಮರ್ಥ್ಯದ ಇನ್ನೊಂದು ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವ ಯೋಚನೆ ಇದೆ. ಆಗ ವಿದ್ಯುತ್ತಿನ ಬೆಲೆ ಯೂನಿಟ್ಟಿಗೆ ೧೦ ಸೆಂಟ್ ಆಗುವ ನಿರೀಕ್ಷೆ ಇದೆ.

ಸೌರಶಕ್ತಿಯಿಂದ ವಿದ್ಯುತ್ತನ್ನು ಪಡೆಯುವ ಅತ್ಯುತ್ಕೃಷ್ಟ ವಿಧಾನವೆಂದರೆ ಸೌರ ಶಕ್ತಿಯನ್ನು ನೇರವಾಗಿ ವಿದ್ಯುತ್ತಾಗಿ ಪರಿವರ್ತಿಸುವುದು. ಸಿಲಿಕಾನ್, ಜರ್ಮೇನಿಯಮ್ ಮುಂತಾದ ಅರೆವಾಹಕದ ಒಂದು ತೆಳುವಾದ ಬಿಲ್ಲೆಯ ಎರಡು ಮುಖಗಳಿಗೂ ತಕ್ಕ ಲೇಪ ಕೊಟ್ಟು ಅದನ್ನು ಬಿಸಿಲಿಗೆ ಒಡ್ಡಿದರೆ ಅದು ವಿದ್ಯುತ್ಕೋಶದಂತೆ

ವರ್ತಿಸುತ್ತದೆ. ಅಂದರೆ, ಅದರ ಎರಡು ಮುಖಗಳಿಗೆ ತಂತಿಯಿಂದ ಪರಸ್ಪರ ಸಂಪರ್ಕ ಉಂಟು ಮಾಡಿದರೆ, ಆ ತಂತಿಯ ಮೂಲಕ ವಿದ್ಯುತ್ತು ಹರಿಯುತ್ತದೆ. ಅಂಥ ಏರ್ಪಾಟನ್ನು ದ್ಯುತಿ ವಿದ್ಯುತ್ಕೋಶ ಎಂದು ಕರೆಯುತ್ತಾರೆ.

ಈ ತಂತ್ರಜ್ಞಾನ ಇನ್ನೂ ಹೊಸದಾಗಿದ್ದಾಗ ಪರಿಶುದ್ಧ ಸ್ಫಟಿಕ ಸಿಲಿಕನ್ನಿನ ಬಿಲ್ಲೆಗಳನ್ನು ಬಳಸುತ್ತಿದ್ದರು. ಸಿಲಿಕನ್ನಿಗೇನೋ ಬರವಿಲ್ಲ. ಏಕೆಂದರೆ ನಿಸರ್ಗದಲ್ಲಿ ಹೇರಳವಾಗಿ ದೊರೆಯುವ ಮರಳು ರಾಸಾಯನಿಕವಾಗಿ ಸಿಲಿಕನ್ನಿನ ಆಕ್ಸೈಡು ಅದರ ತೂಕದ ಸೇಕಡ ೫೦ ರಷ್ಟು ಸಿಲಿಕನ್ ಧಾತುವೇ. ಆದರೆ ಸೌರ ವಿದ್ಯುತ್ಕೋಶಕ್ಕೆ ಆಗ ಅಗತ್ಯವಾಗಿದ್ದ ಪರಿಶುದ್ಧ ಸ್ಫಟಿಕ ಸಿಲಿಕನ್ ತಯಾರಿಸಲು ತುಂಬ ಹಣ ಬೇಕಾಗುತ್ತಿತ್ತು. ಹೀಗಾಗಿ ಇತರ ಎಲ್ಲ ವಿಧಾನಗಳಿಗಿಂತ ಈ ವಿಧಾನದಿಂದ ತಯಾರಿಸಿದ ವಿದ್ಯುತ್ತು ದುಬಾರಿ ಎನಿಸಿಕೊಂಡಿತ್ತು. ೧೯೭೦ರಲ್ಲಿ ಅದು ಯೂನಿಟ್ಟಿಗೆ ೬೦ ಡಾಲರ್ ಆಗುತ್ತಿತ್ತು. ಅಷ್ಟು ದುಬಾರಿಯಾದರೂ ಅದನ್ನು ಒಂದು ಕ್ಷೇತ್ರದಲ್ಲಿ ಬಳಸಲೇಬೇಕಾಗಿತ್ತು; ಬಳಸುತ್ತಿದ್ದಾರು. ಕೃತಕ ಉಪಗ್ರಹಗಳಲ್ಲಿ ವಿದ್ಯುದುಪಕರಣಗಳಿಗೆ ಬೇಕಾಗುತ್ತಿದ್ದ ವಿದ್ಯುತ್ತನ್ನು ಬೇರಾವ ವಿಧಾನದಿಂದಲೂ ಒದಗಿಸುವುದು ಸಾಧ್ಯವಿರಲಿಲ್ಲ. ನಿರ್ವಾಹವಿಲ್ಲದೆ ಅದರಲ್ಲಿ ಸೌರ ವಿದ್ಯುತ್ಕೋಶಗಳನ್ನು ಬಳಸುತ್ತಿದ್ದರು.

ಅಂದು ಪರಿಸ್ಥಿತಿ ಹೇಗಿತ್ತೆಂದರೆ, ಒಂದು ವೇಳೆ ತಂತ್ರಜ್ಞಾನದಲ್ಲಿ ತುಂಬ ಸುಧಾರಣೆಯುಂಟಾಗಿ ಸೌರ ವಿದ್ಯುತ್ಕೋಶಗಳು ಅಗ್ಗವಾಗಿ ದೊರಕುವಂತಾದರೂ ಸಾರ್ವಜನಿಕ ಬಳಕೆಗೆ ಬೇಕಾಗುವ ಅಧಿಕ ಪ್ರಮಾಣದ ವಿದ್ಯುತ್ತನ್ನು ಈ ವಿಧಾನದಿಂದ ತಯಾರಿಸುವುದು ಅಸಾಧ್ಯ ಎಂದು ನಂಬಲಾಗಿತ್ತು. ಏಕೆಂದರೆ ಅಷ್ಟು ಭಾರೀ ಪ್ರಮಾಣದ ವಿದ್ಯುದುತ್ಪಾದನೆಗೆ ಸಾವಿರಾರು ಚದರ ಕಿಲೊಮೀಟರ್ ವಿಸ್ತೀರ್ಣದ ಸೌರ ವಿದ್ಯುತ್ಕೋಶಗಳನ್ನು ಬಿಸಿಲಿಗೆ ಒಡ್ಡಬೇಕಾಗುವುದರಿಂದ ಸ್ಥಳ ಅಭಾವದಿಂದಾಗಿ ನಾವು ಬೇರೆ ವಿಧಾನಗಳ ಮೊರೆ ಹೋಗಬೇಕಾಗುವುದೆಂದು ಆಗ ಭಾವಿಸಲಾಗಿತ್ತು. ಸಿಲಿಕನ್ ಬಿಲ್ಲೆಗಳನ್ನು ಜೋಡಿಸಿ ತಯಾರಿಸಿದ ಸಹಸ್ರಾರು ಚ.ಕಿಮೀ. ವಿಸ್ತೀರ್ಣದ ಹಾಯಿಪಟಗಳನ್ನು ಕೃತಕ ಉಪಗ್ರಹಗಳಲ್ಲಿ ಅಳವಡಿಸಿ ಆ ಉಪಗ್ರಹಗಳನ್ನು ಭೂಸ್ಥಾಯೀ ಕಕ್ಷೆಯಲ್ಲಿ ಸ್ಥಾಪಿಸಿ, ಅಲ್ಲಿ ಉತ್ಪತ್ತಿಯಾದ ವಿದ್ಯುತ್ತನ್ನು ಮೈಕ್ರೊವೇವ್‌ಗಳ ನೆರವಿನಿಂದ ಭೂಮಿಗೆ ರವಾನಿಸಿಕೊಳ್ಳುವ ಯೋಚನೆ ಸಹ ಮೂಡಿತ್ತು.

ಈಗ ಪರಿಸ್ಥಿತಿ ಎಲ್ಲ ರೀತಿಯಲ್ಲೂ ಬದಲಾಯಿಸಿದೆ. ಈಗ ಸೌರ ವಿದ್ಯುತ್ಕೋಶಕ್ಕೆ ಸ್ಫಟಿಕ ಸಿಲಿಕನ್ನೇ ಆಗಬೇಕೆಂಬುದೇನೂ ಇಲ್ಲ. ಅಸ್ಫಟಿಕೀಯ ಸಿಲಿಕನ್ನಿನಿಂದಲೂ ಸೌರ ವಿದ್ಯುತ್ಕೋಶವನ್ನು ನಿರ್ಮಿಸಬಹುದು. ಅರೆವಾಹಕದ ಬಿಲ್ಲೆ ಸಹ ಬೇಕಾಗಿಲ್ಲ. ಕೂದಲಿನ ದಪ್ಪದ ಐವತ್ತರಲ್ಲೊಂದರಷ್ಟು ದಪ್ಪದಿರುವ ಅರೆವಾಹಕ ಲೇಪವನ್ನು ಅನ್ಯ ಪದಾರ್ಥದ ಬಿಲ್ಲೆಯ ಮೇಲೆ ನಿಕ್ಷೇಪ ಮಾಡಿದರೂ ಆಗುತ್ತದೆ. ಸಿಲಿಕನ್‌ಗೆ ಬದಲು ಉಪಯೋಗಿಸಬಹುದಾದ ಕ್ಯಾಡ್ಮಿಯಮ್ ಟೆಲುರೈಡ್, ಗ್ಯಾಲಿಯಮ್ ಆರ್ಸೆನೈಡ್ ಮುಂತಾದ

ಪರ್ಯಾಯ ಪದಾರ್ಥಗಳೂ ಬಳಕೆಗೆ ಬಂದಿದೆ. ತಂತ್ರಜ್ಞಾನದಲ್ಲಾಗಿರುವ ಈ ಬೆಳವಣಿಗೆಗಳಿಂದಾಗಿ ಸೌರ ವಿದ್ಯುತ್ ತುಂಬ ಅಗ್ಗವಾಗುತ್ತಿದೆ. ೧೯೭೦ ರಲ್ಲಿ ಯೂನಿಟ್ಟಿಗೆ ೭೦ ಡಾಲರ್ ಆಗುತ್ತಿದ್ದುದು ೧೯೮೦ ರಲ್ಲಿ ಒಂದು ಡಾಲರ್‌ಗಿಳಿದು, ೧೯೯೦ರ ವೇಳೆಗೆ ಅದು ೨೦-೩೦ ಸೆಂಟ್‌ಗಳಿಗೆ ಬಂದಿತು. ಈ ಪ್ರವೃತ್ತಿ ಮುಂದುವರಿಯುತ್ತಲೇ ಇದೆ.

ಸೌರ ವಿದ್ಯುತ್ಕೋಶಗಳ ದಕ್ಷತೆ ಸಹ ಏರುತ್ತಿದೆ. ಆಗ ದಕ್ಷತೆ ಸೇಕಡ ೧೨ರಷ್ಟಿತ್ತು. ಅಂದರೆ ಅರೆವಾಹಕ ಬಿಲ್ಲೆಗಳ ಮೇಲೆ ಎರಗಿದ ಸೌರ ಶಕ್ತಿಯ ಸೇಕಡ ೧೨ ಭಾಗ ಮಾತ್ರ ವಿದ್ಯುತ್ತಾಗುತ್ತಿತ್ತು. ಈಗ ದಕ್ಷತೆ ೨೮ರ ಮಟ್ಟವನ್ನು ತಲುಪಿದೆ. ಅದರಿಂದ ವಿದ್ಯುದಾಗಾರಗಳಿಗೆ ಅಗತ್ಯವಾಗುವ ಸ್ಥಳ ಕಡಮೆಯಾಗುತ್ತಿದೆ. ಇಂದಿನ ಮಟ್ಟದಲ್ಲಿ ಸುಮಾರು ೧೫ ಚ.ಮೀಟರ್ ವಿಸ್ತೀರ್ಣದ ಸೌರ ವಿದ್ಯುತ್ಕೋಶಗಳ ಹಾಯಿಪಟವನ್ನು ಮನೆಯ ಚಾವಣಿಯ ಮೇಲೆ ದಕ್ಷಿಣಾಭಿಮುಖವಾಗಿ ಅಳವಡಿಸಿದರೆ, ಮಧ್ಯಮ ವರ್ಗದ ಸಾಮಾನ್ಯ ಕುಟುಂಬದ ಎಲ್ಲ ಶಕ್ತಿ ಅಗತ್ಯಗಳನ್ನು ಅದು ಪೂರೈಸಬಲ್ಲದಾಗಿದೆ. ಸೌರ ವಿದ್ಯುತ್ತಿನ ತಂತ್ರಜ್ಞಾನ ಬೆಳೆಯುತ್ತಿರುವ ಗತಿಯನ್ನು ಪರಿಗಣಿಸಿದರೆ ಇದು ನಮ್ಮ ಪ್ರಧಾನ ಶಕ್ತಿ ಆಕರವಾಗುವ ದಿನ ದೂರವಿಲ್ಲ ಅನ್ನಿಸುತ್ತದೆ.



ಇತರರ ಹಿತಚಿಂತನೆಯನ್ನೇ ಮಾಡುತ್ತಿರುವವನಿಗಿಂತ ಹೆಚ್ಚಿನ ಮಹಾದಾನಿ ಇಲ್ಲ.

—ಸಿಸಿರೊ

# ಕನ್ನಡಭಾಷಾ ಪಠ್ಯಪುಸ್ತಕಗಳ ರಚನೆಯಲ್ಲಿ ಗಮನಿಸಬೇಕಾದ ಅಂಶಗಳು

ಡಾ|| ಪಿ. ಸಿ. ಆರಾಧ್ಯ

ಶಿಕ್ಷಣವು ಉತ್ತಮ ಜೀವನಕ್ಕೆ ಅಗತ್ಯವಾಗಿ ಬೇಕಾದ ಒಂದು ಉದ್ದೇಶಪೂರ್ವಕವಾದ ಪ್ರಯೋಜನಾತ್ಮಕವಾದ ಮಾರ್ಗದರ್ಶೀ ಸೂತ್ರವೂ ಮತ್ತು ತತ್ಸಂಬಂಧಿತ ತರಬೇತಿ ಚಟುವಟಿಕೆಗಳ ಕಾರ್ಯಾತ್ಮಕ ಸಂಘಟನೆಯೂ ಆಗಿದೆ. ಈ ಕಾರ್ಯವಿಧಾನವನ್ನು ಫಲಪ್ರದವಾಗಿ ನಿರ್ದೇಶಿಸಲು ಒಂದು ನಿಶ್ಚಿತವಾದ ಕ್ರಮಬದ್ಧವಾದ ಕಾರ್ಯಯೋಜನಾ ವಿನ್ಯಾಸದ ಒಂದು ಪರಿವಿಡಿ ಅಗತ್ಯವಾಗುತ್ತದೆ. ಈ ಕಾರ್ಯಯೋಜನಾವಿನ್ಯಾಸದ ಪರಿವಿಡಿಯನ್ನೇ ಶಿಕ್ಷಣತಜ್ಞರು ಪಾಠ್ಯಕ್ರಮವೆಂದು ಕರೆಯುತ್ತಾರೆ. ಈ ಪಠ್ಯಕ್ರಮವು ಅಭ್ಯಾಸಮಾಡಬೇಕಾದ ಪಠ್ಯವಸ್ತುವನ್ನು ಸಹ ನಿರ್ಣಯಿಸುತ್ತದೆ. ಆದ್ದರಿಂದ ಶಿಕ್ಷಣದ ಗುರಿಗಳನ್ನು ಸಾಧಿಸಲು ಪಠ್ಯವಸ್ತುವು ಪ್ರಮುಖ ಸಾಧನವಾಗಿದ್ದು, ಶಿಕ್ಷಣದ ಗುರಿಗಳ ಸಾಧನೆ ಶಕ್ಯವಾಗುವಂತೆ ಪಠ್ಯವು ರೂಪಿಸಲ್ಪಡಬೇಕಾಗುತ್ತದೆ. ಅವುಗಳನ್ನು ಬೋಧಿಸುವ ಕ್ರಮವನ್ನೂ ಸಹ ಸೂಚಿಸಬೇಕಾಗುತ್ತದೆ. ಆದ್ದರಿಂದ ಈ ಪಠ್ಯವನ್ನೊಳಗೊಂಡ ಪಠ್ಯ ಪುಸ್ತಕಗಳು ಶೈಕ್ಷಣಿಕ ವ್ಯವಸ್ಥೆಯಲ್ಲಿ ಅವಶ್ಯಕವಾದ ಸಾಮಗ್ರಿಗಳಾಗಿವೆ.

ಈ ಬಗ್ಗೆ ಕನ್ನಡ ಭಾಷಾ ಪಠ್ಯ ಪುಸ್ತಕಗಳ ರಚನೆಗೆ ಸಂಬಂಧಿಸಿದಂತಹ ಒಂದು ವಾಸ್ತವಿಕ ಗುರಿ ನಿರೂಪಣೆಯನ್ನು ಇಲ್ಲಿ ನೀಡಲಾಗಿದೆ.

ಬೋಧಿಸಲು ಹಾಗೂ ಕಲಿಯಲು ಅಗತ್ಯವಾದ ಹಲವಾರು ಬೋಧನ ಸಲಕರಣೆಗಳು ಬೇಕಾಗುತ್ತವೆ. ಅವುಗಳಲ್ಲಿ ಪಾಟಿ, ಪುಸ್ತಕ, ಕಪ್ಪುಹಲಗೆ, ಪಠ್ಯ ಪುಸ್ತಕ, ಚಿತ್ರಗಳು, ಮಾದರಿಗಳೇ ಮುಂತಾದುವುಗಳು ಮುಖ್ಯವಾದ ಆವಶ್ಯಕತೆಗಳಾಗಿವೆ. ಇವುಗಳಲ್ಲಿ ಪಠ್ಯ ಪುಸ್ತಕವು ಬಹು ಮುಖ್ಯವಾದ ಸಾಧನೆ ಸಲಕರಣೆಯಾಗಿದೆಯೆಂಬುದು ಸರ್ವವಿದಿತವಾದುದೇ ಆಗಿರುತ್ತದೆ.

ಪಠ್ಯ ಪುಸ್ತಕಗಳ ಸಹಾಯವಿಲ್ಲದೆ. ಶಾಲೆಗಳಲ್ಲಿ ಬೋಧನೆ ಬಹು ಕಷ್ಟ ಸಾಧ್ಯವಾಗುತ್ತದೆ. ಏಕೆಂದರೆ ಪಠ್ಯ ಪುಸ್ತಕಗಳು ಬೋಧನೆ ಹಾಗೂ ಕಲಿಕೆಗೆ ಉಚಿತವಾದ ನೆಲೆಗಟ್ಟನ್ನು ನಿರ್ಮಿಸಿ ಉತ್ತಮವಾದ ಪರಿಣಾಮಕಾರೀ ಮಾರ್ಗದರ್ಶನವನ್ನು ನೀಡುವ ಒಂದು ಅನಿವಾರ್ಯ ಕಲಿಕೆಯ ಸಾಮಗ್ರಿಯಾಗಿರುತ್ತದೆ. ಆದ್ದರಿಂದ ಶಾಲೆಗಳಲ್ಲಿ ಪ್ರತಿಯೊಂದು ವಿಷಯಕ್ಕೂ ನಿರ್ಧರಿತವಾದ ಒಂದು ಪಠ್ಯ ಪುಸ್ತಕ ವಿರುತ್ತದೆ.

ಈ ಪಠ್ಯ ಪುಸ್ತಕಗಳು ಯಾವುದೇ ಒಂದು ಘಟ್ಟದಲ್ಲಿ ವಿದ್ಯಾರ್ಥಿಗಳು. ಜೀವನಕ್ಕೆ ಹಾಗೂ ಆ ಅಭ್ಯಾಸದ ಘಟ್ಟ ಮುಗಿದ ನಂತರ ಕಲಿಯಬೇಕಾದ ವಿಷಯ, ಕಲಿತು ಸಾಧಿಸಬೇಕಾದ ವಿಷಯ ಪ್ರಭುತ್ವದ ಅಂಶ ಗಳನ್ನು ಸಹ ದೃಷ್ಟಿಯಲ್ಲಿಟ್ಟುಕೊಂಡು ಅಭ್ಯಾಸಮಾಡಬೇಕಾದ ವಿಷಯ ಸಾಮಗ್ರಿ ಯನ್ನೊಳಗೊಂಡಿರುತ್ತವೆ. ಎಂದರೆ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳ ಪೂರ್ವಾಪರ ಜೀವನಕ್ಕೆ ಅವಶ್ಯಕವಾದ ಜ್ಞಾನಕೌಶಲ ಗಳನ್ನು ಸಾಧಿಸಲು ಅನುಕೂಲವಾಗುವ, ಬೇಕಾದ ವಿಷಯ ಸಾಮಗ್ರಿಯನ್ನು ಕಲಿಯುವವರ ಸಾಮರ್ಥ್ಯಕ್ಕನುಗುಣವಾಗಿ ಶ್ರೇಣೀಕೃತಗೊಳಿಸಿ ವ್ಯವಸ್ಥಿಗೊಳಿಸಲ್ಪಟ್ಟ ವಿಷಯ ಸಾಮಗ್ರಿಯಾಗಿವೆ.

ಈ ಎಲ್ಲ ಅಂಶಗಳನ್ನು ಪ್ರಮುಖವಾಗಿ ಭಾಷಾಮಾಧ್ಯಮದ ಮೂಲಕವೇ ಅಭಿವ್ಯಕ್ತಗೊಳಿಸಬೇಕಾಗಿರುವುದರಿಂದ, ಈ ಅಂಶಗಳನ್ನು ತಿಳಿಸಲುಬೇಕಾದ, ಭಾಷೆ ಯಲ್ಲಿ ಬಳಸಬೇಕಾದ ಪದಗಳು ಪದಪುಂಜ ಗಳು, ವಾಕ್ಯಗಳು, ವಾಕ್ಯರಚನೆಯ ರೀತಿ, ಇವುಗಳಿಗೆ ವಿಶೇಷವಾದ ಮಹತ್ವವಿದೆ. ಆದುದರಿಂದ ಭಾಷಾ ಪಠ್ಯ ಪುಸ್ತಕಗಳಿಗೆ ವಿಶೇಷವಾದ ಪ್ರಾಮುಖ್ಯತೆ ಒದಗಿ ಬರುತ್ತದೆ.

ಭಾಷೆಯ ರೂಢಿ, ಅದರಲ್ಲಿರುವ ಶಾಬ್ದಿಕ ಮಾದರಿ, ಪದಸಮೂಹದ ಸಂಗ್ರಹ ಇವು ಗಳೆಲ್ಲವೂ ಜೀವನದಲ್ಲಿನ ವ್ಯಕ್ತಿ ಹಾಗೂ ಸಮಾಜದ ನಡುವಿನ ವ್ಯವಹಾರದಲ್ಲಿ ಒಂದು ಗೊತ್ತಾದ ಕಲಿಕೆಯ ಸಾಧನವಾಗಿರದೆ ಆದೊಂದು ಸಾಮಾಜಿಕ ಅವಶ್ಯಕತೆಯೇ ಆಗಿರುತ್ತದೆ. ಆದುದರಿಂದ ಜೀವನದಲ್ಲಿ ಭಾಷೆಯ ಪ್ರಾಮುಖ್ಯತೆ ಮಹತ್ವಪೂರ್ಣ ವಾದುದೆಂದು ಭಾಷಾಶಾಸ್ತ್ರಜ್ಞರು ಅಭಿ ಪ್ರಾಯ ಪಡುತ್ತಾರೆ. ಶಾಲೆಯು ಸಮಾಜದ ಒಂದು ವಿಶೇಷ ಪರಿಸರವಾಗಿದ್ದು ಶಾಲೆಗಳಲ್ಲಿ ಭಾಷಾ ಬೋಧನೆಗೆ ವಿಶೇಷ ಗಮನ ಮಹತ್ವದ್ದಾಗಿರುತ್ತದೆ.

ಮಕ್ಕಳಿಗೆ ಸಾಕಷ್ಟು ನಿಜವಾದ ವಿವಿಧ ಅನುಭವಗಳು ಒದಗಿ ಬಂದನಂತರವೇ ಕಲ್ಪನೆಗಳು ಮಕ್ಕಳಲ್ಲಿ ನಿಧಾನವಾಗಿ ರೂಪುಗೊಂಡು ವರ್ಧಿಸುತ್ತವೆ. ಈ ಆವಿಷ್ಕರಣ ಪದ್ಧತಿಯು ಬೇರೆ ವಿಷಯಗಳ ಕ್ಷೇತ್ರಕ್ಕಿಂತ ಹೆಚ್ಚಾಗಿ ಭಾಷಾಕಲಿಯು ವಿಕೆಯ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಮಕ್ಕಳು ಬೇರೆ ಬೇರೆ ಜನಗಳು ಭಾಷೆ ಯನ್ನು ಬಳಸುವ ರೀತಿಯನ್ನು ಚೆನ್ನಾಗಿ ಅವಲೋಕಿಸುವುದರಿಂದಲೇ, ಬೇರೆ ಬೇರೆ ಉದ್ದೇಶಗಳಿಗಾಗಿ ಜನರು ಭಾಷೆಯನ್ನು ಹೇಗೆ ಬಳಸುತ್ತಾರೆಂಬುದನ್ನು, ಹೆಚ್ಚು ಪ್ರಜ್ಞಾಪೂರ್ವಕವಾಗಿ ಅರಿತು ಕಲಿಯು ತ್ತಾರೆ. ವಿಚಾರಾಭಿವ್ಯಕ್ತಿಯ ಹೆಚ್ಚು ಜಟಿಲ ವಾದ ಲಕ್ಷಣಗಳು ಅವರ ಗಮನಕ್ಕೆ ಬರು ತ್ತವೆ. ಆದುದರಿಂದ ಇಂದಿನ ದಿವಸಗಳಲ್ಲಿ ಇಂತಹ ಸಾಮಾನ್ಯ ಕಲ್ಪನೆಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಆದಷ್ಟು ಮೊದಲೇ ಬೋಧನೆಯ ಹಾಗೂ ಕಲಿಕೆಯ ಕಾರ್ಯ ಕ್ರಮಗಳನ್ನು ಅಣಿಗೊಳಿಸಬೇಕಾಗಿದೆ. ಇದರಿಂದಾಗಿ ಅವರ ಮುಂದಿನ ದಿವಸಗಳಲ್ಲಿ ಶಾಲಾದಿನದ ಅಭ್ಯಾಸದಲ್ಲಿ ಕಂಡುಬರುವ ಕಷ್ಟಗಳನ್ನು, ಜಟಿಲತೆಯನ್ನು ದೂರ ಮಾಡಲು ಸಹಾಯವಾಗುತ್ತದೆ. ಆದುದ ರಿಂದ ವಿದ್ಯಾರ್ಥಿ ಹಾಗೂ ಉಪಾಧ್ಯಾಯ

ರಿಬ್ಬರೂ ವ್ಯಕ್ತಿಗತವಾಗಿ ಅಭಿವ್ಯಕ್ತವಾಗುವ ಭಾಷೆ ಹಾಗೂ ಸಮಾಜದಲ್ಲಿ ಅದರ ಪಾತ್ರಗಳೆರಡರ ಬಗೆಗೂ ಭಾಷೆಯು ಈ ವಿಶಿಷ್ಟ ಲಕ್ಷಣವನ್ನು ಅರ್ಥಮಾಡಿಕೊಳ್ಳಬೇಕಾದುದು ಅವಶ್ಯಕವಾಗಿದೆ. ಏಕೆಂದರೆ ಈ ಅಂಶವು ಭಾಷೆಯ ಅಭಿವ್ಯಕ್ತಿಯಲ್ಲಿ ಅಡಕಗೊಂಡಿರುವ ವ್ಯಕ್ತಿಯ ಅರಿವನ್ನು, ಭಾವನೆಗಳನ್ನು, ತಪ್ಪು ಮಾರ್ಗಕ್ಕೆಳೆಯುವ ಅಂಶಗಳನ್ನು ನಿರ್ಮಲಗೊಳಿಸಿ ಯಥಾವತ್ತಾದ, ನಿಜವಾದ ಅರ್ಥವೇನೆಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

ಈ ದೃಷ್ಟಿಯಿಂದ ಭಾಷಾ ಪಠ್ಯ ಪುಸ್ತಕಗಳ ರಚನೆಗೆ ಹೆಚ್ಚು ಮಹತ್ವವಿದೆ. ಭಾಷಾ ಪಠ್ಯ ಪುಸ್ತಕಗಳ ರಚನೆಯಲ್ಲಿ ಈ ಅಂಶವನ್ನು ಚೆನ್ನಾಗಿ ಸರಿಯಾಗಿ, ಗಂಭೀರವಾಗಿ ಶಿಸ್ತಿನಿಂದ ಗಮನಿಸಬೇಕಾದುದು ಅಗತ್ಯವಾಗಿದೆ.

ಸಾಧಾರಣವಾಗಿ ಪಠ್ಯ ಪುಸ್ತಕದ ರಚನೆಯಲ್ಲಿ ಗಮನಿಸಬೇಕಾದ ಮುಖ್ಯಾಂಶಗಳಾವುವೆಂದರೆ ಅದರ 'ಹೊರಮೈ' ಮತ್ತು 'ಒಳಮೈ'.

'ಹೊರಮೈ' ಎಂದರೆ ಪಠ್ಯ ಪುಸ್ತಕದ ರಚನೆಗೆ ಬಳಸಿರುವ ಕಾಗದ ಹಾಗೂ ಅದರ ಹೊದಿಕೆಗೆ ಬಳಸಿರುವ ರಟ್ಟು, ಅದರ ಆಕೃತಿ ಇತ್ಯಾದಿಗಳನ್ನು ಗಮನಿಸಬಹುದಾಗಿದೆ. ಏಕೆಂದರೆ ಈ ವಸ್ತುಗಳು ಉತ್ತಮವಾಗಿದ್ದು ಆಕರ್ಷಕವಾಗಿರಬೇಕು. ಇಲ್ಲದಿದ್ದರೆ ಪುಸ್ತಕವು ಹಾಳಾಗಬಹುದು. ಆಕರ್ಷಕವಾಗಿರಬೇಕೆಂಬುದರ ಆಶಯವೇನೆಂದರೆ, ಸೌಂದರ್ಯಾತ್ಮಕ ದೃಷ್ಟಿಯಿಂದ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿದರೆ, ಸಹಜವಾಗಿ ವಿದ್ಯಾರ್ಥಿಗಳು ಆ ಪುಸ್ತಕವನ್ನು ಮೆಚ್ಚುವಲ್ಲಿ, ಓದುವಲ್ಲಿ, ಕಾಪಾಡಿಕೊಳ್ಳುವಲ್ಲಿ ಆಸಕ್ತಿ ವಹಿಸುವರೆಂಬುದೇ ಮುಖ್ಯ ಉದ್ದೇಶವಾಗಿರುತ್ತದೆ.

ಪುಸ್ತಕದ ಒಳಮೈ ಮಕ್ಕಳ ಆಸಕ್ತಿ, ಅನುಭವ, ಉದ್ದೇಶ ಕಲಿಯುವ ಹಾಗೂ ವಿಷಯವಸ್ತುವಿನ ಗುಣಲಕ್ಷಣಗಳು ಹಾಗೂ ಅವರ ಪ್ರಯೋಜನಾಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದನ್ನು ಸೂಚಿಸುತ್ತದೆ.

ಈ ದೃಷ್ಟಿಯನ್ನನುಲಕ್ಷಿಸಿ ಕನ್ನಡ ಭಾಷಾ ಪಠ್ಯ ಪುಸ್ತಕಗಳ ರಚನೆಯ ಬಗ್ಗೆ ತಿಳಿಯಲು ೧೯೮೩ರಲ್ಲಿ ಒಂದು ರಾಜ್ಯವ್ಯಾಪಿ ಪ್ರತಿಚಯನ ಸರ್ವೇಕ್ಷಣೆಯನ್ನು ಪ್ರಸಕ್ತ ಲೇಖಕರು ಕೈಗೊಂಡಿದ್ದರು (ಪ್ರತಿಚಯನದ ಗಾತ್ರ ೫೦ ಕನ್ನಡ ಅಧ್ಯಾಪಕರು, ೯೦೦ ವಿದ್ಯಾರ್ಥಿಗಳು) ಅದರಲ್ಲಿ ಕಂಡು ಬಂದಂತಹ ಅಂಶಗಳನ್ನು ಇಲ್ಲಿ ನಿರೂಪಿಸಲಾಗಿದ್ದು ಈ ಅಂಶಗಳನ್ನು ವೃತ್ತಿ ಬಾಂಧವರು ಗಮನಿಸಬೇಕೆಂಬುದು ಈ ಲೇಖಕರ ಆಶಯವಾಗಿದೆ.

ಅಂದಿನ ಒಂಭತ್ತನೆ ತರಗತಿಯ ಕನ್ನಡ ಪಠ್ಯ ಪುಸ್ತಕಕ್ಕೆ ಸಂಬಂಧಿಸಿದಂತೆ, ಆ ಪಠ್ಯ ಪುಸ್ತಕವನ್ನು ಬೋಧಿಸುವ ಉಪಾಧ್ಯಾಯರು ಮತ್ತು ಅದನ್ನು ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಬಂದ ಉತ್ತರದ ಸಾರಾಂಶ ಮತ್ತು ಸಂಬಂಧಿಸಿದ ವ್ಯಾಖ್ಯಾನ ಈ ರೀತಿಯಾಗಿದೆ.

ಪಠ್ಯವಸ್ತುವು ಭಾಷಾ ಕೌಶಲ ಮತ್ತು ಭಾಷಾ ಜ್ಞಾನಗಳನ್ನು ಒಳಗೊಂಡಿರುವ ಬಗ್ಗೆ ಉಪಾಧ್ಯಾಯರ ಪ್ರತಿಕ್ರಿಯೆ.

| ಕ್ರ.ಸಂ. | ಬಹಳ ಉ—ಸೇ | ಸ್ವಲ್ಪ ಉ—ಸೇ | ಇಲ್ಲ ಉ—ಸೇ |
|---|---|---|---|
| ಪಠ್ಯಪುಸ್ತಕಗಳು ಅಗತ್ಯವಾಗಿ ಕಲಿಯಬೇಕಾದ ಭಾಷಾಕೌಶಲ ಮತ್ತು ಭಾಷಾಜ್ಞಾನಗಳನ್ನು ಒಳಗೊಂಡಿದೆ. | ೩೦% | ೬೫% | ೫.೦೦% |

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ, ವಿದ್ಯಾರ್ಥಿಗಳು ಅಗತ್ಯವಾಗಿ ಕಲಿಯಬೇಕಾಗಿರುವ ಭಾಷಾ ಕೌಶಲ ಹಾಗೂ ಭಾಷಾಜ್ಞಾನಗಳನ್ನು ಪಠ್ಯಪುಸ್ತಕವು ಸ್ವಲ್ಪ ಮಟ್ಟಿಗೆ ಒಳಗೊಂಡಿದೆ ಎಂಬ ಅಭಿಪ್ರಾಯವು ಹೆಚ್ಚಾಗಿದ್ದು ಇದರ ಶೇಕಡಾ ಪ್ರಮಾಣವು ಮೊದಲನೆಯ ಸ್ಥಾನದಲ್ಲೂ, ಬಹಳಷ್ಟು ಮಟ್ಟಿಗೆ ಎಂಬುದು ಎರಡನೆಯ ಸ್ಥಾನದಲ್ಲೂ(ಎಷ್ಟುಮಟ್ಟಿಗೂ) ಅನುಕೂಲವಾಗವುದಿಲ್ಲವೆಂಬುದು ಮೂರನೆಯ ಸ್ಥಾನದಲ್ಲೂ ಇರುವುದು ಕಂಡು ಬರುತ್ತದೆ.

ಈ ದತ್ತಾಂಶದ ತೀರ್ಮಾನವು ಸೂಚಿಸುವುದೇನೆಂದರೆ ಪಠ್ಯಪುಸ್ತಕದ ರಚನೆಯು ಸರಿಸಮಾನವಾಗಿ ಪಠ್ಯಸೂಚೀ ಮಾರ್ಗದರ್ಶನಕ್ಕನುಗುಣವಾಗಿಯೋ ತತ್ಸಂಬಂಧ ತತ್ವಗಳಿಗುಣವಾಗಿಯೋ ರಚಿಸಲ್ಪಟ್ಟಿದೆಯೆಂಬುದನ್ನು ಉಪಾಧ್ಯಾಯರು ಸಮ್ಮತಿಸಿದ್ದಾರೆ. ಇದನ್ನು ಮತ್ತಷ್ಟು ಉತ್ತಮಪಡಿಸಬಹುದೆಂಬುದನ್ನು ಈ ಅಭಿಪ್ರಾಯವು ಸೂಚಿಸುತ್ತದೆ.

ಪಠ್ಯವಸ್ತುವು ಭಾಷಾಕೌಶಲ ಮತ್ತು ಭಾಷಾಜ್ಞಾನಗಳನ್ನು ಒಳಗೊಂಡಿರುವ ಬಗ್ಗೆ ೧೯೮೨–೮೩ ರ ಪಾಠಗಳು ವಿದ್ಯಾರ್ಥಿಗಳ ಪೂರ್ವಾಪರ ಜೀವನ ಹಾಗೂ ವರ್ಗಾವಧಿಗಳಿಗೆ ಸಂಬಂಧಿಸಿದಂತೆ ಉಪಾಧ್ಯಾಯರ ಪ್ರತಿಕ್ರಿಯೆ.

| ಕ್ರ.ಸಂ. | ಬಹಳ | ಸ್ವಲ್ಪ | ಇಲ್ಲ |
|---|---|---|---|
| | ಉ. ಸೇ | ಉ. ಸೇ | ಉ. ಸೇ |
| ೧ | ೧೫ | ೬೦ | ೨೫ |

ಈ ಮೇಲ್ಕಂಡ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ, ಪಠ್ಯಪುಸ್ತಕದಲ್ಲಿರುವ ಗದ್ಯ ಪಾಠಗಳಲ್ಲಿ ವಿದ್ಯಾರ್ಥಿಗಳ ಪೂರ್ವಾಪರ ಜೀವನ ಮತ್ತು ವರ್ಗಾವಧಿಗಳಿಗೆ ಸಂಬಂಧಿಸಿರುವ ಪ್ರಮಾಣವು ಸ್ವಲ್ಪಮಟ್ಟಿಗೆ ಇದೆ ಎನ್ನುವಲ್ಲಿ ಪ್ರಥಮಸ್ಥಾನದಲ್ಲೂ, ಎಷ್ಟರ ಮಟ್ಟಿಗೂ ಇಲ್ಲ ಎಂಬುದು ಎರಡನೆಯ ಸ್ಥಾನದಲ್ಲೂ, ಬಹಳಷ್ಟು ಮಟ್ಟಿಗೆ ಎಂಬುದು ಮೂರನೆಯ ಸ್ಥಾನದಲ್ಲೂ ಇರುವುದು ತಿಳಿದುಬರುತ್ತದೆ.

ಈ ದತ್ತಾಂಶದ ತೀರ್ಮಾನವು ಸೂಚಿಸುವುದೇನೆಂದರೆ ಪಾಠಗಳು ವಿದ್ಯಾರ್ಥಿಗಳ ಪೂರ್ವಾಪರಜೀವನ ಹಾಗೂ ವರ್ಗಾವಧಿಗಳಿಗನುಗುಣವಾಗಿ ಸುಮಾರಾಗಿ ಅನುಕೂಲಕಾರಿಯಾಗಿಯೋ ಸಂಬಂಧಿಸಿದಂತಹವುಗಳಾಗಿವೆ ಎಂಬುದನ್ನು ಅಭಿಪ್ರಾಯಪಡಿಸುತ್ತದೆ.

ಆದ್ದರಿಂದ ಪಾಠಗಳು ಪಠ್ಯಪುಸ್ತಕ ರಚನೆಯ ಮಾರ್ಗದರ್ಶೀ ಸೂತ್ರಗಳಿಗನು

ಗುಣವಾಗಿ ಪಾಠಗಳನ್ನು ಇನ್ನೂ ಉತ್ತಮವಾಗಿ ಆರಿಸಿಕೊಳ್ಳಬಹುದಾಗಿದೆ ಎಂಬುದನ್ನು ಈ ಅಭಿಪ್ರಾಯವು ಸೂಚಿಸುತ್ತವೆ.

ಎಂತಹ ವಿಷಯ ವಸ್ತುವಿನ ಬಗ್ಗೆ ಪಠ್ಯ ಪುಸ್ತಕದ ಪಾಠಗಳು ಬರೆಯಲ್ಪಡಬೇಕು ಎಂಬುದರ ಬಗ್ಗೆ ೧೯೫ ಜನ ಉಪಾಧ್ಯಾಯರ ಪ್ರತಿಕ್ರಿಯೆಯನ್ನು ಪಡೆದಿದ್ದು. ಪಠ್ಯಪುಸ್ತಕದಲ್ಲಿರಬೇಕಾದ ವಸ್ತುಗಳು ಕ್ರಮವಾಗಿ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪಠ್ಯಪುಸ್ತಕದಲ್ಲಿರಬೇಕಾದ ವಿಷಯವಸ್ತು |
|---|---|
| ೧. | ಮಾತೃಭಾಷೆಯ ಸಹಜ ಸ್ವಭಾವ ಹಾಗೂ ಅದರ ಸ್ಥಿತ್ಯಂತರಗತಿಗಳ ಜೀವಂತರೂಪಕ್ಕೆ ಸಂಬಂಧಿಸಿದ ವಿಷಯವಸ್ತುಗಳು. |
| ೨. | ಮಾನವೀಯ ಮೌಲ್ಯಗಳು |
| ೩. | ರಸಾಭಿನಂದನೆಗೆ ಸಂಬಂಧಿಸಿದ ಸಾಹಿತ್ಯ |
| ೪. | ವ್ಯಾವಹಾರಿಕ ಜೀವನ |
| ೫. | ಸಾಮಾಜಿಕ ಜೀವನ |
| ೬. | ನೀತಿ ಕತೆಗಳು |
| ೭. | ಧರ್ಮ |
| ೮. | ಸಂಸ್ಕೃತಿ |
| ೯. | ವಿಜ್ಞಾನ |
| ೧೦. | ಚರಿತ್ರೆ |
| ೧೧. | ಪುರಾಣ |
| ೧೨. | ಮನರಂಜನೆ |
| ೧೩. | ಪರಿಸರ |
| ೧೪. | ಆದರ್ಶ |
| ೧೫. | ಪ್ರವಾಸ ಸಾಹಿತ್ಯ |
| ೧೬. | ಸಣ್ಣಕತೆ ಹಾಗೂ ಕಾದಂಬರಿ |
| ೧೭. | ಜ್ಞಾನ ಹಾಗೂ ಕೌಶಲಗಳು |
| ೧೮. | ಸೃಜನಾತ್ಮಕತೆ |
| ೧೯. | ನವ್ಯಸಾಹಿತ್ಯ |
| ೨೦. | ಹಳಗನ್ನಡ ಸಾಹಿತ್ಯ |
| ೨೧. | ಸಂಶೋಧನೆ |
| ೨೨. | ಸ್ವವೃತ್ತಿ |
| ೨೩. | ಅರ್ಥಶಾಸ್ತ್ರ |
| ೨೪. | ರಾಜ್ಯಶಾಸ್ತ್ರ |
| ೨೫. | ನಡುಗನ್ನಡ ಸಾಹಿತ್ಯ |

ವಿಜ್ಞಾನದ ವಿವಿಧ ಶಾಖೆಯ ಪುಸ್ತಕಗಳ ಕಾಠಿಣ್ಯತೆ ಹಾಗೂ ಸುಲಭತೆಗಳ ಬಗ್ಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಯಿಂದ ತಿಳಿದು ಬರುವ ಅಂಶಗಳೆಂದರೆ ಭೌತಶಾಸ್ತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳಲ್ಲಿರುವ ಕಾಠಿಣ್ಯತೆಯ ಸೇಕಡಾವಾರು ಭಾವವು ಪಟ್ಟಣಪ್ರದೇಶದಲ್ಲಿ ಪ್ರಥಮ ಸ್ಥಾನದಲ್ಲಿಯೂ, ಪುರಪ್ರದೇಶದಲ್ಲಿ ಎರಡನೆಯ ಸ್ಥಾನದಲ್ಲಿಯೂ, ಗ್ರಾಮೀಣ ಪ್ರದೇಶದಲ್ಲಿ ಈ ಬಗ್ಗೆ ಯಾವುದೇ ಪ್ರತಿಕ್ರಿಯೆಯೂ ಇಲ್ಲದಿರುವುದು ಕಂಡು ಬರುತ್ತದೆ.

ಈ ಪುಸ್ತಕಗಳಿಗೆ ಸಂಬಂಧಿಸಿದಂತೆ ಸುಲಭತೆಯ ಸೇಕಡಾವಾರು ಭಾವವು ಪುರಪ್ರದೇಶದಲ್ಲಿ ಮೊದಲನೆಯ ಸ್ಥಾನದಲ್ಲಿಯೂ ಪಟ್ಟಣ ಪ್ರದೇಶದಲ್ಲಿ ಎರಡನೆಯ ಸ್ಥಾನದಲ್ಲಿರುವುದು ಕಂಡು ಬರುತ್ತದೆ.

ರಸಾಯನಶಾಸ್ತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳಲ್ಲಿರುವ ಕಾಠಿಣ್ಯತೆಯ ಸೇಕಡಾವಾರು ಭಾವವು ಗ್ರಾಮೀಣ ಪ್ರದೇಶದಲ್ಲಿ ಪ್ರಥಮ ಸ್ಥಾನದಲ್ಲಿಯೂ ಪುರಪ್ರದೇಶದಲ್ಲಿ ದ್ವಿತೀಯ ಸ್ಥಾನದಲ್ಲಿಯೂ ಪಟ್ಟಣ ಪ್ರದೇಶದಲ್ಲಿ ತೃತೀಯ ಸ್ಥಾನದಲ್ಲಿಯೂ ಇರುವುದು ಕಂಡುಬರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಸುಲಭವೆನ್ನುವ ಸೇಕಡಾ ಮಾನಭಾವವು ಪಟ್ಟಣ ಪ್ರದೇಶದಲ್ಲಿ ಮೊದಲನೆಯ ಸ್ಥಾನದಲ್ಲಿಯೂ ಪುರ ಪ್ರದೇಶದಲ್ಲಿ ಎರಡನೆ ಸ್ಥಾನದಲ್ಲಿಯೂ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕೊನೆಯ ಸ್ಥಾನದಲ್ಲಿಯೂ ಇರುವುದು ಕಂಡು ಬರುತ್ತದೆ.

ಜೀವಶಾಸ್ತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳಲ್ಲಿರುವ ಕಾಠಿಣ್ಯತೆಯ ಸೇಕಡಾ ಮಾನ ಭಾವವು ಪುರಪ್ರದೇಶದಲ್ಲಿ ಬಹಳಷ್ಟು ಹೆಚ್ಚಿನದಿದ್ದು, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇದರ ಬಗೆಗಿನ ಪ್ರತಿಕ್ರಿಯೆಯು ಶೂನ್ಯವಾಗಿರುತ್ತದೆ.

ಹೀಗೆಯೇ ಈ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಸುಲಭತೆಯ ಸೇಕಡಾಮಾನ ಭಾವವು ಪುರಪ್ರದೇಶದಲ್ಲಿ ಬಹಳಷ್ಟು ಕಡಿಮೆಯಿದ್ದು, ಮಿಕ್ಕುಳಿದ ವರ್ಗೀಕೃತ ಪ್ರದೇಶಗಳಲ್ಲಿನ ಪ್ರತಿಕ್ರಿಯೆಯಲ್ಲಿ ಶೂನ್ಯತೆಯಿರುವುದು ಕಂಡುಬರುತ್ತದೆ.

ಎಲ್ಲ ವರ್ಗೀಕೃತ ಪ್ರದೇಶಗಳ ದೃಷ್ಟಿಯಲ್ಲಿಯೂ ವಿಜ್ಞಾನ ಪುಸ್ತಕಗಳಲ್ಲಿ ಬಳಸಿರುವ ಭಾಷೆಯು ಒಟ್ಟಿನಲ್ಲಿ (ಸುಲಭವಾಗಿರುವುದೆಂಬ) ಅಭಿಪ್ರಾಯ ವ್ಯಕ್ತವಾಗಿದ್ದರೂ ಸಹ ಗ್ರಾಮೀಣ ವಿದ್ಯಾರ್ಥಿಗಳು, ಭೌತಶಾಸ್ತ್ರ ಮತ್ತು ಜೀವಶಾಸ್ತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದಿರುವುದು ಹಾಗೂ ರಸಾಯನಶಾಸ್ತ್ರ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಈ ಪುಸ್ತಕದಲ್ಲಿರುವ ಭಾಷೆಯು ತಮಗೆ ಕಠಿಣವೆನಿಸುವುದೆಂಬ ಭಾವನೆಯನ್ನು ವ್ಯಕ್ತಪಡಿಸಿರುವುದು, ಈ ಕ್ಷೇತ್ರಗಳಲ್ಲಿ ಬರೆಯಲ್ಪಟ್ಟಿರುವ ಪುಸ್ತಕಗಳಲ್ಲಿರುವ ಭಾಷೆಯನ್ನು, ವಿವರಣಾರೀತಿಯನ್ನು ಪರಿಶೀಲಿಸಬೇಕಾದುದು ಅಗತ್ಯವಾಗಿದೆಯೆಂದು ತಿಳಿದುಬರುತ್ತದೆ. ಈ ಕ್ಷೇತ್ರದಲ್ಲಿ ವ್ಯಕ್ತವಾಗಿರುವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪ್ರತಿಚಯನಾಪೇಕ್ಷಿತ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಗೆ ಹೋಲಿಸಿ ನೋಡಿದರೆ ಅದು ಬಹಳಷ್ಟು ಕಡಿಮೆಯಿರುವುದು, ಶಾಲಾವಿದ್ಯಾರ್ಥಿಗಳು ಈ ಕ್ಷೇತ್ರದ ಪುಸ್ತಕಗಳ ಅಭ್ಯಾಸಕ್ಕೆ ಸಾಕಷ್ಟು ಗಮನ ಕೊಡುವುದಿಲ್ಲವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಶಾಲೆಗಳಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಮೂಹಿಕವಾಗಿ ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನು ವರ್ಧಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದುದು ಅವಶ್ಯಕವೆಂದು ಇಲ್ಲಿ ಸೂಚಿಸಬಹುದಾಗಿದೆ. ಇದೇ ರೀತಿ ಗಣಿತದ ಪುಸ್ತಕಗಳಿಗೆ ಸಂಬಂಧಪಟ್ಟಂತಹ ಪುಸ್ತಕಗಳಲ್ಲಿನ ಭಾಷೆ ಹಾಗೂ ವಿವರಣೆಯಲ್ಲಿ ಕಾಠಿಣ್ಯತೆಯುಂಟೆಂಬ ಪ್ರತಿಕ್ರಿಯೆಯನ್ನು ಪಟ್ಟಣದ ಮಕ್ಕಳಷ್ಟೇ ವ್ಯಕ್ತ ಪಡಿಸಿದ್ದು ಇದು ಒಂದು ರೀತಿಯಲ್ಲಿ ಸೋಜಿಗವೆನಿಸುತ್ತದೆ. ಬೀಜಗಣಿತದ ಪುಸ್ತಕಗಳ ಬಗ್ಗೆ ಕಾಠಿಣ್ಯತೆಯನ್ನು ವ್ಯಕ್ತಪಡಿಸದಿರುವ ಗ್ರಾಮೀಣ ವಿದ್ಯಾರ್ಥಿಗಳು ರೇಖಾಗಣಿತದ ಪುಸ್ತಕಗಳಲ್ಲಿನ ವಿಷಯದ ಬಗ್ಗೆ ಕಾಠಿಣ್ಯತೆಯಿರುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ಈ ಕ್ಷೇತ್ರಗಳಲ್ಲಿನ ಪುಸ್ತಕಗಳನ್ನು ಬರೆಯುವವರು ಈ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಗ್ರಹಿಕೆಗೆ ಕಠಿಣವಾಗುವ ಅಂಶಗಳಾವುವು ಎಂಬುದನ್ನು

ಗಮನಿಸಿ, ಅದಕ್ಕನುಗುಣವಾಗಿ ಸಂಬಂಧಪಟ್ಟ ಪುಸ್ತಕಗಳನ್ನು ರಚಿಸಬೇಕೆಂದು ಇಲ್ಲಿ ಕಂಡುಬರುತ್ತದೆ.

ಸಮಾಜಶಾಸ್ತ್ರ ಕ್ಷೇತ್ರದ ಪುಸ್ತಕಗಳಲ್ಲಿನ ಭಾಷೆ ಹಾಗೂ ವಿವರಣೆಯ ಕಾಠಿಣ್ಯತೆ ಮತ್ತು ಸುಲಭತೆಯ ಬಗ್ಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಯು ಕಷ್ಟವೆನಿಸುತ್ತದೆ ಎನ್ನುವಲ್ಲಿ ಸೇಕಡಾ ೨೩.೨೨ ಪುರ ಪ್ರದೇಶದಲ್ಲಿ ೨೭.೯೧ ಗ್ರಾಮೀಣ ಪ್ರದೇಶದಲ್ಲಿ ಸೇಕಡಾ ೧೧.೮೫ ಎಂದೂ ಕಷ್ಟವೆನಿಸುವುದಿಲ್ಲ, ಪಟ್ಟಣ ಪ್ರದೇಶದಲ್ಲಿ ಸೇಕಡಾ ೭೭.೭೮, ಪುರಪ್ರದೇಶದಲ್ಲಿ ೭೨.೦೯ ಇದ್ದು ಗ್ರಾಮೀಣ ಪ್ರದೇಶದಲ್ಲಿ ೮೮.೧೫ ಎಂದೂ ದತ್ತಾಂಶ ವ್ಯಕ್ತವಾಗಿದೆ.

ಇದರಿಂದ ತಿಳಿದುಬರುವುದೇನಂದರೆ, ಸಮಾಜಶಾಸ್ತ್ರ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳಲ್ಲಿನ ಭಾಷೆ ಹಾಗೂ ವಿವರಣೆಯು ಕಠಿಣವಾಗಿರುವುದೆಂಬ ಸೇಕಡಾ ಮಾನ ಭಾವವು ಎಲ್ಲಾ ವರ್ಗೀಕೃತ ಪ್ರದೇಶಗಳಲ್ಲಿ ಕಡಿಮೆಯಿದ್ದು, ಪುರಪ್ರದೇಶದಲ್ಲಿ ಮೊದಲನೆಯ ಸ್ಥಾನವಲ್ಲೂ, ಪಟ್ಟಣಪ್ರದೇಶದಲ್ಲಿ ಎರಡನೆಯ ಸ್ಥಾನದಲ್ಲೂ, ಗ್ರಾಮೀಣ ಪ್ರದೇಶದಲ್ಲಿ ಮೂರನೆಯ ಸ್ಥಾನದಲ್ಲಿಯೂ ಇರುವುದು ಕಂಡುಬರುತ್ತದೆ.

ಈ ಪ್ರತಿಕ್ರಿಯೆಯ ಅಭಿಪ್ರಾಯವು ಗಣಿತ ಹಾಗೂ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತಹ ಅಭಿಪ್ರಾಯಗಳಿಗಿಂತ ಭಿನ್ನವಾಗಿರುವುದನ್ನು ವಿಶೇಷವಾಗಿ ಗಮನಿಸಬೇಕಾಗಿದೆ.

ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಪಠ್ಯಪುಸ್ತಕ ರಚನೆಯನ್ನು ಕುರಿತು ಆಲೋಚಿಸುವಾಗ ಈ ಮೇಲ್ಕಂಡ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು ಯೋಗ್ಯವೆನಿಸುತ್ತದೆ. ಆಗ ಪಠ್ಯಪುಸ್ತಕಗಳಿಗಾಗಿ ಆಯ್ದುಕೊಳ್ಳುವ ಪಾಠಗಳನ್ನು ಇಲ್ಲವೆ ರಚಿಸಬೇಕಾದ ಪಾಠಗಳನ್ನು ಸಮಯೋಚಿತವಾಗಿ ನಿರ್ಣಯಿಸಬಹುದಾಗಿದ್ದು, ಆ ಪಾಠಗಳನ್ನು ಬೋಧಿಸುವ ಕ್ರಮವನ್ನು ಮತ್ತು ಸಂಬಂಧಿಸಿದ ಪಾಠಗಳ ಅಭ್ಯಾಸಕ್ಕೆ ಪೂರಕವಾಗಿ ರಚಿಸುವ ಅಭ್ಯಾಸಗಳನ್ನು ವ್ಯವಸ್ಥಿತವಾಗಿ ರೂಪಿಸಲು ಅನುಕೂಲವಾಗುತ್ತವೆ ಎಂಬುದು ಈ ಲೇಖಕನ ಆಶಯವಾಗಿದೆ.



ಖಂಡನೆ ಅನೇಕವೇಳೆ ಉಪಯೋಗಕಾರಿ; ಹೊಗಳಿಕೆ ಮೋಸಪಡಿಸುತ್ತದೆ.

— ಚರ್ಚಿಲ್

# ಕ್ಸಿಂಜಿಯಾಂಗಿನ ರಕ್ಷಿತ ಶವಗಳು

**ಶಂಸ ಐತಾಳ**

ಆ ಶವಗಳ ಮೇಲೆ ಒಂದು ಸಲ ದೃಷ್ಟಿ ಹಾಯಿಸಿದ್ದೇ ಸರಿ; ವಿಕ್ಟರ್ ಮಯಿರ್ ಆಘಾತಗೊಂಡರು. ಇದು ನಡೆದದ್ದು ೧೯೮೭ರಲ್ಲಿ. ಚೀನೀ ಪ್ರಾಧ್ಯಾಪಕರಾಗಿದ್ದ ಅವರು ಅಧ್ಯಯನಪ್ರವಾಸ ಕೈಗೊಂಡಿದ್ದರು. ಚೀನಾದ ಉರುಂಚಿ ನಗರದ ವಸ್ತು ಸಂಗ್ರಹಾಲಯವೊಂದರಲ್ಲಿ ಈ ಸಂಬಂಧವಾಗಿ ತಿರುಗಾಡುತ್ತಿದ್ದಾಗ, ಅವರು ಒಂದು ಕೊಠಡಿಯಲ್ಲಿ ಆಕಸ್ಮಾತ್ ಕಾಲಿಟ್ಟರು. ಅಲ್ಲಿ ಗಾಜಿನ ಪೆಟ್ಟಿಗೆಯೊಂದರಲ್ಲಿ, ಒಂದೇ ಕುಟುಂಬದ ಮೂವರು ಸದಸ್ಯರ ಹೆಣಗಳು—ಗಂಡಸು, ಹೆಂಗಸು ಮತ್ತು ಮಗು—ಒಟ್ಟೊಟ್ಟಿಗೆ ಬಿದ್ದುಕೊಂಡಿದ್ದವು. ಸ್ತ್ರೀ-ಪುರುಷರ ದೇಹಗಳು ಕಡುಗೆಂಪು ಬಣ್ಣದ ಉದ್ದನೆಯ ಉಣ್ಣೆ ಸಿಲುವಂಗಿಗಳನ್ನು ಧರಿಸಿದ್ದವು.

"ಮೊತ್ತಮೊದಲ ಸಲ ಆ ಶವಗಳನ್ನು ನೋಡಿದ ಸಂದರ್ಭ ನೆನಪಿಗೆ ಬಂದರೆ ಈಗಲೂ ನನಗೆ ಭಯೋದ್ವೇಗಗಳುಂಟಾಗುತ್ತವೆ" ಎನ್ನುತ್ತಾರೆ ಮಯಿರ್. "ಅವು ೩೦೦೦ ವರ್ಷಗಳು ಪ್ರಾಚೀನವಾದುವಂತೆ, ಆದರೆ ನಿನ್ನೆ ತಾನೇ ಸತ್ತುಹೋದ ವ್ಯಕ್ತಿಗಳ ಕಳೇಬರಗಳಂತೆ ಅವು ಕಾಣುತ್ತಿದ್ದವು."

ಆದರೆ ಮಯಿರ್ ಅವರಿಗೆ ನಿಜವಾಗಿ ತೀವ್ರ ಆಘಾತವುಂಟಾದದ್ದು ಅವುಗಳ ಮುಖಗಳನ್ನು ತೀರ ಹತ್ತಿರದಿಂದ ನೋಡಿದಾಗಲೇ ಆ ಶವಗಳು ಸ್ಪಷ್ಟವಾಗಿ ಕಾಕೇಷನ್ ಅಥವಾ ಯೂರೋಪಿಯನ್ ದೇಹ ಲಕ್ಷಣಗಳನ್ನು ಹೊಂದಿದ್ದವು—ಅಲೆ ಅಲೆಯಾದ ಸುಂದರ ಕೂದಲುಗಳು, ಉದ್ದ ಮೂಗುಗಳು, ಗುಳಿಬಿದ್ದ ಕಣ್ಣುಗಳು ಮತ್ತು ಉದ್ದ ತಲೆಬುರುಡೆಗಳು ಇತ್ಯಾದಿ. ಈ ಲಕ್ಷಣಗಳನ್ನು ಗಮನಿಸುತ್ತಲೇ ನನಗೆ ಸಿಡಿಲು ಹೊಡೆದಂತಾಯಿತು" ಎನ್ನುತ್ತಾರೆ ಮಯಿರ್ : ಆ ಕೊಠಡಿಯಿಂದ ಹೊರಗೆ ಬರಲು ನನಗೆ ಸಾಧ್ಯವೇ ಆಗಲಿಲ್ಲ. ಈ ಜನರು ಯಾರು ಎಂಬ ಪ್ರಶ್ನೆ ನನ್ನನ್ನು ಒಂದೇ ಸಮನೆ ಕಾಡತೊಡಗಿತು."

ಕ್ಸಿಂಜಿಯಾಂಗಿನ ರಕ್ಷಿತ ಶವಗಳ ಇತಿಹಾಸ ತುಂಬ ಸ್ವಾರಸ್ಯಕರವಾಗಿದೆ. ಅವುಗಳನ್ನು ಪಡೆಯಲು ಚೀನಾದ ಪುರಾತತ್ವ ಶಾಸ್ತ್ರಜ್ಞರು ೧೯೭೦ರಿಂದೀಚೆಗೆ ಹತ್ತ

---

೧೯೯೪ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಇವಾನ್ ಹ್ಯಾಡಿಂಗ್‌ಹ್ಯಾಮ್ ಅವರ 'ದಿ ಮಮ್ಮೀಸ್ ಆಫ್ ಕ್ಸಿಂಜಿಯಾಂಗ್' ಎಂಬ ಲೇಖನದ ಆಧಾರದಿಂದ.

ಕ್ಕಿಂತಲೂ ಹೆಚ್ಚು ಸಲ ಉತ್ಖನನ ನಡೆಸಬೇಕಾಯಿತು. ವಾಯುವ್ಯ ಚೀನಾದಲ್ಲಿನ ಟಿಯಾನ್‌ಶಾನ್ ಶುಷ್ಕ ಗುಡ್ಡಪ್ರದೇಶದಿಂದ ದಕ್ಷಿಣದ ಟಕ್ಲಿಮಕಾನ್ ಮರುಭೂಮಿಯವರೆಗೆ ಚದುರಿಹೋಗಿರುವ ನಾಲ್ಕು ಪ್ರಮುಖ ಶ್ಮಶಾನಗಳಲ್ಲಿ ಸುಮಾರು ಕ್ರಿ.ಪೂ. ೨೦೦೦ದಷ್ಟು ಹಿಂದೆಯೇ ಈ ಶವಗಳ ಸಮಾಧಿ ಮಾಡಲಾಗಿತ್ತು.

ಪ್ರಾಚೀನ ಈಜಿಪ್ತಿನಲ್ಲಿ ಶವಗಳನ್ನು ಸಂಸ್ಕರಿಸಿ, ಸಂರಕ್ಷಿಸಿ ಇಡಲಾಗುತ್ತಿದ್ದುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಕ್ಸಿಂಜಿಯಾಂಗಿನಲ್ಲಿ ದೊರೆತ ಶವಗಳೇನೂ ಅರಸರ ಅಥವಾ ಶ್ರೀಮಂತರ ಶವಗಳಾಗಿರಲಿಲ್ಲ. ಅಷ್ಟೇ ಅಲ್ಲ ಅವುಗಳನ್ನು ಯಾವುದೇ ವಿಶಿಷ್ಟ ಉದ್ದೇಶದಿಂದಲೂ ಸಂರಕ್ಷಿಸಿ ಇಡಲಾಗಿರಲಿಲ್ಲ. ಕಲ್ಲುಗಳಿಂದ ಕೂಡಿದ ಬರಡು ಸುಡುಗಾಡಿನಲ್ಲಿ ಹುಗಿಯಲಾದ ಈ ಮೃತದೇಹಗಳು ಬಹುಬೇಗ ತಾವಾಗಿಯೇ ಒಣಗಿಹೋಗಿದ್ದುವು ; ಅವುಗಳ ಕೂದಲು ಚರ್ಮ ಮತ್ತಿತರ ಅಂಗಾಂಶಗಳಿಗೆ ಬಹುಮಟ್ಟಿಗೆ ಯಾವುದೇ ರೀತಿಯ ಹಾನಿ ತಟ್ಟಿರಲಿಲ್ಲ.

ಕ್ರಿ. ಪೂ. ಎರಡನೆಯ ಶತಮಾನದ ಚೀನೀ ಗ್ರಂಥಗಳಲ್ಲಿ ಯೂಜಿ ಮತ್ತು ವೂಸುನ್ ಎಂಬ ಅಲೆಮಾರಿಗಳ ಉಲ್ಲೇಖ ಕಂಡುಬರುತ್ತದೆ. ಈ ಜನರ ಮುಖ್ಯ ನಿವಾಸಸ್ಥಳ, ಚೀನಾದ ಪಶ್ಚಿಮಭಾಗದಲ್ಲಿ ಬಹುದೂರದಲ್ಲಿರುವ ಸರಹದ್ದು ಪ್ರದೇಶ. ಚೀನಾ ಮತ್ತು ಪಾಶ್ಚಿಮಾತ್ಯ ದೇಶಗಳ ನಡುವಿನ ಪ್ರಾಚೀನ ಸಂಪರ್ಕಗಳ ಬಗೆಗಿನ ಆಧುನಿಕ ಅಧ್ಯಯನಗಳು ತುಂಬ ಕಮ್ಮಿ. ಈಗ ಕೆಲವು ಪುರಾತತ್ತ್ವ ಶಾಸ್ತ್ರಜ್ಞರು, ಚಕ್ರ ಹಾಗೂ ಲೋಹಗಳಿಂದ ಮೊತ್ತ ಮೊದಲ ಬಾರಿಗೆ ತಯಾರಿಸಲಾದ ಕೆಲವು ಉಪಕರಣಗಳ ಪರಿಚಯ ಚೀನೀಯರಿಗೆ ಈ ಅಲೆಮಾರಿಗಳಿಂದಲೇ ಆಗಿರಬೇಕೆಂದು ವಾದಿಸಲು ತೊಡಗಿದ್ದಾರೆ. ಕ್ಸಿಂಜಿಯಾಂಗಿನಲ್ಲಿ ರಕ್ಷಿತ ಶವಗಳು ಪತ್ತೆಯಾದಾಗ, ವಿದ್ವಾಂಸರಿಗೆ ಈ ಕುರಿತಂತೆ ಕುತೂಹಲಕರವಾದ ಹೊಸ ಸೂಚನೆಗಳು ಕಂಡುಬಂದದ್ದರಲ್ಲಿ ಆಶ್ಚರ್ಯವಾದರೂ ಏನು ?

ಅನ್ಯದೇಶಗಳ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಸ್ವಾಗತ ನೀಡಲು ಚೀನಾ ಪ್ರಾರಂಭಿಸಿದ್ದೇ ೧೯೯೧ರಲ್ಲಿ. ಕ್ಸಿಂಜಿಯಾಂಗಿನ ರಕ್ಷಿತ ಶವಗಳಿಗೆ ಸಂಬಂಧಪಟ್ಟ ಒಗಟನ್ನು ಮಯಿರ್ ಅವರೆಗೂ ಬದಿಗಿರಿಸಿದ್ದರು. ಆಮೇಲೆ ಅವರು ಕ್ಸಿಂಜಿಯಾಂಗಿನ ಪ್ರಖ್ಯಾತ ಪುರಾತತ್ತ್ವ ಶಾಸ್ತ್ರಜ್ಞ ವಾಂಗ್ ಬಿಂಘ್ನುವ ಅವರೊಂದಿಗೆ ಸಂಪರ್ಕ ಬೆಳೆಸಿದರು. ಏಕೆಂದರೆ, ೧೯೭೮ರಲ್ಲಿ ಮೊದಲಸಲ ಕ್ವಿಜಿಲ್‌ಚೋಖ ಎಂಬ ಸ್ಥಳದಲ್ಲಿ ಈ ಶವಗಳನ್ನು ಕಂಡು ಹುಡುಕಿದ್ದು ವಾಂಗ್ ಅವರೇ.

೧೯೯೩ರ ಬೇಸಗೆಯಲ್ಲಿ, ತಮ್ಮ ಇಟಾಲಿಯನ್ ಸಹ-ಸಂಶೋಧಕರಾದ ಮಾನವಕುಲ ತಳಿ ಶಾಸ್ತ್ರಜ್ಞ ಪಾವೋಲೊ ಫ್ರಾಂಕಲಕ್ಕಿ, ವಾಂಗ್ ಮತ್ತಿತರ ಕೆಲವು ಸಹೋದ್ಯೋಗಿಗಳೊಂದಿಗೆ ಕ್ಸಿಂಜಿಯಾಂಗಿನತ್ತ ತಮ್ಮ ಸುದೀರ್ಘವೂ ದುರ್ಗಮವೂ ಆದ ಪ್ರವಾಸವನ್ನು ಕೈಗೊಂಡರು ಮಯಿರ್ ಸುಮಾರು ಎಂಟು ಹೆಕ್ಟೇರ್‌ಗಳಷ್ಟು ವಿಸ್ತಾರವಾಗಿದ್ದ ಆ ನಿವೇಶನ, ಮೃದು ಗುಡ್ಡವೊಂದರ ಮೇಲಿತ್ತು. ಆದರೆ ಅಲ್ಲಿನ ತಗ್ಗುಪ್ರದೇಶಗಳಲ್ಲಿ ಚದುರಿಹೋಗಿರುವ ಸಮಾಧಿ ಕುಳಿಗಳನ್ನು ಪತ್ತೆಮಾಡುವುದು ಅಷ್ಟೇನೂ ಕಷ್ಟಕರವಾಗಿರಲಿಲ್ಲ.

ಮಯಿರ್ ಹೆಚ್ಚುಕಾಲ ಕಾಯಬೇಕಾಗಿರಲಿಲ್ಲ. ೧.೮ ಮೀಟರ್ ಆಳದ ಒಂದು ಸಮಾಧಿ ಕುಳಿಯಲ್ಲಿ ಬಹಳ ಬೇಗನೆ ಅವರಿಗೆ ಒಂದು ಶವ ಸಿಕ್ಕಿತು. ಅದೇ ಕುಳಿಯಲ್ಲಿ ಇನ್ನೂ ಕೆಲವು ಶವಗಳಿದ್ದವು. "ಈ ದೇಹಗಳ ಪಕ್ಕದಲ್ಲಿ ನಿಂತುಕೊಂಡರೆ ಸಾಕು; ಜೀವಂತ ವ್ಯಕ್ತಿಗಳ ಸಮೀಪ ಇರುವಂತಹ ಅನುಭವ ನಿಮಗಾಗುತ್ತದೆ; ಇವು ಒಣಗಿ ಹೋದ ಶವಗಳಾಗಿದ್ದರೂ ಇನ್ನೂ ಉಸಿರಾಡುತ್ತಿರುವಂತೆ ನಿಮಗನಿಸುತ್ತದೆ" ಎನ್ನುತ್ತಾರೆ" ಮಯಿರ್.

ಈವರೆಗೆ ಕ್ವಿಜಿಲ್‌ಚೋಖದ ೧೧೩ ಸಮಾಧಿ ಕುಳಿಗಳಲ್ಲಿ ಉತ್ಖನನ ನಡೆಸಲಾಗಿದೆ. ಸುಮಾರು ಅಷ್ಟೇ ಸಂಖ್ಯೆಯ ಕುಳಿಗಳಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಕಾರ್ಬನ್–೧೪ರ ಕಾಲಗಣನ ಪದ್ಧತಿಯನ್ನು ಮತ್ತು ಶವಗಳ ಸುತ್ತಮುತ್ತ ಕಂಡುಬಂದ ವರ್ಣಚಿತ್ರಮಯ ಮಡಕೆಗಳ ಆಕೃತಿ ಮತ್ತು ವಿನ್ಯಾಸಗಳನ್ನು ಆಧರಿಸಿ ಇವುಗಳ ಕಾಲ ಸುಮಾರು ಕ್ರಿ.ಪೂ. ೧೨೦೦ ಎಂದು ನಿರ್ಧರಿಸಲಾಗಿದೆ.

ಈ ರಕ್ಷಿತ ಶವಗಳು ಸಾಮಾನ್ಯವಾಗಿ ತೊಟ್ಟಿರುವುದು ಮಿನುಗುವ, ವಿವಿಧ ಬಣ್ಣಗಳ ಉಣ್ಣೆಬಟ್ಟೆ, ಇನ್ನೂ ಕೆಲವು ಶವಗಳು ಚರ್ಮದ ನಿಲುವಂಗಿಗಳನ್ನು ಕೂಡ ತೊಟ್ಟಿವೆ. ಚರ್ಮದ ಪಾದರಕ್ಷೆಗಳು ಸಾಮಾನ್ಯವಾಗಿವೆ. ಇವುಗಳ ಕೂದಲುಗಳ ಬಣ್ಣ ಕಂದು ಮತ್ತು ಕೆಲವೊಮ್ಮೆ ಹೊಂಬಣ್ಣ. ಸ್ತ್ರೀಶವಗಳಿಗೆ ಉದ್ದ ಜಡೆಗಳುಂಟು. ಶವಗಳ ಸುತ್ತಮುತ್ತ ಸಾಮಾನ್ಯವಾಗಿ ದೊರೆತ ವಸ್ತುಗಳೆಂದರೆ, ಮಡಕೆಗಳು, ಮರದ ಬಾಚಣಿಗೆಗಳು, ಮೂಳೆಯಿಂದ ತಯಾರಿಸಲಾದ ಸೂಜಿಗಳು, ಕೊಂಡಿಗಳು, ಗಂಟೆಗಳು, ಬ್ರೆಡ್ ಹಾಗೂ ಇತರ ಆಹಾರ ವಸ್ತುಗಳ ತುಣುಕುಗಳು ಇತ್ಯಾದಿ.

ವಾಂಗ್ ಮತ್ತು ಅವರ ಸಹೋದ್ಯೋಗಿಗಳಿಗೆ ಇನ್ನಿತರ ಕೆಲವು ವಿಲಕ್ಷಣ ವಸ್ತುಗಳೂ ಸಿಕ್ಕಿವೆ. ಕ್ವಿಜಿಲ್ ಚೋಖದಿಂದ ಕೆಲವು ನೂರು ಕಿಲೋಮೀಟರ್ ಪಶ್ಚಿಮದಲ್ಲಿರುವ ಸುಬಾಶಿ ನಗರದ ಸಮೀಪದ ಕ್ರಿ.ಪೂ. ಸುಮಾರು ೪–೫ನೇ ಶತಮಾನದ ನಿವೇಶನವೊಂದರಲ್ಲಿ ೬೦ ಸೆಂ.ಮೀ. ಉದ್ದದ ಮೊಂಚಾಚುಭಾಗವಿರುವ, ಕಪ್ಪುಬಣ್ಣದ 'ಫೆಲ್ಟ್' ಟೋಪಿಯನ್ನು ಧರಿಸಿದ ಮಹಿಳೆಯೊಬ್ಬಳ ಶವ ಅವರಿಗೆ ದೊರೆತಿದೆ. ಮಧ್ಯ ಏಷ್ಯದ ಕೆಲವು ಬುಡಕಟ್ಟುಗಳಿಗೆ ಸೇರಿದ ಜನರು–ಪುರುಷರಷ್ಟೇ ಅಲ್ಲ, ಸ್ತ್ರೀಯರು ಕೂಡ-ಅಂಥ ಟೋಪಿಗಳನ್ನು ತೊಡುತ್ತಿದ್ದುದು ಈಗಾಗಲೇ ತಿಳಿದುಬಂದ ವಿಷಯ.

ಕೆಲವು ಬಗೆಯ ಪ್ರೌಢ ಚಿಕಿತ್ಸಾ ಸಂಪ್ರದಾಯಗಳಿಗೆ ಸಾಕ್ಷ್ಯಾಧಾರಗಳನ್ನು ಸಂಶೋಧಕರು ಕಂಡದ್ದು ಕೂಡ ಸುಬಾಶಿ ನಿವೇಶನದಲ್ಲಿಯೇ. ಕೆಲವೆಡೆ ಅವರಿಗೆ ಚಿಕ್ಕ ಚೂರಿಗಳು ಮತ್ತು ನಾರುಬೇರುಗಳಿಂದ ಪ್ರಾಯಃ ಔಷಧ ಸಸ್ಯಮೂಲಿಕೆಗಳಿಂದ ತುಂಬಿದ್ದ ಚೀಲಗಳೂ ಸಿಕ್ಕಿವೆ. ಶಸ್ತ್ರಚಿಕಿತ್ಸಾಕಾಲದಲ್ಲಿ ಗಾಯವನ್ನು ಹೊಲಿಯಲು ಬಳಸುತ್ತಿದ್ದಿರಬಹುದಾದ ಸೂಜಿಗಳೂ ಅವರಿಗೆ ಸಿಕ್ಕಿವೆ.

ಮೂರನೆಯ ಶತಮಾನದಲ್ಲಿ ರಚಿತವಾದ ಚೀನೀ ಗ್ರಂಥವೊಂದರಲ್ಲಿ ಹುವಟುವೊ ಎಂಬ ಪರಿಣತ ವೈದ್ಯನೊಬ್ಬನ ಬಗ್ಗೆ ವಿವರ

ಗಳಿರುವುದನ್ನು ಮಯಿರ್ ತಿಳಿದಿದ್ದರು. ಯಶಸ್ವೀ ಶಸ್ತ್ರಚಿಕಿತ್ಸೆ ನಡೆಸಿ ನ್ಯೂನಾಂಗಗಳನ್ನು ಸರಿಪಡಿಸುವ ಅಸಾಧಾರಣ ಕೌಶಲ ಆ ವೈದ್ಯನಿಗಿತ್ತಂತೆ. ಚೀನಾದೇಶದ ಪ್ರಾಚೀನ ವೈದ್ಯಕೀಯ ಸಂಪ್ರದಾಯದಲ್ಲಿ ಶಸ್ತ್ರಚಿಕಿತ್ಸೆ ರೂಢಿಯಲ್ಲಿದ್ದಿರಲಿಲ್ಲ ಎಂಬ ವಿಷಯವೂ ಮಯಿರ್‌ಗೆ ತಿಳಿದಿತ್ತು. ಆದ್ದರಿಂದ ಸುಬಾಶಿ ನಿವೇಶನದಲ್ಲಿ ಈ ಕೆಲವು ವೈದ್ಯಕೀಯ ಉಪಕರಣಗಳು ಕಂಡು ಬಂದಾಗ, ಅವರಿಗೆ ತುಂಬ ಆಶ್ಚರ್ಯವಾಯಿತು. ಹುವಟುವೊ ಎಂಬ ವೈದ್ಯನ ಕಥೆಗೆ, ಬಳಿಕೆ ತಪ್ಪಿಹೋದ, ಏಷ್ಯದ ಯಾವುದಾದರೂ ವೈದ್ಯಕೀಯ ಸಂಪ್ರದಾಯ ಸಂಬಂಧಿಸಿರಬಹುದೆ? ಈ ಸಂಪ್ರದಾಯವನ್ನು ಕ್ಸಿಂಜಿಯಾಂಗಿನ ಜನರು ಹಿಂದೆ ಆಚರಿಸುತ್ತಿದ್ದಿರಬಹುದೇ?

ಕ್ಸಿಜಿಯಾಂಗ್ ಜನರು ಎಲ್ಲಿಂದ ಬಂದಿರಬಹುದೆಂಬ ಬಗ್ಗೆ ರಕ್ಷಿತ ಶವಗಳ ಬಟ್ಟೆಗಳೂ, ಕೆಲವು ಸೂಚನೆಗಳನ್ನು ಕೊಡುತ್ತವೆ. ಆ ಬಟ್ಟೆಯ ಮಾದರಿಯೊಂದನ್ನು ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿದ ಮಾನವಶಾಸ್ತ್ರಜ್ಞ ಇರೀನ್ ಗುಡ್ ಅವರು, ಅದು ಕುರಿ ಅಥವಾ ಆಡುಗಳ ಒರಟು ರೋಮಗಳಿಂದ ತಯಾರಾದದ್ದು ಎಂದು ಕಂಡುಹಿಡಿದಿದ್ದಾರೆ. ಅದಕ್ಕೆ ಎಚ್ಚರಿಕೆಯಿಂದ ಹಸಿರು ನೀಲಿ ಕಂದು ಮೊದಲಾದ ಬೇರೆಬೇರೆ ಬಣ್ಣಗಳನ್ನು ಕೊಡಲಾಗಿತ್ತು. ಹೀಗಾಗಿ ಅದು ಶುದ್ಧ ಉಣ್ಣೆ ಬಟ್ಟೆಯಂತೆ ಕಾಣುತ್ತಿತ್ತು. ಈ ರೀತಿ ಒರಟು ರೋಮಗಳಿಂದ ಉಣ್ಣೆಯಂತಹ ಬಟ್ಟೆ ತಯಾರಿಸುವುದು ಮೂಲತಃ "ಒಂದು ವಿಶಿಷ್ಟ ಯುರೋಪಿಯನ್ ತಂತ್ರ" ಎಂದು ಗುಡ್ ಅಭಿಪ್ರಾಯ ಪಟ್ಟಿದ್ದಾರೆ. ಇಂಥ ಬಟ್ಟೆಗಳು ಅದೇ ಕಾಲದಲ್ಲಿ ಜರ್ಮನಿ ಆಸ್ಟ್ರಿಯ ಸ್ಕಾಂಡಿನೇವಿಯಗಳಲ್ಲಿ ನಡೆಸಿದ ಕೆಲವು ಉತ್ಖನನಗಳಲ್ಲಿಯೂ ದೊರೆತಿವೆ.

ಕ್ಸಿಂಜಿಯಾಂಗಿನ ಜನರು ಚೀನಾಕ್ಕೆ ಹೊರಗಿನಿಂದ ಬಂದವರೆಂಬುದಕ್ಕೆ ಸೂಚನೆ ನೀಡುವ ಇನ್ನೊಂದು ಸಾಧನವೂ ಕ್ವಿಜಿಲ್ ಚೋಖದಲ್ಲಿ ಲಭಿಸಿದೆ. ಅದೊಂದು ಮರದ ಚೂರಾಗಿದ್ದು, ಅದು ಗಾಡಿಯ ಚಕ್ರವೊಂದರ ಭಾಗವೆಂದು ಖಚಿತವಾಗಿ ತಿಳಿದು ಬಂದಿದೆ. ಮರದ ಮೂರು ಚಿಕ್ಕ ಹಲಗೆಗಳನ್ನು ಬೆಣೆ ಹಾಕುವುದರ ಮೂಲಕ ಒಟ್ಟಿಗೆ ಜೋಡಿಸಿ ಅನಂತರ ವೃತ್ತಾಕೃತಿ ನೀಡಲು ಅದರ ಹೊರಬದಿಗಳನ್ನು ಕೆತ್ತಲಾಗಿತ್ತು. ಇದೇ ರೀತಿಯ ಚಕ್ರಗಳುಳ್ಳ ಬಂಡಿಗಳು ಕ್ರಿ. ಪೂ. ೩೦೦೦ ದಷ್ಟು ಹಿಂದೆಯೇ ಉಕ್ರೈನಿನ ಹುಲ್ಲುಗಾವಲು ಪ್ರದೇಶಗಳಲ್ಲಿ ಬಳಕೆಯಲ್ಲಿದ್ದವು.

ಕ್ಸಿಂಜಿಯಾಂಗಿನ ಜನರು ಕುದುರೆ ಸವಾರಿ ಮಾಡುತ್ತಿದ್ದರೆಂಬುದಕ್ಕೂ ಪುರಾವೆ ನೀಡಬಹುದಾದ ಕೆಲವು ಪುರಾತನ ವಸ್ತುಗಳು ಸಿಕ್ಕಿವೆ. ಉದಾಹರಣೆಗೆ, ಲಗಾಮು, ಚಾವಟಿ, ಮೆತ್ತೆ ತುಂಬಿದ ಸುಂದರ ಜೀನು ಇತ್ಯಾದಿ. ಇವುಗಳ ತಯಾರಿಯಲ್ಲಿ ಅತ್ಯುತ್ಕೃಷ್ಟ ಕಾರ್ಯಕೌಶಲ ಕಂಡುಬರುತ್ತದೆ.

ಅಂದರೆ ಈ ಜನರು ಪೂರ್ವ ಯೂರೋಪಿನ ಬಯಲು ಪ್ರದೇಶಗಳಿಂದ ವಲಸೆ ಬಂದರೇ? ಹಾಗಿದ್ದ ಪಕ್ಷದಲ್ಲಿ ಅವರು ಆಧುನಿಕ ಐರೋಪ್ಯ, ಭಾರತೀಯ ಮತ್ತು ಇರಾನಿಯನ್ ಭಾಷೆಗಳಿಗಿಂತಲೂ ಪೂರ್ವದ ಪ್ರಾಚೀನ ಭಾಷೆಯೊಂದನ್ನು ಆಡುತ್ತಿದ್ದಿರಬಹುದೇ?

ಮೂರನೆಯ ಶತಮಾನದಷ್ಟು ಹಿಂದೆಯೇ, ಮಧ್ಯ ಏಷ್ಯದಲ್ಲಿ ತೊಚಾರಿಯನ್ ಎಂಬ ಇಂಡೋ-ಯೂರೋಪಿಯನ್ ಭಾಷೆಯೊಂದು ಪ್ರಚಲಿತವಾಗಿದ್ದ ಬಗ್ಗೆ ಸಾಕ್ಷ್ಯಾಧಾರಗಳು ಸಿಕ್ಕಿವೆ. ಉರುಂಬಿ ಮತ್ತು ಕಶ್‌ಗರ್‌ಗಳ ನಡುವಿರುವ ಕುಛಾ ನಗರದ ಗುಡ್ಡಗಾಡು ಪ್ರದೇಶದ ಕೆಲವು ಗುಹೆಗಳಲ್ಲಿ ತೊಚಾರಿಯನ್ ಭಾಷೆಯ ಕೆಲವು ಶಾಸನಗಳು ದೊರೆತಿವೆ. ಕ್ಸಿಂಜಿಯಾಂಗಿನ ಜನರ ಸಂಸ್ಕೃತಿ ಅನೇಕ ಶತಮಾನಗಳ ಕಾಲ ಸ್ಥಿರವಾಗಿ ಉಳಿಯಲು ಕಾರಣವೇನಿರಬಹುದೆಂದು ತಿಳಿಯಲು, ಬಹುಶಃ ಈ ಉತ್ಕೃಷ್ಟ ಭಾಷೆಯ ಜ್ಞಾನವೂ ಸಹಾಯಕವಾಗಬಹುದು.

ಕ್ರಮೇಣ ಈ ಜನರು, ಆ ಪ್ರದೇಶದ ಪ್ರಮುಖ ಜನಾಂಗವರ್ಗವಾದ ಉಯ್‌ಘರ್ ಎಂಬ ಸ್ಥಳೀಯ ಜನರೊಂದಿಗೆ ಸಮೀಕರಣಗೊಂಡಿರಬೇಕು. ಈ ಸ್ಥಳಿಯರೂ ಕೂಡ ಅಸಾಮಾನ್ಯವಾದ ದೇಹಲಕ್ಷಣಗಳನ್ನು— ಸುಂದರ ಕೂದಲು, ಉದ್ದನೆಯ ಮೂಗು ಇತ್ಯಾದಿ–ಹೊಂದಿದ್ದಾರೆ. ಈ ಜನರ ಮತ್ತು ಇನ್ನಿತರ ಪ್ರದೇಶಗಳ ಜನರ ರಕ್ತ, ಕೂದಲು ಮೊದಲಾದವುಗಳ ಮಾದರಿಯನ್ನು ಅಧ್ಯಯನ ಮಾಡಿದ ಮಯಿರ್, ಫ್ರಾಂಕಲಕ್ಕಿ ಹಾಗೂ ಅವರ ಚೀನೀ ಸಹೋದ್ಯೋಗಿಗಳು ಈಗ ಕ್ಸಿಂಜಿಯಾಂಗಿನ ಪ್ರಾಚೀನ ರಕ್ಷಿತ ಶವಗಳ ಮೂಳೆ ಮತ್ತು ಇತರ ಅಂಗಾಂಶಗಳ ಸೂಕ್ಷ್ಮ ಪರಿಶೀಲನೆ ನಡೆಸಿ ಅವರ ಡಿಎನ್‌ಎಯನ್ನು ಸಿದ್ಧಪಡಿಸುತ್ತಿದ್ದಾರೆ.

ಪ್ರಾಚೀನ ಕಾಲದಲ್ಲಿ ಆ ದೂರದ ಮರುಭೂಮಿಯ ಓಯೆಸಿಸ್ ಪ್ರದೇಶಗಳಲ್ಲಿ ಈ ಜನರು ಏನುಮಾಡುತ್ತಿದ್ದರೆಂಬುದು ಮಾತ್ರ ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಸ್ವಂತ ರಥಗಳನ್ನು ಹೊಂದಿರುವಷ್ಟು ಶ್ರೀಮಂತರಲ್ಲದ ಅವರು ಕನಿಷ್ಠಪಕ್ಷ ಬಂಡಿಗಳನ್ನು ಹಾಗೂ ಉತ್ತಮ ಬಟ್ಟೆಗಳನ್ನು ಹೊಂದಿರುವಷ್ಟಾದರೂ ಶಕ್ತರಾಗಿರಬಹುದು. ಕುರಿಗಳು ಮತ್ತು ಆಡುಗಳನ್ನು ಆರ್ಥಿಕ ದೃಷ್ಟಿಯಿಂದ ಸಾಕುತ್ತಿದ್ದ ಈ ಜನರು, ಇತಿಹಾಸಪೂರ್ವ ಕಾಲದಲ್ಲಿಯೇ ಇತರ ಪ್ರದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ಇಟ್ಟುಕೊಂಡಿದ್ದಿರಬಹುದು.

ಕ್ಸಿಂಜಿಯಾಂಗಿನ ಜನರ ಬಗೆಗಿನ ಹಲವು ಪ್ರಶ್ನೆಗಳಿಗೆ ಉತ್ತರ ದೊರೆಯುವುದು ನಿಧಾನವಾಗಬಹುದು. ಆದರೆ ಉತ್ಖನನದಲ್ಲಿ ದೊರೆತ ಈ ಪ್ರಾಚೀನ ಅವಶೇಷಗಳೂ ಎಂದಾದರೊಮ್ಮೆ ಕ್ಸಿಂಜಿಯಾಂಗಿನ ಪ್ರಾಚೀನ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವುದರಲ್ಲಿ ಅನುಮಾನವಿಲ್ಲ.

ಈ ರಕ್ಷಿತ ಶವಗಳು ಮತ್ತು ಲಭ್ಯವಾದ ಪುರಾತನ ವಸ್ತು ವಿಶೇಷಗಳೆಲ್ಲ ಸಧ್ಯ ಉರುಂಬಿಯಲ್ಲಿರುವ, ಪುರಾತತ್ತ್ವ ಶಾಸ್ತ್ರ ಸಂಸ್ಥೆಯ ವಸ್ತುಸಂಗ್ರಹಾಲಯದ ನೆಲಮಹಡಿಯಲ್ಲಿ ಸುರಕ್ಷಿತವಾಗಿವೆ. ಇವುಗಳಿಗಾಗಿಯೇ ಪ್ರತ್ಯೇಕವಾದ ಅತ್ಯುತ್ಕೃಷ್ಟ ವಸ್ತುಸಂಗ್ರಹಾಲಯವೊಂದನ್ನು ಕಟ್ಟಬೇಕೆಂಬ ಮಯಿರ್ ಅವರ ಮಹತ್ವಾಕಾಂಕ್ಷೆ, ಯಾವುದಾದರೂ ಆರ್ಥಿಕ ನೆರವಿನಿಂದ ಪೂರೈಸಿದ್ದೇ ಆದರೆ, ಆಗ ಇವುಗಳ ರಹಸ್ಯವನ್ನು ಬಯಲು ಮಾಡುವಂತಹ ವಿಶೇಷ ಅಧ್ಯಯನಗಳು ನಡೆದಾವು. ಹಾಗಾಗಲಿ ಎಂದು ಆಶಿಸೋಣ.

# ಸುಖ ಶಾಂತಿಯ ಸಾಧನ - ಅಹಿಂಸೆ

**ಪಿ. ಶಿವಕುಮಾರಿ**

ಜಗತ್ತಿನ ಎಲ್ಲಾ ಜೀವಿಗಳು ಬಯಸುವುದು – ಸುಖ. ದುಃಖ. ಮೃತ್ಯು ಮುಂತಾದ ಹೆಸರುಗಳ ಶ್ರವಣ ಮಾತ್ರದಿಂದಲೇ ಭಯ ಉತ್ಪನ್ನವಾಗುವುದು. ಆದಾಗ್ಯೂ ಕೆಲವು ಇಂತಹಾ ಪ್ರಾಣಿಗಳೂ (ಮನುಷ್ಯ) ಇರುತ್ತವೆ–ತಮ್ಮ ಸುಖಕ್ಕಾಗಿ, ಸ್ವಾರ್ಥ–ಸಾಧನೆಗಾಗಿ ಎಷ್ಟೊಂದು ಪ್ರಾಣಿಗಳಿಗೆ ತೊಂದರೆಯನ್ನು ನೀಡುವುದಲ್ಲದೇ ಈ ಕಾರ್ಯಕ್ಕಾಗಿ ಯಾವುದೇ ಪ್ರಾಣಿಯನ್ನು ಕೊಲ್ಲಬೇಕಾಗಿ ಬಂದರೂ ಇವರು ಹಿಂಜರಿಯುವುದಿಲ್ಲ. ಇಲ್ಲಿ ಒಂದು ಪ್ರಶ್ನೆಯು ನಮ್ಮ ಮುಂದೆ ಬೃಹದಾಕಾರವಾಗಿ ನಿಲ್ಲುವುದು. ಯಾವುದೇ ಪ್ರಾಣಿಗೆ ಜೀವದಾನ ಮಾಡುವ ಶಕ್ತಿ ನಮ್ಮಲ್ಲಿಲ್ಲವೆಂದಾದ ಮೇಲೆ ಅವುಗಳ ಜೀವ ತೆಗೆಯುವ ಹಕ್ಕು ನಮಗಿದೆಯೇ ? ನಾವು ಮನುಷ್ಯರು ಬುದ್ಧಿ, ವಿವೇಕವುಳ್ಳವರಾಗಿಯೂ ಪಶುಗಳಂತೆ ಪಾಶವೀಕೃತ್ಯ, ಆಸುರೀ ವೃತ್ತಿಯನ್ನ ಕೈಗೊಂಡರೆ ಪ್ರಾಣಿಗಳಿಗಿಂತ ಯಾವ ರೀತಿಯಲ್ಲಿ ಶ್ರೇಷ್ಠರು ಎನಿಸುವುದಿಲ್ಲವೇ ? ಹಿಂಸಾ ಪ್ರವೃತ್ತಿಯೇ ನಮ್ಮನ್ನು ಆಸುರೀ ವೃತ್ತಿಯೆಡೆಗೆ ಕೊಂಡೊಯ್ದು ವಿನಾಶವನ್ನು ತಂದೊಡ್ಡುವುದು.

ಮಾನವನಲ್ಲಿ ಮಾನವೀಯತೆ, ಸಜ್ಜನತೆ, ಕೋಮಲತೆ, ಮೃದುತ್ವ, ಪರೋಪಕಾರ ಮುಂತಾದ ಗುಣಗಳಿರಬೇಕು. ಈ ಗುಣಗಳಿಲ್ಲದವನು ದಾನವನೆಂದು ಕರೆಯಲ್ಪಡುತ್ತಾನೆ. ಪರರಿಗೆ ಕಷ್ಟವನ್ನೀಯುವುದು, ಪರದುಃಖದಲ್ಲಿ ತನ್ನ ಸುಖವನ್ನು ಕಾಣುವುದು, ಅಸಹಾಯಕ ಮನುಷ್ಯನನ್ನು ತೆಗಳುವುದು ಮುಂತಾದ ಕಾರ್ಯಗಳು ಹಿಂಸೆ ಎನಿಸಿಕೊಳ್ಳುವುದು.

ಇಂದು ವಿಶ್ವದಲ್ಲಿ ಹಬ್ಬಿರುವಂತಹ ಹಿಂಸೆ ಮತ್ತು ಅಶಾಂತಿಯ ಕಾರಣ ಸ್ವಾರ್ಥ. ಜಗತ್ತಿನಲ್ಲಿ ಪ್ರತಿಯೊಬ್ಬನೂ ಜೀವಿಸಲು ಸ್ವತಂತ್ರನು. ಆದರೂ ಈ ರೀತಿಯ ಹಿಂಸಾ ಪ್ರವೃತ್ತಿಯು ಯಾಕೆ ತುಂಬಿಕೊಂಡಿದೆ ? ಕೇವಲ ಸ್ವಾರ್ಥ ಮತ್ತು ಮಾನವೀಯತೆಯ ಕೊರತೆ. ಎಷ್ಟೊಂದು ನಿರಪರಾಧಿಗಳು ಸಭ್ಯ ಎನಿಸಿಕೊಂಡ ವ್ಯಕ್ತಿಯೊಂದಿಗೆ ತನ್ನ ಕರುಣ ಕಥೆಯನ್ನು ಹೇಳಿ ಆಶ್ರಯ ಬೇಡುವನೋ ಅವನನ್ನು ರಕ್ಷಿಸುವ ಬದಲು ಭಕ್ಷಿಸಿದರೆ ಇಂತಹ ನಿರಪರಾಧಿಗಳನ್ನು ರಕ್ಷಿಸುವವರ್ಯಾರು ?

ಮಾನವನ ಇನ್ನೊಂದು ಹಿಂಸಾತ್ಮಕ ಪ್ರವೃತ್ತಿ ಮೂಕ ಪಶುಪಕ್ಷಿಗಳನ್ನು ಕೊಲ್ಲುವುದು. ಸಾಮಾನ್ಯ ಜನರ ಹೊರತಾಗಿ,

ಇಂದು ನಮ್ಮ ಸರಕಾರವೇ ಸಾಕಪ್ಪು ಪ್ರಾಣಿಗಳ ಮಾಂಸವನ್ನು ಹೊರ ದೇಶಗಳಿಗೆ ರಫ್ತು ಮಾಡಿ ಲಾಭಗಳಿಸುತ್ತಿಲ್ಲವೇ? ಈ ರೀತಿ ನಿರಪರಾಧಿಗಳ ರಕ್ತ ಹರಿಸಿ ಸಂಪಾದಿಸಿದ ಹಣ ನ್ಯಾಯಸಮ್ಮತವೇ? ಅಥವಾ ಇದರಲ್ಲಿ ಮಾನವೀಯತೆ ಅಡಗಿದೆಯೇ? ಭಗವಂತನ ಸೃಷ್ಟಿಯಾದ ಮನುಷ್ಯರಂತೆ ಪ್ರಾಣಿಗಳೂ ಸ್ವತಂತ್ರರಲ್ಲವೇ? ಅವುಗಳನ್ನು ಕೊಲ್ಲಲು ಭಗವಂತನು ನಮಗೆ ಅನುಮತಿಯನ್ನು ನೀಡಿರುವನೇ?

ಇನ್ನು ಇಂದಿನ ದಿನಗಳಲ್ಲಿ ಜೀವನ ನಿರ್ವಹಣೆಗಾಗಿ ದುಡಿಯುವ ಸ್ತ್ರೀ ಪುರುಷರ ಮೇಲಿನ ದಬ್ಬಾಳಿಕೆ, ಮೇಲಾಧಿಕಾರಿಗಳಿಂದ. ಇದೂ ಒಂದು ಹಿಂಸೆ. ಮೇಲಧಿಕಾರಿಯಲ್ಲಿ ಮಾನವೀಯತೆ ಇದ್ದರೆ ಹಿಂಸೆ ತಪ್ಪುವುದು.

ಇನ್ನು ಒಬ್ಬ ವ್ಯಕ್ತಿಯು ಅಸಹಾಯಕ ಪರಿಸ್ಥಿತಿಯಲ್ಲಿರುವಾಗ ನಾವು ಅವನನ್ನು ತಮಾಷೆ ಮಾಡುತ್ತೇವೆ. ಇದೂ ಅವನಿಗೆ ಹಿಂಸೆಯಾಗಬಹುದು. ಆದರೆ ನಾವು ಈ ರೀತಿ ತಮಾಷೆ ಮಾಡುವ ಅಥವಾ ನಿಂದಿಸುವ ಮೊದಲು, ನಮ್ಮನ್ನು ನಾವೇ ಈ ಅಸಹಾಯಕ ಪರಿಸ್ಥಿತಿಯಲ್ಲಿ ಕಲ್ಪಿಸಿಕೊಳ್ಳಬೇಕು. ಆಗ ಈ ವ್ಯಕ್ತಿಯು ತಮಾಷೆ, ನಿಂದೆ ಎಂಬ ಹಿಂಸೆಯ ಸುಳಿಯಲ್ಲಿ ಸಿಲುಕಿ ನಲುಗಲಾರನು.

ಅಹಿಂಸೆಯೇ ಮಾನವನ ಪರಮಧರ್ಮ ಎನ್ನುವಂತೆ ಪ್ರತಿಯೊಬ್ಬ ವ್ಯಕ್ತಿಯೂ ಹಿಂಸಾ ಪ್ರವೃತ್ತಿಯನ್ನು ಬಿಟ್ಟು, ಅಹಿಂಸೆಯ ಮಾರ್ಗದಲ್ಲಿ ನಡೆದರೆ ಜಗತ್ತಿನಲ್ಲಿ ಸುಖ ಶಾಂತಿಯು ನೆಲಸುವುದರಲ್ಲಿ ಯಾವುದೇ ಸಂಶಯವಿಲ್ಲ. ಯಾವುದೇ ಸಂದರ್ಭದಲ್ಲಿಯೂ ದರ್ಪ, ಅಹಂಕಾರವನ್ನು ಬಿಂಬಿಸದೆ ಭಗವಂತನ ಭಯದಿಂದ ನಡೆದರೆ ಅಹಿಂಸಾ ಮಾರ್ಗದಲ್ಲಿ ನಡೆಯಬಹುದು. ಮಾನವೀಯತೆಯನ್ನು ಮೆರೆಯುವ ಸದ್ಬುದ್ಧಿಯನ್ನು ಭಗವಂತನು ಸರ್ವರಿಗೂ ಕರುಣಿಸಲಿ.



ಶಿಕ್ಷಣಕ್ಕಿಂತಲೂ ಮಾನವನಿಗೆ ಶೀಲ, ಚಾರಿತ್ರ್ಯಗಳು ಹೆಚ್ಚು ಅವಶ್ಯಕ.

—ಸ್ಪೆನ್ಸರ್

# ಮೂಳೆ ಸವೆತ ಮತ್ತು ಮಹಿಳೆಯರು ವಹಿಸಬೇಕಾದ ಎಚ್ಚರ

**ಸತ್ಯಮೂರ್ತಿ**

ತನ್ನ ಸರದಿಗಾಗಿ ಅಂಗಡಿಯ ಬಳಿ ಕಾಯುತ್ತ ನಿಂತಿದ್ದ ೪೦ ವರ್ಷ ವಯಸ್ಸಿನ ನಾನ್ಸಿ ಮಿಲ್ಲರ್ ಸೊಂಟದ ಎಡಭಾಗದಲ್ಲಿ ಉಂಟಾದ ಇರಿತದಂತಹ ನೋವನ್ನು ಅನುಭವಿಸಿದಳು. ಯಾವಾಗಲೂ ಆರೋಗ್ಯವಾಗಿ ಹಾಗೂ ಚಟುವಟಿಕೆಯಿಂದಿದ್ದ ಆಕೆಗೆ ಆ ಕ್ಷಣ ನಿಲ್ಲುವುದೂ ತ್ರಾಸದಾಯಕವೆನಿಸಿತು. ತನ್ನ ಕುಟುಂಬದ ವೈದ್ಯರ ಬಳಿ ಹೋದಾಗ ಅವಳಿಗೆ ತಿಳಿಯಿತು–ತನ್ನ ಬೆನ್ನೆಲುಬಿನಲ್ಲಿ ಅನೇಕ ಬಿರುಕುಗಳು ಉಂಟಾಗಿವೆ ಎಂದು. ಕ್ಷ ಕಿರಣ ವೀಕ್ಷಿಸಿದ ತಜ್ಞನಿಗೆ ತಾನು ೭೦ ವರ್ಷದ ವಯಸ್ಸಿನ ವ್ಯಕ್ತಿಯ ಮೂಾಳೆಗಳನ್ನು ಅಭ್ಯಸಿಸುತ್ತಿದ್ದೇನೆಂದು ಭಾಸವಾಯಿತು.

ಲೀಲಾ ರೂಬಿನ್ ಗಾಲ್ಫ್ ಮೈದಾನದಲ್ಲಿ ಆಗಷ್ಟೇ ಚೆಂಡನ್ನು ಹೊಡೆದಿದ್ದಳು. ತನ್ನ ಕೈಲಿದ್ದ ಗಾಲ್ಫ್ ದಾಂಡನ್ನು ಕೆಳಕ್ಕೆ ಹಾಕಿದ ೬೩ ವರ್ಷ ವಯಸ್ಸಿನ ಸದೃಢ ಮೈಕಟ್ಟಿನ ಆ ಮಹಿಳೆ ಬೆನ್ನಿನಲ್ಲುಂಟಾದ ಸೀಳು ನೋವಿನಿಂದ ತತ್ತರಿಸಿದಳು. ಆಕೆ ಅಸ್ಥಿಶಸ್ತ್ರ ಚಿಕಿತ್ಸಕರನ್ನು ಭೇಟಿಯಾದಳು. ಗಂಭೀರವಾದ ಒತ್ತಡದ ಮೂಳೆ ಮುರಿತಕ್ಕೆ ಆಕೆ ಒಳಗಾಗಿದ್ದಾಳೆಂದು ಅವರು ಅವಳಿಗೆ ತಿಳಿಸಿದರು.

ತನ್ನ ಬೆನ್ನುಮೂಳೆಯ ಮೇಲ್ಭಾಗದಲ್ಲಿ ಒಂದು ಸಣ್ಣ ಬಾಗು ಉಂಟಾಗಿರುವುದನ್ನು ಏಳು ವರ್ಷಗಳ ಹಿಂದೆ ತನ್ನ ವೈದ್ಯರು ಪತ್ತೆಹಚ್ಚಿದಾಗ ಡೆಬ್ರಾ ಎಪ್‌ಸ್ಟೀನ್‌ಗೆ ಅಂಥ ಚಿಂತೆ ಎನಿಸಲಿಲ್ಲ. ಏಕೆಂದರೆ ಆಗ ೩೦ರ ಹರೆಯದ ಅವಳ ಆರೋಗ್ಯ ಅತ್ಯುತ್ತಮವಾಗಿತ್ತು. ಕಳೆದ ವರ್ಷ ಬಲ ಮಣಿಕಟ್ಟಿನಲ್ಲಿ ನೋವು ಉಂಟಾಗತೊಡಗಿತು. ಸುಲಭವಾಗಿ ಅವಳ ಬೆನ್ನು ಬಳಲಿ ಹೋಗುತ್ತಿತ್ತು. ಅಲ್ಪಶ್ರಮದಿಂದಲೂ ಅವಳಿಗೆ ಬೆನ್ನು ನೋವು ಉಂಟಾಗುತ್ತಿತ್ತು. ೩೭ ವರ್ಷದ ಅವಳ ವೈದ್ಯಕೀಯ ಪರೀಕ್ಷೆಯಿಂದ ಆಕೆ ತಿಳಿದದ್ದು–ತನಗಿಂತಲೂ ಎರಡರಷ್ಟು ವಯಸ್ಸಾಗಿದ್ದ ಮಹಿಳೆಯ ಮೂಳೆಗಳಲ್ಲಿ ಉಂಟಾಗುವಂತಹ ಬಿರುಕುಗಳು ತನ್ನ ಮೂಳೆಗಳಲ್ಲಿ ಉಂಟಾಗಿದೆಯೆಂದು!

---

೧೯೯೪ ನೇ ಸೆಪ್ಟೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಪರ್ ಓಲ ಮತ್ತು ಎಮಿಲಿ ಡಿ'ಅಲ್ಬೆರ್ ಅವರ "ದಿ ಹೆಲ್ತ್ ರಿಸ್ಕ್ ವುಮೆನ್ ಕುಡ್‌ನಾಟ್ ಇಗ್ನೋರ್" ಎಂಬ ಲೇಖನದ ಅನುವಾದ.

ಮೇಲ್ಕಾಣಿಸಿದ ವ್ಯಕ್ತಿಗಳು ಮೂಳೆ ಸವೆತದಿಂದ ನರಳುತ್ತಿರುವ ಲಕ್ಷಾಂತರ ಸ್ತ್ರೀಯರ ಸಾಲಿಗೆ ಸೇರಿದವರು. ಮೂಳೆ ಸವೆತದ ಕ್ರಿಯೆಯ ಬಗೆಗೆ ಇರಲಿ. ಈ ಪದವನ್ನೇ ಕೇಳರಿಯದವರೇ ನಮ್ಮಲ್ಲಿ ಹೆಚ್ಚು ಎನ್ನಬಹುದು. ಲಿಂಗಭೇದವಿಲ್ಲದಿದ್ದರೂ, ಹೆಚ್ಚಾಗಿ ಋತು ಚಕ್ರನಿಲ್ಲುವ ವಯಸ್ಸಿನ ಮಹಿಳೆಯರಲ್ಲಿ ಈ ಬಾಧೆಯನ್ನು ಕಾಣಬಹುದು ಯಾವುದೇ, ರೋಗ, ಲಕ್ಷಣಗಳೂ ಕಾಣಿಸಿಕೊಳ್ಳದೆ, ಕ್ಲುಪ್ತವಾಗಿ ದೇಹದಲ್ಲಿ ಸೇರಿಕೊಂಡು, ಈ ರೋಗ ಯಾವುದೇ ಸುಳಿವಿಲ್ಲದೆ, ಮೂಳೆಯನ್ನು ಒಣ ಕಡ್ಡಿಯಂತೆ ಪರಿವರ್ತಿಸಿಬಿಡುತ್ತದೆ. ಹೃದಯ ಬೇನೆ, ಕ್ಯಾನ್ಸರ್‌ಗಳ ಬಗ್ಗೆಯೇ ತೀವ್ರವಾಗಿ ಚಿಂತಿಸುವ ಮಹಿಳೆಯರು ಈ ಮೂಳೆ ಸವೆತ ಬಾಧೆಯ ಭೀಕರತೆಯನ್ನೂ ಊಹಿಸಲ ಸಾಧ್ಯ. ಸೊಂಟ ನೋವು, ಬೆನ್ನು ಸೆಳೆತ ಮಣಿಕಟ್ಟಿನ ಸಡಿಲಿಕೆ, ಇವುಗಳ ವಿಷಯದಲ್ಲಿ ಸೂಕ್ತ ವೈದ್ಯಕೀಯ ತಪಾಸಣೆ ಚಿಕಿತ್ಸೆ ಮಾಡಿಸಿಕೊಳ್ಳದೆ ಈ ಮಾರಕಕ್ಕೆ ತುತ್ತಾಗುವವರ ಸಂಖ್ಯೆ ಸ್ತ್ರೀಯರಲ್ಲಿ ವಿವಿಧ ಕ್ಯಾನ್ಸರ್‌ನಿಂದಾಗುವುದಕ್ಕಿಂತ ಹೆಚ್ಚಿನ್ನಲಡ್ಡಿಯಿಲ್ಲ. ಹೃದಯದ ಶಸ್ತ್ರ ಚಿಕಿತ್ಸೆಯಿಂದಲಾದರೂ ಬೇಗ ಚೇತರಿಸಿಕೊಳ್ಳಬಹುದು, ಆದರೆ ಬಾಧೆಯಿಂದ ವ್ಯಕ್ತಿಯ ದೈನಂದಿನ ಕಾರ್ಯಗಳೂ ಸಹ ದುಸ್ಸಾಧ್ಯವಾಗಿಬಿಡುತ್ತದೆ. ರಂಧ್ರಭರಿತ ಮೂಳೆಗಳು ದೇಹವನ್ನು ಹೇಗೆ ತಾನೇ ಹೊರ ಬಲ್ಲವು? ತಡವಾಗಿ ಪತ್ತೆಹಚ್ಚಲ್ಪಟ್ಟರೂ, ವಾಸಿಯಾಗದ ಈ 'ಖಾಯಿಲೆ'ಯನ್ನು ತಡೆಗಟ್ಟಲು ಯಾ ನಿಯಂತ್ರಿಸಲು ಸಾಧ್ಯ. ಈ ದಿಸೆಯಲ್ಲಿ ಮುಖ್ಯವಾಗಿ ಮಹಿಳೆಯರು ಮಾಹಿತಿ ಹೊಂದಿರುವುದು ಅತ್ಯಾವಶ್ಯ.

ಮೂಳೆಗಳು ಸತತವಾಗಿ ಚಲನೆಯಲ್ಲಿರುವುದರಿಂದ, ಅದಕ್ಕೆ ಅವಶ್ಯಕ ಸತ್ವಗಳನ್ನು ಒದಗಿಸುವ ಹಾಗೂ ಈ ಕ್ರಿಯೆಯಲ್ಲಿ ಖರ್ಚಾಗುವ ಶಕ್ತಿಯ ಕಣಗಳು ಸಮವಾಗಿ ಕಾರ್ಯೋನ್ಮುಖವಾಗಿರುತ್ತವೆ. ಯೌವನಾವಸ್ಥೆಯವರೆಗೆ ಈ ಕ್ರಮದ ವ್ಯವಸ್ಥೆಯ ಹೊಂದಾಣಿಕೆ ಇರುತ್ತದೆ. ಮೂವತ್ತರ ಅನಂತರ ಎಂದೋ ಒಮ್ಮೆ ಮೂಳೆಯ ದೃಢತೆಗೆ ಪೂರಕವಾಗುತ್ತಿದ್ದ ಶಕ್ತಿಕಣಗಳ ಉತ್ಪಾದನೆ ಕುಂಠಿತವಾಗಿ ಮೂಳೆಗಳಲ್ಲಿ ಸೂಕ್ಷ್ಮರಂಧ್ರಗಳಾಗಿ ಅವುಗಳ ದೃಢತೆ ಕುಗ್ಗಲಾರಂಭಿಸುತ್ತದೆ. ದೇಹದ ಭಾರವನ್ನು ಹೊರುವ ಮೂಳೆಗಳ ಚೌಕಟ್ಟಿನ ಯಾವುದೇ ಭಾಗದ ಸವೆತದಿಂದ ಭಾರವನ್ನು ತಡೆಯಲು ಆ ಭಾಗ ಅಶಕ್ತವಾಗಿದಲ್ಲಿ ತೀವ್ರತರವಾದ ಅನಾಹುತಗಳಿಗೆ ಆಹ್ವಾನ ನೀಡಿದಂತೆಯೇ ಸೈ. ತೆಳು ದೇಹದ ಸ್ತ್ರೀಯರು, ಧೂಮ/ಮದ್ಯವ್ಯಸನಿಗಳು, ಶಕ್ತಿಜನಕ (ಸ್ಟೆರಾಯ್ಡ್)ಗಳನ್ನು ಸೇವಿಸುವವರು, ಅಷ್ಟೇ ಏಕೆ, ಹೆಚ್ಚು ಕಾಫಿ ಸೇವಿಸುವವರೂ ತಮ್ಮ ಮೂಳೆಗಳ ಶಕ್ತಿ ಸಾಮರ್ಥ್ಯಗಳನ್ನು ಕುಗ್ಗಿಸುವತ್ತಲೇ ಸಾಗುತ್ತಿರುತ್ತಾರೆನ್ನಬಹುದು.

ಕ್ಯಾಲ್ಸಿಯಂ ಲವಣದ ಪರಿಮಾಣವನ್ನು ಕಾಪಾಡಿಕೊಂಡು ಬರಬೇಕಾದ್ದದ್ದು ಮೂಳೆ ಸವೆತವನ್ನು ತಡೆಗಟ್ಟುವಲ್ಲಿ ಬಹಳ ಸಹಾಯಕಾರಿ ಅಂಶ. ವಿಟಮಿನ್ 'ಡಿ'ಯು ಸಣ್ಣ ಕರುಳಿನ ಮೂಲಕ ಕ್ಯಾಲ್ಸಿಯಂ ಅಂಶ ದೇಹದೆಲ್ಲೆಡೆ ಹರಡಲು ಅನುವು ಮಾಡಿ ಕೊಡುತ್ತದೆ. ಹೆಚ್ಚಿನ ಕ್ಯಾಲ್ಸಿಯಂ ಪ್ರಮಾಣ ಮೂಳೆ ಹಾಗೂ ಹಲ್ಲುಗಳಲ್ಲಿ ಸೇರಿದ್ದರೂ, ಅಲ್ಪಾಂಶವು ನರ, ಮಾಂಸ ಖಂಡಗಳ ಚಲನೆಯಲ್ಲಿ, ಹೃದಯ ಬಡಿತ

ವೇಗದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರೆ ಆಶ್ಚರ್ಯವೆನಿಸೀತು. ರಕ್ತದಲ್ಲಿನ ಕ್ಯಾಲ್ಸಿಯಂ ಅಂಶ ಕಡಿಮೆಯಾದಲ್ಲಿ, ಅಂಗಾಂಶಗಳು ಮೂಳೆಗಳಿಂದ ಈ ಲವಣಾಂಶವನ್ನೆಳೆದುಕೊಂಡು ಮೂಳೆ ಸವೆತಕ್ಕೆ ಎಡೆ ಮಾಡಿಕೊಡುತ್ತವೆ. ಬಾಲ್ಯಾವಸ್ಥೆ, ಯೌವನಗಳಲ್ಲಿ ದೈನಂದಿನ ಆಹಾರದಲ್ಲಿ ಸಾಕಷ್ಟು (೧ ಗ್ರಾಂ ಕ್ಯಾಲ್ಸಿಯಂ ಸೇವಿಸಿದಲ್ಲಿ ಮಧ್ಯವಯಸ್ಸಿನ ಮೂಳೆಗಳ ದೃಢತೆಯನ್ನು ಕಾಪಾಡಿಕೊಂಡು ಬರಬಹುದು. ಹಾಲು, ಮೊಸರು, ಗಿಣ್ಣು, ಗಾಢ ಹಸಿರು ವರ್ಣದ ತರಕಾರಿಗಳು, ಮೊಟ್ಟೆ, ಮೀನು, ಮಾಂಸಗಳಲ್ಲಿ ಕ್ಯಾಲ್ಸಿಯಂ ಲಭ್ಯವಿರುತ್ತದೆ. ಇವನ್ನು ದೇಹಕ್ಕೆ ಲಭ್ಯವಾಗಿಸುವ ಸೂತ್ರಧಾರಿ ವಿಟಮಿನ್ 'ಡಿ'ಯು ಹೈನುಗಾರಿಕೆಯ ಉತ್ಪನ್ನಗಳಲ್ಲಿ ಸಾಕಷ್ಟು ಸಿಗುತ್ತದೆ.

ನಿಯತ ವ್ಯಾಯಾಮದಿಂದ ಸ್ನಾಯು, ಮಾಂಸಖಂಡಗಳಿಂದ ಆವೃತವಾಗಿರುವ ಮೂಳೆಗಳಿಗೆ ಸದೃಢತೆ ಮೂಡಿಬರುತ್ತದೆ. ಸ್ನಾಯುಗಳ ದುರ್ಬಲತೆ ಮೂಳೆಗಳ ಸಡಿಲಿಕೆಗೆ ಎಡೆಮಾಡಿಕೊಡಬಲ್ಲುದು. ಗಗನಯಾತ್ರಿಗಳಲ್ಲಿ ಗುರುತ್ವಾಕರ್ಷಣ ಶಕ್ತಿಯ ವ್ಯತ್ಯಯದಿಂದಾಗಿ ದೈಹಿಕ ಕ್ರಿಯೆಗಳಲ್ಲಿಯೂ ವ್ಯತ್ಯಾಸ ಉಂಟಾಗಿ, ಕ್ಯಾಲ್ಸಿಯಂ ಅಂಶದ ಉಪಯೋಗ ಸರಿಯಾಗಿ ಆಗದೆ, ಮೂಳೆಗಳಲ್ಲಿ ಲಘುತನ ಉಂಟಾಗುತ್ತದೆಂದು. ಅಂತರಿಕ್ಷ ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಇದಕ್ಕೆಂದೇ ವಿಶೇಷ ವ್ಯಾಯಾಮ ಸಲಕರಣೆಗಳೂ ರೂಪುಗೊಂಡಿವೆ. ಮೂಳೆಗಳ ಘನತೆ ಹೆಚ್ಚಲು ಕೈಕಾಲುಗಳ ಚಲನೆ ಹೊಂದಿರುವ ಆಟೋಟಗಳು. ಮೂಳೆ ಸವೆತವನ್ನು ದೂರ ಇಡಲು ಸಹಾಯಕಾರಿ ಆಗಬಲ್ಲವು. ಋತು ಚಕ್ರ ನಿಂತ ೫ ವರ್ಷಗಳಲ್ಲಿ ಸ್ತ್ರೀಯು ವರ್ಷಕ್ಕೆ ಶೇ. ೫ರಷ್ಟು ಮೂಳೆಯ ಸಾಂದ್ರತೆಯನ್ನು ಕಳೆದುಕೊಳ್ಳುತ್ತಾಳೆ. ಅನಂತರ ೧ ರಂತೆ ಈ ಪ್ರಕ್ರಿಯೆ (ಹಾರ್ಮೋನ್ ಉತ್ಪಾದನೆಯ ಇಳಿಮುಖದಿಂದಾಗಿ ಮುಂದುವರಿಯುತ್ತದೆ.) ಹಾರ್ಮೋನ್ ಉತ್ಪಾದನೆಯನ್ನು ಹೆಚ್ಚಿಸುವ ಚಿಕಿತ್ಸಾಕ್ರಮದಿಂದ ಕೆಲ ದುಷ್ಪರಿಣಾಮಗಳಾದರೂ. ಮೂಳೆ ಸವೆತದ ಬವಣೆ ತಪ್ಪೀತು. ಕ್ಷಕಿರಣ, ಸ್ಕ್ಯಾನಿಂಗ್‌ನಿಂದಾಗಿ ಮೂಳೆ ಸವೆತವನ್ನು ಅರಿಯಲು ಸಾಧ್ಯ. ಈ ಬಾಧೆ ಇರುವವರು ತಾವು ಬೀಳದಿರುವಂತೆ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ತೀವ್ರ ಪರಿಣಾಮಗಳನ್ನೆದುರಿಸಬೇಕಾದೀತು.

ಪರ್ಯಾಯ ವೈದ್ಯಕೀಯ ಪ್ರಯೋಗಗಳು ಸತತ ನಡೆಯುತ್ತಲೇ ಇದ್ದು, ಈಚೆಗೆ ಒಂದು ವಂಶವಾಹಿನಿಯು ಹೇಗೆ ವಿಟಮಿನ್ 'ಡಿ'ಯು ಕ್ಯಾಲ್ಸಿಯಂ ಅಂಶವನ್ನು ದೇಹಕ್ಕೊದಗಿಸಿ ಮೂಳೆಗಳನ್ನು ಘನಗೊಳಿಸುತ್ತದೆಂಬ ಬಗ್ಗೆ ತೀವ್ರ ಸಂಶೋಧನೆ ನಡೆಯುತ್ತಿದೆ. ಈ ರಹಸ್ಯ ತಿಳಿದಲ್ಲಿ ಚಿಕಿತ್ಸಾಕ್ರಮ ಸುಲಭವಾಗಬಲ್ಲುದು.

ಪ್ರಾಯಶಃ ಮುಂದೊಮ್ಮೆ ಕೇವಲ ರಕ್ತ ಪರೀಕ್ಷೆಯಿಂದಲೇ ಮೂಳೆ ಸವೆತವನ್ನು ಪತ್ತೆ ಹಚ್ಚಿ ಬಾಲ್ಯಾವಸ್ಥೆಯಲ್ಲಿಯೇ ಸೂಕ್ತ ಚಿಕಿತ್ಸೆ ಕೈಗೊಳ್ಳುವ ದಿನ ದೂರವಿರಲಾರದು.

ಏನೇ ಇರಲಿ, ಯಾವುದೇ ರೋಗ ಬಾರದೇ ಇರುವಂತೆ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರಲಿ.

# ವಿವಾಹದ ಸಮಸ್ಯೆ ಮತ್ತು ಪರಿಹಾರಗಳು

**ಸುಧಾ ಹರೀಶ್**

ಸಮಾಜ, ಒಂದು ದೇಶದ ಅವಿಭಾಜ್ಯ ಅಂಗವಾದರೆ, ಕುಟುಂಬ ಒಂದು ಸಮಾಜದ ಅವಶ್ಯಕವಾದ ಅಂಗವಾಗಿರುತ್ತದೆ. ಕುಟುಂಬದ ಮುಖ್ಯ ಸ್ಥಾನದಲ್ಲಿ ಪತಿ ಪತ್ನಿಯರು ವಿರಾಜಮಾನಿಸಿದ್ದು ಅದರ ಏಳಿಗೆಗಾಗಿ ಅದರ ಸ್ಥಾನಮಾನವನ್ನು ಕಾಪಾಡುವುದಕ್ಕಾಗಿ ಅವಿರತವಾಗಿ ಶ್ರಮಿಸಬೇಕಾಗುತ್ತದೆ. ಪತಿ ಪತ್ನಿಯರಿಬ್ಬರೂ ಕುಟುಂಬವೆಂಬ ರಥದ ಎರಡು ಕಾಲುಗಳಂತೆ. ಅದನ್ನು ಕಾಲಚಕ್ರದಲ್ಲಿ ಸದಾ ಮುಂದುವರೆಯುವಂತೆ ಮಾಡಲು, ತಮ್ಮ ಜೀವನವನ್ನೇ ಮುಡುಪಾಗಿಡಬೇಕಾಗುತ್ತದೆ. ಸಮಾಜದ ಇಂತಹ, ಪವಿತ್ರವಾದ ಒಂದು ಘಟಕದಲ್ಲಿ ಏರುಪೇರಾದರೆ ಅದರಿಂದ ಉದ್ಭವಿಸಬಹುದಾದ ತೊಂದರೆಗಳು ಹಲವಾರು. ಅದನ್ನು ಪರಿಹರಿಸಿಕೊಳ್ಳಲು ಪತಿ ಪತ್ನಿಯರು ತಮ್ಮ ವೈಯುಕ್ತಿಕ ಬುದ್ಧಿ ಚಾತುರ್ಯದಿಂದಲೇ ಪ್ರಯತ್ನಿಸಬೇಕು.

ಇತ್ತೀಚೆಗೆ ಬದಲಾಗುತ್ತಿರುವ ಸಮಾಜದಲ್ಲಿ, ಸಮಾನತೆಯ ಯುಗದಲ್ಲಿ ಸಂಯಮ, ಸಾಮರಸ್ಯಗಳ ಶಕ್ತಿ ಕುಂದುತ್ತಿದ್ದು, ವಿರಸದ್ವೇಷಗಳಿಗೆ ಎಡೆಗೊಟ್ಟು, ಹಲವಾರು ಸಮಸ್ಯೆಗಳಿಂದಾಗಿ ಕುಟುಂಬಗಳೇ ಛಿದ್ರವಾಗಿ ಹೋಗುತ್ತಿರುವ ಉದಾಹರಣೆಗಳು ದೊರಕಿವೆ.

ಶಿಲ್ಪ ಮತ್ತು ಶ್ರೀನಿವಾಸ್‌ರ ವಿವಾಹವಾಗಿ ಎರಡು ವರ್ಷ ಸಂದಿತ್ತು. ಇವರದು ಹಿರಿಯರ ಸಮ್ಮತಿಯಿಂದಲೇ ನಡೆದಿದ್ದ ವಿವಾಹ. ಆದರೆ ಇತ್ತೀಚೆಗೆ ಶ್ರೀನಿವಾಸ್, ಶಿಲ್ಪಳ ಪ್ರತಿಯೊಂದು ನಡೆಯಲ್ಲೂ ತಪ್ಪು ಹುಡುಕುತ್ತ ಅವಳನ್ನು ದೂಷಿಸುವರು, ಅವಳಿಂದ ದೂರವಿರುವುದು. ಮನೆಗೆ ವಿನಾಕಾರಣ ಬಾರದೆ ಸ್ನೇಹಿತರ ಮನೆಯಲ್ಲೇ ಕಾಲಕಳೆಯುವುದು, ಹೀಗೆ ಹಲವಾರು ರೀತಿಯಾಗಿ, ಅವಳಿಗೆ ಮಾನಸಿಕವಾಗಿ ಹಿಂಸೆಯನ್ನು ನೀಡಲು ಪ್ರಾರಂಭಿಸಿದ. ಅವಳು, ಈ ಬಗ್ಗೆ ಪ್ರಶ್ನಿಸಿದಾಗ, ಅವಳಿಗೆ, ದೈಹಿಕವಾಗಿಯೂ, ಹಿಂಸೆಯನ್ನು ಕೊಡುತ್ತಿದ್ದ ಶ್ರೀನಿವಾಸ್.

ಶಿಲ್ಪ ಮೊಟ್ಟಮೊದಲು ಅವನ ಈ ವಿಚಿತ್ರ ನಡತೆಯನ್ನು ಗಣನೆಗೆ ತಂದುಕೊಳ್ಳದಿದ್ದರೂ, ಅವನ ಈ ನಡವಳಿಕೆಯ ಗತಿ ಬದಲಾಗದೆ ಮಿತಿಮೀರಿದಾಗ, ಅವಳು ಪತಿಯ ಮನೆಯನ್ನು ತೊರೆದು ತವರನ್ನು ಸೇರಿದಳು. ಹಿರಿಯರ ಸಂಧಾನವೂ ವಿಫಲವಾಗಿ ಶ್ರೀನಿವಾಸ್ ತಾನು ತನ್ನ ನಡತೆಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದೂ, ತನಗೂ ಶಿಲ್ಪಳಿಗೂ ದಾಂಪತ್ಯ ಸರಿ ಹೊಂದುವುದಿಲ್ಲವೆಂದೂ, ಹಿರಿಯರ

ಮುಂದೆ ಹೇಳಿಕೆ ನೀಡಿದ. ಅವನ ವಿಚಿತ್ರ ನಡವಳಿಕೆಗೆ ಅವನು ಬೇರೊಬ್ಬ ಯುವತಿಯನ್ನು ವಿವಾಹ ಮಾಡಿಕೊಳ್ಳಲು ಯತ್ನಿಸುತ್ತಿರುವುದೇ ಕಾರಣವೆಂದು ತಿಳಿದಾಗ ಶಿಲ್ಪ ಬೇರೆ ದಾರಿ ಕಾಣದೆ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದಳು. ಸಮಾಜದಲ್ಲಿ ಇಂತಹ ಸಮಸ್ಯೆಗಳು ತಲೆದೋರಬಹುದೆಂಬ ದೃಷ್ಟಿಯಿಂದಲೇ ಇಂತಹ ಸಮಸ್ಯೆಗಳನ್ನು ಪರಿಹರಿಸಲು, ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಲು ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದು ಈ ನಿಟ್ಟಿನಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಲಿವೆ ಮತ್ತು ಕಾಯಿದೆಗಳನ್ನು ರೂಪಿಸಿವೆ. ಇದರಲ್ಲಿ ಮುಖ್ಯವಾದ ಕಾಯಿದೆ ಎಂದರೆ 'ಹಿಂದೂ ವಿವಾಹ ಕಾಯಿದೆ ೧೯೫೫.'

ಈ ಕಾಯಿದೆಯು ಮತದಿಂದ, ಹಿಂದುವಾಗಿರುವ, ವೀರಶೈವ, ಲಿಂಗಾಯತ, ಬ್ರಹ್ಮ, ಆರ್ಯ ಸಮಾಜವನ್ನು ಅನುಸರಿಸುವ ವ್ಯಕ್ತಿಯನ್ನು ಒಳಗೊಂಡಿರುತ್ತದೆ ಮತ್ತು ಬೌದ್ಧ, ಜೈನ್, ಸಿಕ್ ಮತಾವಲಂಬಿಗಳಿಗೂ ಹಾಗೂ ಯಾವುದೇ ವ್ಯಕ್ತಿ ಈ ಕಾಯಿದೆಯು ಅನ್ವಯಿಸುವ ಸ್ಥಳದಲ್ಲಿ ವಾಸಿಸುವ, ಮೇಲೆ ಹೇಳಿರುವ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ಮೇಲೆ ಹೇಳಿದ ಉದಾಹರಣೆಯಲ್ಲಿನ ಪತ್ನಿ ಶಿಲ್ಪ ನ್ಯಾಯಾಲಯದ ಮೊರೆ ಹೊಕ್ಕಾಗ, ಅವಳು ತನಗೆ ಯಾವ ರೀತಿಯ ಪರಿಹಾರ ನೀಡಬೇಕೆಂದು, ನ್ಯಾಯಾಲಯ ಮೊರೆ ಹೋಗಬೇಕೆಂಬ ನಿರ್ಧಾರಕ್ಕೆ ಬರಲು, ಅವಳಿಗೆ ಹಿಂದೂ ವಿವಾಹ ಕಾಯಿದೆಯ ಭಾಗ ೩ ಮತ್ತು ೪ ರಲ್ಲಿರುವ ಪರಿಹಾರಗಳು, ಅವಳಿಗೆ ಸಹಾಯಕವಾಗಿ ನಿಲ್ಲುತ್ತವೆ.

ಹಿಂದೂ ವಿವಾಹ ಕಾಯಿದೆಯ ಭಾಗ ೩ ದಾಂಪತ್ಯದ ಹಕ್ಕುಗಳನ್ನು ಪುನರ್ ರೂಢಿಸಿಕೊಳ್ಳುವ ಮತ್ತು ದಾಂಪತ್ಯದ ಪ್ರತ್ಯೇಕತೆಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿ ತಿಳಿಸುತ್ತದೆ. ಕಲಮು ೯ ದಾಂಪತ್ಯ ಪುನರ್ ರೂಢಿಸಿಕೊಳ್ಳುವ ಬಗೆಗೆ ವಿವರಣೆಯನ್ನು ನೀಡಿದರೆ ಕಲಮು ೧೦, ದಾಂಪತ್ಯ ಪ್ರತ್ಯೇಕತೆಯ ಬಗ್ಗೆ ವಿವರಣೆಯನ್ನು ನೀಡುತ್ತದೆ.

## ದಾಂಪತ್ಯ ಪುನರ್ ರೂಢಿಸುವಿಕೆ

ಪತಿ ಅಥವಾ ಪತ್ನಿಯು ವಿನಾಕಾರಣ ಒಬ್ಬರ ಸಂಗದಿಂದ ಮತ್ತೊಬ್ಬರು ದೂರವಾಗಿದ್ದರೆ, ಇದರಿಂದಾಗಿ ನೊಂದ ವ್ಯಕ್ತಿಯು ಜಿಲ್ಲಾ ನ್ಯಾಯಾಧೀಶರಿಗೆ ದಾಂಪತ್ಯ ಪುನರ್ ರೂಢಿಸುವಿಕೆಗಾಗಿ, ಅರ್ಜಿಯನ್ನು ಸಲ್ಲಿಸಬಹುದು.

ಉದಾಹರಣೆ: ನರಹರಿ ಮತ್ತು ಸುನಂದ ದಂಪತಿಗಳು. ಇವರಲ್ಲಿ ವಿನಾಕಾರಣ ವಿರಸ ಉಂಟಾಗಿ ನರಹರಿ, ಸುನಂದಳ ಮೇಲೆ, ಅಪವಾದವನ್ನು ಹೋರಿಸಿ ಅವಳಿಂದ ಬೇರೆಯಾಗಿ ವಾಸಿಸುತ್ತಿದ್ದ. ಇದರಿಂದಾಗಿ ನೊಂದ ಸುನಂದ ದಾಂಪತ್ಯದ ಹಕ್ಕನ್ನು ಪುನರ್ ರೂಢಿಸಿಕೊಳ್ಳಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಳು. ನ್ಯಾಯಾಲಯವು ಆಕೆಯ ಅರ್ಜಿಯನ್ನು, ಅದರಲ್ಲಿನ ಕಾರಣಗಳನ್ನು ಪರಿಶೀಲಿಸಿ, ಸಾಕ್ಷ್ಯಾಧಾರದ ಮೇಲೆ ನರಹರಿಯು ಸುನಂದಳನ್ನು ಪುನಃ ಸ್ವೀಕರಿಸಬೇಕೆಂದೂ ಅವರ ದಾಂಪತ್ಯವು ಪುನರ್ ರೂಢಿಗೊಳ್ಳಬೇಕೆಂದೂ ಆದೇಶವನ್ನು ನೀಡಿತು.

ದಾಂಪತ್ಯ ಪ್ರತ್ಯೇಕತೆ: ಪತಿ ಅಥವಾ ಪತ್ನಿಯು, ಕಲಮು ೧೩ (೧)ರ, ಕಾರಣಗಳನ್ನು ಸೂಚಿಸಿ, ಪತ್ನಿಯು ಕಲಮು ೨ರ ಕಾರಣಗಳನ್ನು ಸೂಚಿಸಿ, ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದಾಗ್ಯೂ ಸಹ, ನ್ಯಾಯಾಲಯವು, ಅರ್ಜಿಯನ್ನು ಸಾಕ್ಷಾಧಾರಗಳೊಡನೆ ಪರಿಶೀಲಿಸಿ, ದಾಂಪತ್ಯ ಪ್ರತ್ಯೇಕದ ತೀರ್ಪನ್ನು ನೀಡಬಹುದು.

ಉದಾಹರಣೆಗೆ: ನಾಗರಾಜು ಮತ್ತು ಶಾಲಿನಿ ದಂಪತಿಗಳು. ಇವರ ದಾಂಪತ್ಯದಲ್ಲಿ ವಿವಾಹದ ಪ್ರಾರಂಭದಿಂದ ಸಾಮರಸ್ಯದ ಅಭಾವದಿಂದಾಗಿ, ಕಲಹ ಪ್ರಾರಂಭವಾಗಿ, ನಾಗರಾಜ ಪತ್ನಿಯನ್ನು, ಕ್ರೂರವಾಗಿ, ಶಿಕ್ಷಿಸುತ್ತಿದ್ದ ಅನಂತರ ಒಂದು ದಿವಸ ಮನೆಯನ್ನು ತೊರೆದು ಹೋದವನು ಎರಡು ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದ. ಪತಿಯ ವರ್ತನೆಯಿಂದ ನೊಂದ ಶಾಲಿನಿ, ನ್ಯಾಯಾಲಯಕ್ಕೆ, ದಾಂಪತ್ಯ ಪ್ರತ್ಯೇಕತೆಯ ಬಗ್ಗೆ ಅರ್ಜಿ ಸಲ್ಲಿಸಿದಳು. ನ್ಯಾಯಾಲಯವು ಅರ್ಜಿಯನ್ನು ಪರಿಶೀಲಿಸಿ ಕಾರಣಗಳನ್ನು ಪರಿಶೀಲಿಸಿ, ದಾಂಪತ್ಯ ಪ್ರತ್ಯೇಕತೆಗೆ ತೀರ್ಪನ್ನು ನೀಡಿತು.

ಹಿಂದೂ ವಿವಾಹ ಕಾಯಿದೆಯ ಹದಿಮೂರನೆಯ ಕಲಮು ಈ ಕಾಯಿದೆಯ ಬಹಳ ಗಂಭೀರವಾದ ಸಮಸ್ಯೆಯತ್ತ ತನ್ನ ಹಸ್ತವನ್ನು ಚಾಚುತ್ತದೆ. ಅದೇ ವಿವಾಹ ವಿಚ್ಛೇದನ.

ಒಂದು ಮನೆಯನ್ನು ಕಟ್ಟುವುದು ಎಷ್ಟು ಕಷ್ಟವೋ, ಅದನ್ನು ಕೆಡಹುವುದು ಅಷ್ಟೇ ಸುಲಭದ ಕಾರ್ಯ. ಹಾಗೆಯೇ ವಿವಾಹವೆಂಬ ಪವಿತ್ರ ಬಂಧನವೂ ಸಹ ಪರಸ್ಪರ ವಧೂವರರ ಹೃದಯಗಳು ಕೂಡಿ ವಿವಾಹದ ಬಂಧನದಲ್ಲಿ ಅವರು ತಮ್ಮನ್ನು ತೊಡಗಿಸಿಕೊಳ್ಳುತ್ತದೆ. ಇಂತಹ ಪವಿತ್ರವಾದ ಕಾರ್ಯಕ್ಕೆಗೂಡುವುದು ಕಷ್ಟ. ಈ ಪವಿತ್ರ ಬಂಧನದಲ್ಲಿ ಸ್ವಲ್ಪ ಬಿರುಕು ಉಂಟಾದರೂ ಅದನ್ನು ಮತ್ತೆ ಕೂಡಿಸುವುದು ಅಸಾಧ್ಯದ ಕೆಲಸ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪತಿಯಾಗಲೀ ಪತ್ನಿಯಾಗಲೀ ತಾವು ಪರಸ್ಪರ ಒಟ್ಟುಗೂಡಿ ಬಾಳಲು ಸಾಧ್ಯವಿಲ್ಲವೆಂದು ನಿರ್ಧರಿಸಿದಾಗ ವಿವಾಹ ವಿಚ್ಛೇದನಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ವಿವಾಹ ವಿಚ್ಛೇದನಕ್ಕೆ ನಾಂದಿಯಾಗುವ ಕಾರಣಗಳು ಕೆಳಕಂಡಂತೆ ಇರಬಹುದು.

೧. ಪತಿ ಅಥವಾ ಪತ್ನಿಯು ವಿವಾಹದ ನಂತರ ಬೇರೆಯವರೊಡನೆ, ಲೈಂಗಿಕ ಸಂಬಂಧವನ್ನು ಸ್ವಇಚ್ಛೆಯಿಂದ ಹೊಂದಿದಾಗ.

೨. ಪತಿ ಅಥವಾ ಪತ್ನಿಯು ಅರ್ಜಿದಾರರನ್ನು, ಅರ್ಜಿಸಲ್ಲಿಸುವ ಮುಂಚೆ ಎರಡು ವರ್ಷಗಳ ಮೇಲ್ಪಟ್ಟು ತ್ಯಜಿಸಿರುವಾಗ.

೩. ಪತಿ ಅಥವಾ ಪತ್ನಿಯು ಬೇರೆಯ ಮತಕ್ಕೆ, ಮತಾಂತರ ಹೊಂದಿದಾಗ.

೪. ಪತಿ ಅಥವಾ ಪತ್ನಿಯು ವಾಸಿಯಾಗದಂತಹ ಮಾನಸಿಕ ರೋಗದಿಂದ ನರಳುತ್ತಿರುವಾಗ.

ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿದರೆ, ನ್ಯಾಯಾಲಯವು ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿ, ಸಾಕ್ಷ್ಯಾಧಾರಗಳ ಮೇಲೆ, ಪರಿಶೀಲಿಸಿ, ಅರ್ಜಿದಾರರಿಗೆ ಸೂಕ್ತ ಪರಿಹಾರವನ್ನು ನೀಡಬಹುದು.

ಕಲಮು ೧೩ (ಬಿ) ಹಿಂದೂ ವಿವಾಹ ಕಾಯಿದೆಯ ಮತ್ತೊಂದು ಮುಖ್ಯವಾದ ವೈಲಿಗಲ್ಲಾಗಿದೆ.

ವಿವಾಹ ವಿಚ್ಛೇದನವನ್ನು ಪಡೆಯ ಲಿಚ್ಛಿಸುವ ಪತಿ ಪತ್ನಿಯರು ಪರಸ್ಪರ ಒಪ್ಪಿ, ತಾವು ಒಂದು ವರ್ಷಕ್ಕಿಂತ ಹೆಚ್ಚಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆಂದೂ, ತಮಗೆ ಒಟ್ಟಾಗಿ ಕೂಡಿ ಬಾಳಲು ಸಾಧ್ಯ ವಿಲ್ಲವೆಂದೂ ತಮ್ಮ ವಿವಾಹವನ್ನು ಅರ್ಜಿಯ ಮೇರೆಗೆ ನಿರರ್ಥಕಗೊಳಿಸಬೇಕೆಂದೂ ನ್ಯಾಯಾಲಯವನ್ನು ಕೋರಿದರೆ, ನ್ಯಾಯಾಲಯವು ಅವರ ಅರ್ಜಿಯನ್ನು ಸಾಕ್ಷ್ಯಾಧಾರದ ಮೇಲೆ ನಿರ್ಧರಿಸಿ ತೀರ್ಪು ನೀಡಬಹುದು. ಪತಿ ಪತ್ನಿಯರು ಅರ್ಜಿ ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಮೇಲೆ, ಹದಿನೆಂಟು ತಿಂಗಳ ಒಳಗೆ, ಅರ್ಜಿ ಸಲ್ಲಿಸಿದ್ದ ಪತಿ ಪತ್ನಿಯರು ಆ ವೇಳೆಯಲ್ಲಿ ಅರ್ಜಿಯನ್ನು ಹಿಂತೆಗೆದುಕೊಂಡಿರದಿದ್ದರೆ ಎರಡೂ ಕಡೆಯವರ ಹೇಳಿಕೆಗಳನ್ನು ಪರಿಶೀಲಿಸಿ ಅರ್ಜಿಯಲ್ಲಿರುವ ವಿಷಯಗಳು ಸತ್ಯವೆಂದು ಸಾಬೀತಾದಲ್ಲಿ ವಿವಾಹವನ್ನು ನಿರರ್ಥಕಗೊಳಿಸುವುದು. ವಿವಾಹವಾದ ಮೂರು ವರ್ಷಗಳಿಗಿಂತ ಮುಂಚೆ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ಪುರಸ್ಕರಿ ಸುವುದಿಲ್ಲ. ಕೆಲವು ಅನಿವಾರ್ಯ ಸಂದರ್ಭದಲ್ಲಿ ಮಾತ್ರ ನ್ಯಾಯಾಲಯವು ವಿವಾಹವಾಗಿ ಒಂದು ವರ್ಷವಾಗಿರುವ ಅರ್ಜಿಯನ್ನು ಪುರಸ್ಕರಿಸಬಹುದು.

ಹಿಂದೂ ವಿವಾಹ ಕಾಯಿದೆಯ ೧೫ನೆಯ ಕಲಮಿನ ಮೇರೆಗೆ,ವಿವಾಹ ವಿಚ್ಛೇದನವನ್ನು ಪಡೆದ ಪತಿ ಅಥವಾ ಪತ್ನಿಯು ಮೇಲ್ಮನವಿ ಮಾಡಲು ಅವಕಾಶವಿಲ್ಲದೆ ಅಥವಾ ಸ್ವಯಂ ಮಾಡಿರದಿದ್ದರೆ ಅಥವಾ ಮೇಲ್ಮನವಿ ಮಾಡುವ ಸಮಯ ಮೀರಿದ್ದರೆ ಅಥವಾ ಮೇಲ್ಮನವಿ ತಿರಸ್ಕರಿಸಲ್ಪಟ್ಟಿದ್ದರೆ, ಮರು ವಿವಾಹ ಮಾಡಿಕೊಳ್ಳಬಹುದು.

ನ್ಯಾಯಾಲಯಗಳು ವಿವಾಹ ವಿಚ್ಛೇದನ ವನ್ನು ಅರ್ಜಿದಾರರ ಸಾಕ್ಷ್ಯಾಧಾರಗಳ ಮೇಲೆ ನೀಡುವುದಾದರೂ, ವಿಚ್ಛೇದನವನ್ನು ನೀಡುವ ಮೊದಲು ವಿವಾಹವಿಚ್ಛೇದನಕ್ಕೆ ಅರ್ಜಿಸಲ್ಲಿಸಿರುವ ದಂಪತಿಗಳಿಗೆ ಜನಿಸಿದ್ದ ಮಕ್ಕಳ ಭವಿಷ್ಯವನ್ನು ಹಾಗೂ ವಿವಾಹ ವಿಚ್ಛೇದನಗಳಿಂದ ಸಮಾಜದ ಮೇಲಾಗುವ ಭೀಕರ ಪರಿಣಾಮವನ್ನು ದೃಷ್ಟಿಯಲ್ಲಿಟ್ಟು ಕೊಂಡು, ಸಾಧ್ಯವಾದಷ್ಟೂ ಸಂಧಾನಕ್ಕೆ ಪ್ರಯತ್ನಿಸುತ್ತದೆ.

ಸಮಾಜ ಮತ್ತು ಕುಟುಂಬದ ಏಳಿಗೆಯ ದೃಷ್ಟಿಯಿಂದ ದಂಪತಿಗಳು ಆದಷ್ಟೂ, ಸಂಯಮ, ಸಹನೆಯಿಂದ, ಬಾಳ್ವೆನಡೆಸಿ, 'ಸಂಸಾರವೆಂತೆಂಬ ಭಾಗ್ಯವಿರಲಿ' ಎಂಬ ಮಾತನ್ನು ಸತ್ಯವನ್ನಾಗಿಸಲು ಯತ್ನಿಸ ಬೇಕು.

---

ಏನನ್ನೂ ನಿರೀಕ್ಷಿಸದವನು ಸುಖಿ. ಏಕೆಂದರೆ ಅವನಿಗೆ ನಿರಾಶೆ ಎಂಬುದೇ ಇಲ್ಲ.

—ಪೋಪ್

# ಮಕ್ಕಳ ಅನಾರೋಗ್ಯ ಮತ್ತು ತಂದೆ-ತಾಯಿಯರ ಕಾಳಜಿ

ಪಿ. ಮಂಜುಳಾದೇವಿ

ತಂದೆ-ತಾಯಂದಿರು ತಮ್ಮ ಮಕ್ಕಳ ಅನಾರೋಗ್ಯವನ್ನು ಕುರಿತು ಹೆಚ್ಚು ಆಸಕ್ತಿ ವಹಿಸುವ ಬದಲು ಉದಾಸೀನರಾಗಿರುವುದನ್ನು ನಾವು ಕಾಣಬಹುದು. ಮಗುವಿನ ಅಸ್ವಸ್ಥತೆಗೆ ಕಾರಣ ತಿಳಿಯುವ ಬದಲು ಗಾಬರಿಯಾಗುವುದೇ ಹೆಚ್ಚು. ರೋಗ ಲಕ್ಷಣಗಳನ್ನು ಕಂಡು ಮಗುವಿಗೆ ವಾಸಿಯಾಗದ ಕಾಯಿಲೆ ಬಂದಿರಬಹುದೆಂದು ನಂಬಿ ಗಾಬರಿಯಾಗುತ್ತಾರೆ. ಇದು ಸ್ವಾಭಾವಿಕ ಎನಿಸಿದರೂ ವೈದ್ಯರೊಡನೆ ಚರ್ಚಿಸಿ ಆತಂಕ ನಿವಾರಿಸಿಕೊಳ್ಳುವುದು ಸೂಕ್ತ. ಮಕ್ಕಳು ಅನುಭವಿಸಬಹುದಾದ ಕೆಲ ಸಾಮಾನ್ಯ ಭಾದೆಗಳ ಲಕ್ಷಣ ಕುರಿತು ಸ್ವಲ್ಪ ತಿಳಿದುಕೊಂಡರೆ ಶಂಕೆ ಪಡುವ ಅಗತ್ಯವಿರುವುದಿಲ್ಲವಷ್ಟೆ. ಮಗು ಆಗಾಗ್ಗೆ ನೋವೆನ್ನುತ್ತಿದ್ದರೆ ಕ್ಯಾನ್ಸರ್ ಇರಬಹುದೆಂದು ಭಾವಿಸುತ್ತಾರೆ. ಹೊಟ್ಟೆ ನೋವಿನೊಂದಿಗೆ ತಲೆಸುತ್ತುವಿಕೆ, ವಾಂತಿ, ಭೇದಿ ವಿಪರೀತ ಜ್ವರದ ಬಾಧೆ ಇದ್ದಲ್ಲಿ ಮಾತ್ರ ಆತಂಕದ ಪರಿಸ್ಥಿತಿಯಿದ್ದು ವೈದ್ಯಕೀಯ ತಪಾಸಣೆ ಅಗತ್ಯವಾಗುತ್ತದೆ. ಹೆಚ್ಚಿನ ಆರೋಗ್ಯವಂತ ಮಕ್ಕಳಲ್ಲಿ ಅಜೀರ್ಣ ಮಾನಸಿಕ ಉದ್ವೇಗದಿಂದ ಹೊಟ್ಟೆನೋವು ಕಾಣಿಸಿಕೊಳ್ಳುತ್ತದಷ್ಟೇ.

ಹದಿವಯಸಿನವರು ಎದೆನೋವೆಂದಾಕ್ಷಣ ತಂದೆ-ತಾಯಂದಿರು ಅದು ಹೃದ್ರೋಗ ಎಂದೇ ಯೋಚಿಸುತ್ತಾರೆ. (ಮಕ್ಕಳಲ್ಲಿ ಹೃದ್ರೋಗ ಅತಿ ವಿರಳ) ಇದಕ್ಕೆ ಕಾರಣ ಕೇವಲ ನರಗಳ ತೀವ್ರ ಚಟುವಟಿಕೆ ಅಥವಾ ತೀವ್ರ ಮಾನಸಿಕ ಉದ್ವೇಗ ಮಾತ್ರ. ಎದೆ ನೋವಿನೊಂದಿಗೆ ತೀವ್ರ ದಣಿವು, ಸುಸ್ತು, ಉಸಿರಾಟದ ತೊಂದರೆಗಳು ಇದ್ದಲ್ಲಿ ತಪಾಸಣೆ ಅಗತ್ಯವಾಗುತ್ತದೆ.

ಮಕ್ಕಳ ಇನ್ನೊಂದು ಸಾಮಾನ್ಯ ತೊಂದರೆ ತಲೆನೋವು, ದೃಷ್ಟಿದೋಷಗಳಿಂದ ತಲೆನೋವು ಬರುತ್ತದೆಂಬ ನಂಬಿಕೆ ಸತ್ಯ ದೂರವಾದದ್ದು. ದೃಷ್ಟಿ-ಪರೀಕ್ಷೆ ಸರಿಯಾಗಿದ್ದಲ್ಲಿ, ಮಿದುಳು ಜ್ವರ ಇಲ್ಲವೇ ಮಿದುಳಿಗೆ

---

೧೯೬೪ರ ಆಗಸ್ಟ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ರಿಚರ್ಡ್ ಗೋಲ್ಡ್ ಬ್ಲೂಮ್ ಅವರ "ಪ್ರಿಸ್ಕ್ರಿಪ್ಷನ್ ಫಾರ್ ಆ್ಯಂಕ್ಷಿಯಸ್ ಪೇರೆಂಟ್" ಎಂಬ ಲೇಖನದ ಅನುವಾದ.

ಸಂಬಂಧಿಸಿದ ಕಾಯಿಲೆ ಇರಬಹುದೆಂಬ ಭೀತಿಯಲ್ಲಿ ಇರುತ್ತಾರೆ. ಮಕ್ಕಳಲ್ಲಿ ಮಿದುಳಿನಲ್ಲಿ ಗಡ್ಡೆಗಳಾಗುವುದೇ ಅತಿ ಅಪರೂಪ. ಅನುವಂಶಿತವಾದ ಪಾರ್ಶ್ವತಲೆಶೂಲೆಯನ್ನು ಹೊರತುಪಡಿಸಿದಲ್ಲಿ ಸಾಮಾನ್ಯವಾಗಿ ಸಾಕಷ್ಟು ನಿದ್ದೆಯೆ ತಲೆನೋವಿಗೆ ಮದ್ದು. ಹೆಚ್ಚಾಗಿ ಮುಂಜಾನೆ ರಾತ್ರೆ ಬರುವ ತಲೆನೋವು ಒತ್ತೊತ್ತಿ ಬರುವ ವಾಂತಿಯೊಡಗೂಡಿದ್ದರೆ ತಪಾಸಣೆ ಅಗತ್ಯವಾಗುತ್ತದೆ. ಏಕೆಂದರೆ ಈ ಲಕ್ಷಣಗಳು ಮಿದುಳಿನ ಬಾಧೆಗೆ ದಾರಿತೋರುತ್ತದೆ. ಮಕ್ಕಳಲ್ಲಿ ರೋಗಲಕ್ಷಣಗಳು ರೋಗಕ್ಕಿಂತ ಹೆಚ್ಚಾಗಿ ಉತ್ಪ್ರೇಕ್ಷೆಗೊಂಡಿರುತ್ತವೆಯಷ್ಟೆ.

ಶೇ. ೫ ರಷ್ಟು ಮಕ್ಕಳು (ಸಣ್ಣವಯಸ್ಸಿನ) ಜ್ವರದಿಂದ ನರಳುತ್ತಿದ್ದಾಗ ಉಂಟಾಗುವ ತೀವ್ರ ನಡುಕದಿಂದ ಅವ್ಯಕ್ತ ಭಯಭೀತ ಪರಿಸ್ಥಿತಿ ಉಂಟಾಗುತ್ತದೆ. ಮಗು ನೀಲವರ್ಣ ತಾಳುವುದು, ಕೈಕಾಲು ತಿರಿಚಿಕೊಳ್ಳುವುದು, ಇದ್ದಕ್ಕಿದ್ದಂತೆಯೇ ಜಡವಾಗಿ ಬಿದ್ದುಕೊಳ್ಳುವುದು ಖಂಡಿತ ಆತಂಕಕಾರಿ ವಿಷಯ. ವೈದ್ಯರ ನೆರವು ಪಡೆವ ಮುನ್ನವೇ ಮಗು ತಂತಾನೆ ಸಾಮಾನ್ಯ ಸ್ಥಿತಿಗೆ ಬರುವುದು ವಿಶೇಷವೇನಲ್ಲ. ಕೆಲವು ನಿಮಿಷಗಳ ಈ ಅವಸ್ಥೆ ಎಲ್ಲರನ್ನೂ ತಲ್ಲಣಗೊಳಿಸುವುದು ಸಹಜ. ಮತ್ತೊಂದಾದರೂ ಸಂಭವಿಸಿದರೂ ವೈದ್ಯರ ಪ್ರಕಾರ ಇದು ತೀವ್ರತರ ಸಮಸ್ಯೆ ಏನಲ್ಲ. ಜ್ವರವಿಲ್ಲದೆ ನಡುಕ ಬಂದಲ್ಲಿ ಅದು ಮೂರ್ಛೆರೋಗವಾಗಿರಲು ಸಾಧ್ಯ. ಯಾವುದಕ್ಕೂ ವೈದ್ಯರನ್ನ ಭೇಟಿ ಮಾಡುವುದು ಒಳ್ಳೆಯದು. ಮಕ್ಕಳು ಬಿಳಿಚಿಕೊಂಡಿದ್ದರೆ, ಊದಿದ ಗ್ರಂಥಿಗಳನ್ನು ಹೊಂದಿದ್ದರೆ ಅವರು ಕ್ಷಯಪೀಡಿತರೆಂದು ತೀರ್ಮಾನಿಸಿಬಿಡುತ್ತಾರೆ. ಮಕ್ಕಳಲ್ಲಿ ರಕ್ತಕ್ಷಯ ಅಪರೂಪವಾದರೂ ಮುಕ್ಕಾಲುಪಾಲು ಇದನ್ನು ಗುಣಪಡಿಸಬಲ್ಲ ಸಾಮರ್ಥ್ಯವನ್ನು ಈಗ ವೈದ್ಯವಿಜ್ಞಾನ ಪಡೆದಿದೆ. ಸೋಂಕಿನಿಂದ ಗ್ರಂಥಿ-ಊತಗಳು ಸಾಮಾನ್ಯವಾದರೂ ನೋವು ಹಾಗೂ ವಿಪರೀತ ಸುಸ್ತು ಉಂಟಾಗುತ್ತಿದ್ದರೆ ವೈದ್ಯರನ್ನು ಕಾಣಬೇಕು. ಮಕ್ಕಳು ಬಿಳಿಚಿಕೊಂಡಿರುವುದು ಖಂಡಿತಾ ಅಸಾಮಾನ್ಯವೇನಲ್ಲ.

ಮಕ್ಕಳ ಮತ್ತೊಂದು ಸಾಮಾನ್ಯ ದೂರು ಕಾಲುನೋವು. ರಾತ್ರಿ ಮಲಗಿದ ಕೆಲವು ಗಂಟೆಗಳ ಅನಂತರ ಇವರ ಅರಿವು ಉಂಟಾಗಿ ಎಚ್ಚರವಾಗಿ ರಾದ್ಧಾಂತ ಮಾಡುತ್ತಾರೆ. ಹೆಚ್ಚಾಗಿ ದಿನವೆಲ್ಲಾ ಆಟವಾಡಿರುವ ಹುಡುಗರು ಆಗಾಗ್ಗೆ ಹೀಗೆಂದರೆ, ಹಿರಿಯರು ವಾಯು, ಸೆಳೆತ ರೋಗವಿರಬಹುದೆಂದು ಅನುಮಾನಿಸುತ್ತಾರೆ. ಈ ಕಾಲುನೋವು ಒತ್ತುವಿಕೆ, ಶಾಖ ನೀಡುವುದರಿಂದ ಉಪಶಮನಗೊಳ್ಳುತ್ತದೆ. ಒಂದೇ ಕಾಲು ನೋಯುತ್ತಿದ್ದರೆ ಅಥವಾ ನೋವಿನ ಜಾಗವನ್ನು ಸ್ಪರ್ಶಿಸಿದಾಗ ನೋವು ಉಲ್ಬಣವಾದಲ್ಲಿ ವೈದ್ಯರ ಬಳಿ ಹೋಗುವುದು ಅನಿವಾರ್ಯ.

ಏನಾದರೂ ಸಮಸ್ಯೆಯೆನಿಸಿದಾಗ (ನಿಮ್ಮ ಮಗುವಿನ ಅಸ್ವಸ್ಥತೆಯ ಬಗ್ಗೆ) ತಡಮಾಡದೆ ವೈದ್ಯರನ್ನು ಕಾಣಿರಿ. ಅವರೊಡನೆ ನಿಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಹಂಚಿಕೊಂಡಲ್ಲಿ ನಿಮ್ಮ ಮನ ಹಗುರವಾಗುವುದಲ್ಲದೆ, ವೈದ್ಯರ ಚಿಕಿತ್ಸಾ ವಿಧಾನದ ಒಂದು ಭಾಗವಾಗಿ ಎಲ್ಲಾ ತೊಂದರೆಗಳು ದೂರವಾಗುತ್ತದೆ.

# ಅತ್ಯಂತ ಕೆಟ್ಟ ಶಿಸ್ತಿನ ತಪ್ಪುಗಳು

ಜಯಸಿಂಹ

ಮಕ್ಕಳನ್ನು ತಿದ್ದುವಾಗ ಉತ್ತಮ ತಂದೆ ತಾಯಿಗಳೂ ಎಡವುತ್ತಾರೆ. ಇಲ್ಲಿ ಕೇಡನ್ನುಂಟುಮಾಡುವ ಅಪಾಯಕರವಾದುವು ಯಾವುವು ಮತ್ತು ಅದನ್ನು ಹೇಗೆ ತಡೆಯಬಹುದು ಎನ್ನುವುದನ್ನು ತಿಳಿಯೋಣ.

## ಅತಿ ಹೊಗಳುವುದು ಅಥವಾ ಅತಿ ಕಡಿಮೆ ಹೊಗಳುವುದು

“ನಿನ್ನ ಕೊಳೆ ಬಟ್ಟೆಗಳನ್ನು ಒಗೆಯಲು ಹಾಕಿದೆಯಾ? ಅಬ್ಬಬ್ಬಾ ಆಶ್ಚರ್ಯ. ನೀನು ತುಂಬಾ ಅಸಾಧ್ಯದವನು. “ಹೀಗೆ ಹೇಳಿ ಸ್ವಾಭಿಮಾನವನ್ನು ಪ್ರೋತ್ಸಾಹಗೊಳಿಸಲು ತಂದೆ ತಾಯಿಗಳು ಮಕ್ಕಳನ್ನು ಹೊಗಳುತ್ತಾರೆ. ಅವರು ಹೊಗಳಿಕೆಯನ್ನೇ ಎದುರು ನೋಡುವಂತೆ ಮಾಡುತ್ತಾರೆ.

ಮನಶ್ಶಾಸ್ತ್ರಜ್ಞ ಜೇಮ್ಸ್ ವಿಂಡೇಲ್ “ಹೊಗಳಿಕೆಯನ್ನೇ ಎದುರು ನೋಡುವ ಮಗುವು ತನ್ನ ಇಚ್ಛೆಗೆ ತಕ್ಕಂತೆ ಗುರಿಯನ್ನು ತಲುಪಲು ಪ್ರಯತ್ನಿಸುವುದೇ ಇಲ್ಲ. ಪ್ರತಿ ಕೆಲಸಕ್ಕೂ ಮತ್ತೊಬ್ಬರಿಂದ ವಂದನೆಗಳನ್ನು ಎದುರುನೋಡುತ್ತಾನೆ. ಬೇರೆಯವರ ಒಪ್ಪಿಗೆ ಇಲ್ಲದೆ ಯಾವ ಕೆಲಸವನ್ನೂ ಪೂರ್ತಿ ಮಾಡುವುದಿಲ್ಲ” ಎಂದು ಅಭಿಪ್ರಾಯಪಡುತ್ತಾರೆ. ಅತಿಯಾಗಿ ಆಕ್ಷೇಪಿಸುವುದು ಮಕ್ಕಳಿಗೆ ತೊಂದರೆಯಾಗುತ್ತದೆ. ನೀವು ಮಕ್ಕಳು ಹಿಂದೆ ಬಿದ್ದಾಗ ತೆಗಳಿದರೆ ಅವರಿಗೆ ಅಪಜಯವೇ ಕಾದಿರುತ್ತದೆ. ಹೊಗಳಿಕೆ, ತೆಗಳಿಕೆ ಎಲ್ಲಾ ಮಿತವಾಗಿರಬೇಕು. ಯಾವುದು ಹೆಚ್ಚಾದರೂ ತೊಂದರೆಯೇ. ಕೆಲವು ಸರ್ತಿ ವಂದನೆಯೇ ಸಾಕಾಗುತ್ತದೆ. ಹೊಗಳುವುದು, ತೆಗಳುವುದು ಮಗುವಿನ ವಯಸ್ಸನ್ನು ಅವಲಂಬಿಸುತ್ತದೆ.

ಆರು ವರ್ಷದ ಮಗು ಸ್ವಚ್ಛಮಾಡುವುದನ್ನು ಕಲಿಯುತ್ತಿರುವಾಗ ಸ್ವಲ್ಪ ಮಸಿ ಉಳಿದಿದ್ದರೂ ಹೊಗಳಬೇಕು. ಅದೇ ದೊಡ್ಡ ಮಕ್ಕಳು ಅಚ್ಚುಕಟ್ಟಾಗಿ ಮಾಡುವ ವಯಸ್ಸಿನವರಾಗಿದ್ದಾಗ ಈ ಹೊಗಳಿಕೆಗೆ ಅನಾವಶ್ಯಕ.

## ಮಕ್ಕಳನ್ನು ವಯಸ್ಕರಂತೆ ಕಾಣುವುದು

ನಿಮ್ಮ ಇಬ್ಬರು ಮಕ್ಕಳು ಅತಿಯಾಗಿ ಹಿಂಸಾತ್ಮಕ ದೃಶ್ಯಗಳನ್ನು ತೋರಿಸುವ

---

೧೯೯೪ರ ಫೆಬ್ರವರಿ ತಿಂಗಳಿನ ‘ರೀಡರ್ಸ್ ಡೈಜೆಸ್ಟ್’ ಮಾಸಪತ್ರಿಕೆಯಲ್ಲಿ ಪ್ರಕಟವಾದ ರೆಡ್ ಬುಕ್ ಅವರ ‘ದಿ ಟೆನ್ ವರ್ಸ್ಟ್ ಡಿಸಿಪ್ಲಿನ್ ಮಿಸ್ಟೇಕ್’ ಎಂಬ ಲೇಖನದ ಭಾವಾನುವಾದ.

ವೀಡಿಯೋ ಕ್ಯಾಸೆಟ್‌ನ್ನು ಲೈಬ್ರರಿಯಿಂದ ತರುತ್ತಾರೆ. ನೀವು ಆಕ್ಷೇಪಿಸುತ್ತೀರಿ.

ನಮ್ಮ ಸ್ನೇಹಿತರೆಲ್ಲಾ ನೋಡಿದ್ದಾರೆ. ನಾವಿಬ್ಬರೊಂದು ಕಡೆ, ನೀವೊಬ್ಬರೇ ಒಂದು ಕಡೆ ಇರುವುದರಿಂದ ನಾವೇ ಗೆದ್ದಿದ್ದೇವೆ ಎನ್ನುತ್ತಾರೆ. ನಿಮ್ಮ ಅಭಿಪ್ರಾಯಕ್ಕೆ ಅವರ ಸಮ್ಮತವಿರುವುದಿಲ್ಲ. ಇದಕ್ಕೆ ಕಾರಣ "ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ನೀವು ಕೊಟ್ಟ ಅತೀ ಸಲಿಗೆಯೇ ಕಾರಣ. ಅತಿ ಸಲಿಗೆಯಿಂದ ಮಕ್ಕಳು ಹಾಳಾಗುತ್ತಾರೆ" ಎಂದು ಮಕ್ಕಳ ತಜ್ಞ ಡಾ. ಬಾರ್‌ಟನ್ ಸ್ಕೆಮಿತ್ ಹೇಳುತ್ತಾರೆ. ನಿಮ್ಮ ಪ್ರತಿಯೊಂದು ಕಟ್ಟಳೆಯನ್ನೂ ಚರ್ಚಿಸಬೇಕೆಂದಿಲ್ಲ. ಮಕ್ಕಳು, ಮಾತಿನಲ್ಲಿ ಹೇಳುವುದಕ್ಕಿಂತ ಮಾಡಿ ತೋರಿಸುವುದನ್ನು ಹೆಚ್ಚು ಗೌರವಿಸುತ್ತಾರೆ. ಹಾಗೆ ಅವರು ಪ್ರಶ್ನಿಸಿದಾಗ ನಾವು ಉತ್ತರಿಸುವುದು ಒಳ್ಳೆಯದು ಮತ್ತು ಅವರ ಅಭಿಪ್ರಾಯವನ್ನು ಕೇಳುವುದು ಸರಿ. ಆದರೆ ಕೊನೆಯದಾಗಿ ನಿಮ್ಮ ಅಭಿಪ್ರಾಯಕ್ಕೆ ನಿಲ್ಲಬೇಕು.

ಸರಿ ಎಂದು ಕಂಡು ಬಂದಲ್ಲಿ ಮಗುವಿಗೆ ಅದರ ಇಷ್ಟದಂತೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ಉದಾ : ಪೈಜಾಮ ಹಾಕಿಕೊಳ್ಳುವ ಮೊದಲೋ ಅಥವಾ ಅನಂತರವೋ ಹಲ್ಲನ್ನುಜ್ಜುವ ಕೆಲಸವನ್ನು ಅವನ ಇಷ್ಟಕ್ಕೇ ಬಿಡಬೇಕು. ಮಾಡುವ ಕೆಲಸವನ್ನು ಪ್ರಶ್ನೆಯ ರೂಪದಲ್ಲಿ ಕೇಳಬಾರದು. ಉದಾ : ನಾವು ಡಾಕ್ಟರ ಹತ್ತಿರ ಹೋಗೋಣವೇ ?—ಇದರಿಂದ ಮಗುವಿಗೆ ತನ್ನ ಅಭಿಪ್ರಾಯಕ್ಕೆ ಅವಕಾಶ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

## ನಮ್ಮ ತಾಳ್ಮೆಯನ್ನು ಕಳೆದುಕೊಳ್ಳುವುದು

ದೊಡ್ಡ ಮಕ್ಕಳು ಜಗಳವಾಡುತ್ತಿದ್ದರೆ, ಚಿಕ್ಕ ಮಗು ಅಳುತ್ತಿದೆ. ತಕ್ಷಣ ನೀವು ವಿಪರೀತ ಜೋರಾಗಿ ಕೂಗುತ್ತೀರಿ. ಅವರೆಲ್ಲಾ ತಕ್ಷಣ ಸುಮ್ಮನಾಗುತ್ತಾರೆ. ಅವರೇನೋ ನಿಮ್ಮಿಂದ ಅಡಗಿಸಲ್ಪಟ್ಟರು. ಆದರೆ ನೀವು ಹತೋಟಿಯನ್ನು ಕಳೆದುಕೊಂಡಿರಿ. "ಸ್ವಲ್ಪ ತಡೆದು ನೀವು ಸ್ನಾನದ ಮನೆಗೆ ಹೋಗಿ ನಿಮ್ಮ ಹೆಂಡತಿಯನ್ನೋ ಅಥವಾ ಸ್ನೇಹಿತರನ್ನೋ ಕರೆದು ಅವರಿಗೆ ಆ ಕೆಲಸ ಒಪ್ಪಿಸಿ" ಎಂದು ಮಕ್ಕಳ ತಜ್ಞ ಚಾರ್ಲ್ಸ್‌ಜಾಫರ್ ಹೇಳುತ್ತಾರೆ. ನೀವು ಶಾಂತ ಸ್ಥಿತಿ ಹೊಂದಿದ ಮೇಲೆ ಮಕ್ಕಳನ್ನು ನೇರವಾಗಿ ನೋಡುತ್ತಾ ಗಡುಸಾಗಿ ಮಾತನಾಡಬಹುದು. ಮಗು ಸ್ಟೌವ್ ಹತ್ತಿರದಿಂದ ದೂರ ಸರಿಯಲು ಮತ್ತು ಅದೇ ತರಹ ಸಂದರ್ಭಗಳು ಬಂದಾಗ ಅತಿಯಾಗಿ ಕೂಗಿಕೊಳ್ಳುವ ಪ್ರಮೇಯವಿಲ್ಲ.

ಈ ಕೆಳಗಿನ ಮೂರು ವಿಧಾನಗಳನ್ನು ಪ್ರಯತ್ನಿಸಿ ನೋಡುವಂತೆ ಮನಶಾಸ್ತ್ರಜ್ಞ ರಾನ್ ಟೆಫೆಲ್ ಹೇಳುತ್ತಾರೆ.

## ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸುವುದು

ಮನಸ್ಸು ಖತಿಗೊಂಡ ಮಗುವನ್ನು ಶಾಂತಗೊಳಿಸಲು ಕೋಣೆಗೋ ಅಥವಾ ಸ್ವಲ್ಪ ಕಾಲ ಒಂದು ಗೊತ್ತಾದ ಕುರ್ಚಿಯಲ್ಲೋ ಇರಲು. ಬಿಡಬೇಕು. ಕಾಲವು ಮಗುವಿನ ಮನಸ್ಸನ್ನು ಅವಲಂಬಿಸಿರಬೇಕು.

೨ ನಿಮಿಷ ೨ ವರ್ಷದ ಮಗುವಿಗೆ, ೪ ನಿಮಿಷ ೪ ವಯಸ್ಸಿನ ಮಗುವಿಗೆ.

**ಅಧಿಕಾರವನ್ನು ಹಿಂತೆಗೆದುಕೊಳ್ಳುವುದು**

ಮಕ್ಕಳ ವಯೋಗುಣಕ್ಕೆ ಅನುಸರಿಸಿ ಟಿ. ವಿ. ನೋಡುವುದು, ಟೆಲಿಫೋನ್ ಮಾಡುವುದು ಅಥವಾ ವಾಹನದಲ್ಲಿ ಕೂರಿಸಿ ತಿರುಗಾಡಿಸುವುದು ಇವುಗಳಲ್ಲಿ ಕಡಿತ ಮಾಡುವುದು.

**ಕಿರುಕುಳ ಕೊಡುವ ನಡವಳಿಕೆಯನ್ನು ಕಡೆಗಣಿಸುವುದು**

ನಿಮ್ಮ ಗಮನ ಕಮ್ಮಿ ಯಾಗಿದ್ದನ್ನು ಗಮನಿಸಿದರೆ ಮಗು ಯಾವಾಗಲೂ ಅಳುವುದು, ಮುನಿಕೊಂಡಿರುವುದು ಅಥವಾ ಜಗಳವಾಡುವುದು, ನಿಲ್ಲಬಹುದು.

ಮಿತಿಯಿಂದ ಪ್ರಯೋಗ ಮಾಡಬೇಕು. ಆದರೆ ಹೇಳಿದ ಕಟ್ಟುಪಾಡು ಸ್ಪಷ್ಟವಾಗಿರಬೇಕು.

ಹನ್ನೊಂದು ವರ್ಷದ ಮಗು ಬಟ್ಟೆ ಧರಿಸುವುದರಲ್ಲಿ ಒಡಂಬಡಿಕೆ ತೋರಿಸಬಹುದು. ಆದರೆ ಶಾಲೆಗೆ ತಪ್ಪಿಸಿಕೊಳ್ಳುವಾಗ ಸಮ್ಮತಿಸಬಾರದು. ಕೆಲವು ಕಟ್ಟಳೆಗಳನ್ನು ಸಡಿಲಿಸಿ ಅವರ ಇಚ್ಛೆಗೆ ಹಿರಿಯರು ಸಮ್ಮತಿಸುವುದನ್ನು ನೋಡಿದಾಗ, ಹಿರಿಯರು ಸಮ್ಮತಿಸದೇ ಇರುವ ವಿಷಯಗಳಲ್ಲಿ ಮಕ್ಕಳು ಸಹಕರಿಸುತ್ತಾರೆ.

“ನಿಮ್ಮ ತಪ್ಪನ್ನು ಒಪ್ಪಿಕೊಳ್ಳಲು ಹಿಂಜರಿಯಬೇಡಿ. ತಪ್ಪು ಮಾಡಿದಾಗ ‘ತಪ್ಪಾಯ್ತು’ ಎಂದು ಹೇಳುವುದರಿಂದ ಸಾಮರಸ್ಯ ಇರುವುದಿಲ್ಲವೆಂದಾಗುವುದಿಲ್ಲ. ಅದು ಪರಸ್ಪರ ಗೌರವದ ಸಂಕೇತವಾಗುತ್ತದೆ ಮತ್ತು ಮಕ್ಕಳು ತಾವು ತಪ್ಪು ಮಾಡಿದಾಗ ಹಿರಿಯರಿಂದ ತಪ್ಪಿಸಿಕೊಳ್ಳುವುದನ್ನು ಬಿಟ್ಟು ತಪ್ಪೊಪ್ಪಿಕೊಳ್ಳುವಂತೆ ಪ್ರೇರೇಪಿಸುತ್ತದೆ” ಎಂದು ಜೇಫರ್ ಅಭಿಪ್ರಾಯ ಪಡುತ್ತಾರೆ.

**ಮಕ್ಕಳನ್ನು ಒಂದೇ ರೀತಿ ಭಾವಿಸುವುದು**

ಬುದ್ಧಿ ತಿಳಿದ ಮಗುವಿಗೆ “ನೀನು ಮನೆಯಿಂದ ಹೊರಗೆ ಹೋಗಬಾರದು” ಎನ್ನುವುದು, ಹದಿಮೂರು ವರ್ಷದ ಮಗುವಿಗೆ “ಮೂಲೆಯಲ್ಲಿ ನಿಲ್ಲು”ಎನ್ನುವುದು ತಪ್ಪಾಗುತ್ತದೆ.

ನಿಮ್ಮ ಶಿಸ್ತಿನ ನಿರ್ಣಯ ಮಕ್ಕಳ ಮನೋಭಾವ, ವಯಸ್ಸಿಗೆ ಅನುಗುಣವಾಗಿರಬೇಕು. “ಯಾವುದೇ ಗೊತ್ತಾದ ಆದರ್ಶ ವಿಧಾನವೇನಿಲ್ಲ. ಎಲ್ಲಾ ಮಕ್ಕಳಿಗೂ ಒಂದೇ ವಿಧಾನವನ್ನು ಪ್ರಯೋಗಿಸಲು ಆಗುವುದಿಲ್ಲ. ಹೆಚ್ಚು ಎಗರಾಡದ ಮಗನಿಗೆ ಹೇಳುವುದನ್ನು ಅತಿಯಾಗಿ ಎಗರಾಡುವ ಮಗಳಿಗೆ ಹೇಳಿದರೆ ಪ್ರಯೋಜನವಾಗುವುದಿಲ್ಲ” ಎಂದು ಮನಶ್ಶಾಸ್ತ್ರಜ್ಞ ಸ್ಟಾನ್ಲಿ ಟರ್ಕಿ ಹೇಳುತ್ತಾರೆ.

ಮಗುವಿಗೆ ಹೇಳುವುದನ್ನು ಅವರ ಮನೋಭಾವಕ್ಕೆ ತಕ್ಕಂತೆ ರೂಢೀಕರಿಸಬೇಕು.

ಯಾವಾಗಲೂ ಕನಸು ಕಾಣುವ ಮಗಳಿಗೆ ಸ್ವಚ್ಛಗೊಳಿಸುತ್ತಿರುವಾಗ ಗಮನ

ಬೇರೆಕಡೆ ಹೋಗಿದ್ದು ಕಂಡಾಗ "ಪುಸ್ತಕಗಳನ್ನು ಅಲಮಾರಿನಲ್ಲಿಡು, ಬಟ್ಟೆಗಳನ್ನು ಬೀರುವಿನಲ್ಲಿಡು" ಎಂದು ಕಟ್ಟುನಿಟ್ಟಾಗಿ ಹೇಳಬೇಕು.

ಚಿಕ್ಕಮಕ್ಕಳಿಗೆ ಹೇಳುವ ನಿಯಮಗಳು ಕ್ಷೇಮದ ಕಟ್ಟುಪಾಡಿನಲ್ಲಿರುವಂತಿರಬೇಕು ಮತ್ತು ಜಗಳವಾಡುವ ಸ್ವಭಾವವನ್ನು ತಡೆಯುವಂತಿರಬೇಕು.

ಶಾಲೆಗೆ ಹೋಗುವ ಮುನ್ನಿನ ಮಕ್ಕಳಿಗೆ ಪದಾರ್ಥಗಳ ಅಥವಾ ಸ್ವತ್ತಿನ ಮೇಲಿನ ಗೌರವ ಮತ್ತು ಪ್ರಾಣಿ ದಯೆ ಇವುಗಳಿಗೆ ಅನುಗುಣವಾಗಿ ನಿಯಮಗಳನ್ನು ತಿಳಿಸಬೇಕು. "ನಿನ್ನ ಪೈಂಟ್ ಪೆಟ್ಟಿಗೆಯನ್ನು ನಿನ್ನ ಸೋದರಿ ಹಾಳುಮಾಡಿದರೆ ನಿನಗೆ ಬೇಸರವಾಗುವುದಿಲ್ಲವೇ! ಹಾಗೆಯೇ ಅವಳ ಸೌಂದರ್ಯ ಸಾಧನಗಳ ಪೆಟ್ಟಿಗೆಯನ್ನು ನೀನು ಹಾಳು ಮಾಡಿದಾಗ ಅವಳಿಗೂ ಬೇಸರ ಆಗುತ್ತದೆ" ಎಂದು ಹೇಳಬೇಕು.

ಶಾಲೆಗೆ ಹೋಗುವ ಮಕ್ಕಳು ನಾವು ಹೇಳುವುದು ಎಷ್ಟು ನ್ಯಾಯಸಮ್ಮತವಾದದ್ದೆಂದು ನೋಡಿ ಅನಂತರ ಒಡಂಬಡುತ್ತಾರೆ.

## ಶಿಕ್ಷೆಯನ್ನು ತಪ್ಪಿಸುವುದು

ಮಗು ತನ್ನ ತಪ್ಪುನಡತೆಯಿಂದ ಆಗುವ ತೊಂದರೆಯನ್ನು ತಿಳಿಯದಿದ್ದರೆ, ಅದು ತನ್ನ ಪಾಠವನ್ನು ಕಲಿಯುವುದಿಲ್ಲ. ಏಂಡೆಲ್, "ಶಿಕ್ಷೆ ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಅದು ನ್ಯಾಯಸಮ್ಮತವಾಗಿ ಮತ್ತು ಕಾಠಿಣ್ಯವಿಲ್ಲದೆ ಮರುಕವುಳ್ಳದ್ದಾಗಿರಬೇಕು" ಎಂದು ಅಭಿಪ್ರಾಯ ಪಡುತ್ತಾರೆ.

ನಿಯಮವನ್ನು ಉಲ್ಲಂಘಿಸಿದಾಗ ಅದಕ್ಕೆ ತಕ್ಕಂತೆ ದಂಡನೆಯನ್ನು ವಿಧಿಸಬೇಕು. ಉದಾ : ನಿಮ್ಮ ಮಗಳು ಶಾಲೆಯ ಬಸ್ಸನ್ನು ತಪ್ಪಿದಾಗ, ನೀವು ಅವಳನ್ನು ಶಾಲೆಗೆ ಬಿಡಬೇಕಾಗಿ ಬಂದಾಗ, ಹಿಂತಿರುಗಿ ಶಾಲೆಯಿಂದ ಬಂದ ಮೇಲೆ ಅವಳಿಗಾಗಿ ನಿಮ್ಮ ಸಮಯ ನಷ್ಟವಾದ್ದರಿಂದ, ರಾತ್ರಿ ಮಾಮೂಲಿಗಿಂತ ಸ್ವಲ್ಪ ಹೆಚ್ಚಾಗಿ ಮನೆಕೆಲಸ ಮಾಡಬೇಕು ಎಂದು ಅವಳಿಗೆ ನಿರ್ಬಂಧಿಸಬೇಕು.

ತಪ್ಪು ನಡವಳಿಕೆಯನ್ನು ಹೊಡೆತದಿಂದ ಕ್ಷಣಿಕವಾಗಿ ತಡೆಗಟ್ಟಬಹುದು, ಕ್ರಮೇಣ ಈ ತರಹದ ಶಿಕ್ಷೆ ಮಗು ಎದುರು ಬೀಳುವಂತೆ ಮಾಡುತ್ತದೆ. ಶಿಕ್ಷೆಯನ್ನು ಅನುಭವಿಸಿದ ಮಗು ತನ್ನನ್ನು ಸ್ಥಿಮಿತದಲ್ಲಿಟ್ಟುಕೊಳ್ಳುವ ಶಕ್ತಿಯನ್ನು ಕಳೆದುಕೊಂಡಿರುತ್ತದೆ. ತಪ್ಪನ್ನು ತಿದ್ದಿಕೊಳ್ಳುವುದೂ ಇಲ್ಲ. ಬರೀ ಭಯ ಒಂದೇ ಇರುತ್ತೆ.

## ರೋಗ ಚಿಕಿತ್ಸಕನ ಪಾತ್ರ

ನಿಮ್ಮ ಮಗು ತನ್ನ ಸೋದರನ ಆಟಿಕೆಗಳನ್ನು ಒಡೆಯುತ್ತಿದ್ದಾಳೆ ಮತ್ತು "ನನಗೆ ಅವನನ್ನು ಕಂಡರೆ ಇಷ್ಟವಿಲ್ಲ" ಎಂದು ಗಟ್ಟಿಯಾಗಿ ಕೂಗಾಡುತ್ತಿದ್ದಾಳೆ. ಆಗ ನೀವು ಮೃದುವಾಗಿ 'ಏಕಮ್ಮ ? ಏನಾಯ್ತು ?' ಎಂದು ಕನಿಕರದಿಂದ ಕೇಳಬಾರದು. ಇದು ಪ್ರಯೋಜನವಾಗುವುದಿಲ್ಲ.

ಮಕ್ಕಳು ! ತಾಯಿ ತಂದೆಯರು ಖಂಡಿತವಾದಿಗಳೆಂದಾಗ ಮಾತ್ರ ನಿಮ್ಮ ಅಭಿಪ್ರಾಯವನ್ನು ಕೇಳುತ್ತಾರೆ.

ಕಾರಣವನ್ನು ಕೇಳುವುದಕ್ಕೆ ಮೊದಲು ಮಗುವಿನ ಹಾರಾಟವನ್ನು ತಡೆಯಬೇಕು. ನಿಮ್ಮ ಚಿಕ್ಕ ಮಗು ನಿಮ್ಮನ್ನು ಹೊಡೆಯು

ತ್ತಿದ್ದರೆ ಕೈಹಿಡಿದುಕೊಂಡು "ಅಮ್ಮನನ್ನು ಹೊಡೆಯಬಾರದು ತಕ್ಷಣ ನಿಲ್ಲಿಸು" ಎಂದು ಹೇಳಿ ನಂತರ ಕಾರಣ ಕೇಳಬೇಕು.

### ಮೆಚ್ಚುಗೆಯ ದುರುಪಯೋಗ ಪಡಿಸಿಕೊಳ್ಳುವಿಕೆ

"ನೆಲದ ಮೇಲೆ ನೀರು ಚೆಲ್ಲುವುದನ್ನು ನಿಲ್ಲಿಸಿದರೆ ನಿನಗೆ ಊಟದ ನಂತರ ಐಸ್‌ಕ್ರೀಂ ಕೊಡಿಸುತ್ತೇನೆ" ಎಂದು ತಪ್ಪು ಮಾಡುತ್ತಿರುವ ಮಗುವಿಗೆ ಆಶ್ವಾಸನೆ ಕೊಡುವುದರಿಂದ, ತಮ್ಮ ತಪ್ಪು ಕೆಲಸವನ್ನು ನಿಲ್ಲಿಸಲು ನಿಮ್ಮಿಂದ ಏನಾದರೂ ಒಂದನ್ನು ಎದುರು ನೋಡುತ್ತಿರುತ್ತವೆ. ಇದು ಒಂದು ರೀತಿಯ ಲಂಚಗಾರಿಕೆಯಾಗುತ್ತದೆ. ಆದ್ದರಿಂದ ಈ ಕ್ರಮಕ್ಕೆ ಏನೂ ಬೆಲೆ ಇಲ್ಲ." ಎನ್ನುತ್ತಾರೆ 'ವಿಂಡೆಲ್' ಆದುದರಿಂದ ಒಳ್ಳೆಯ ನಡವಳಿಕೆಯನ್ನು ಕಲಿಸಲು ಮಾತ್ರ ಇನಾಮನ್ನು ಉಪಯೋಗಿಸಬೇಕು. 'ಐಸ್‌ಕ್ರೀಂ'ನ್ನು ಇನಾಮಾಗಿಕೊಡದೆ ಮಕ್ಕಳು ಇಬ್ಬರೂ ಸೇರಿ ಕೊಠಡಿಯನ್ನು ಸರಿಯಾಗಿ ಇಟ್ಟುಕೊಂಡಾಗ ಸಂತೋಷಕ್ಕಾಗಿ ಕೊಟ್ಟರೆ ಅದು ಸರಿ. ಇದರಿಂದ ಮಗು ನಿಮ್ಮ ಆಂತರಿಕವಾದ ಮೆಚ್ಚುಗೆಯನ್ನು ಗುರುತಿಸುವಂತಾಗುತ್ತದೆ. ನಿಮ್ಮ ಮೆಚ್ಚುಗೆಯೇ ಅವರಿಗೆ ಬಹುಮಾನವಾದಂತಾಗುತ್ತದೆ. "ನಿಮ್ಮ ಕೋಣೆಯನ್ನು ಸ್ವಚ್ಛಮಾಡಲು ಬಹಳ ಶ್ರಮಿಸಿದ್ದೀರಿ. ನಿಮ್ಮ ಗೆಳೆಯರಿಗೆ ತೋರಿಸಿ ಹೆಮ್ಮೆ ಪಟ್ಟರಬೇಕು." ಎಂದು ನಿಮ್ಮ ಸಂತೋಷವನ್ನು ವ್ಯಕ್ತಪಡಿಸಿ ಹೇಳಿ.

### ಎಲ್ಲರೆದುರು ಕಚ್ಚಾಡುವುದು

ಹೆತ್ತವರು ಮಕ್ಕಳಿಗೆ ಕೇಳಿಸುವಂತೆ ಮನೆ ವ್ಯವಹಾರದಲ್ಲಿ ಕಚ್ಚಾಡಿದರೆ ಮಕ್ಕಳು ಭ್ರಾಂತಿಗೊಳ್ಳುತ್ತಾರೆ ಮತ್ತು ಅಭದ್ರತೆಯ ಭೀತಿ ವುಂಟಾಗುತ್ತದೆ. ಅವರೂ ತಂದೆ ತಾಯಿಯರನ್ನೇ ಅನುಕರಣೆ ಮಾಡುತ್ತಾರೆ.

ಮನೆ ಸುವ್ಯವಸ್ಥಿತವಾಗಿರಬೇಕಾದಾಗ ಒಗ್ಗಟ್ಟನಿಂದಿರಬೇಕು. ತಮ್ಮ ತಮ್ಮಲ್ಲಿನ ಭೇದಭಾವವನ್ನು ಮಕ್ಕಳ ಮರೆಯಲ್ಲಿ ತೀರ್ಮಾನಿಸಿಕೊಳ್ಳಬೇಕು. ಆದರೆ ಇಬ್ಬರೂ ಮಕ್ಕಳ ಮನೆಪಾಠ, ಮನೆಕೆಲಸ, ಮಲಗುವ ಸಮಯ ಮತ್ತು ಹೊಡೆಯುವುದು, ಕದಿಯುವುದು ಮತ್ತು ಸುಳ್ಳು ಹೇಳುವುದು ಇವುಗಳನ್ನು ತಡೆಯಲು ಒಟ್ಟಿಗೆ ಒಂದೇ ರೀತಿಯಲ್ಲಿ ನಡೆದುಕೊಳ್ಳುವ ಒಪ್ಪಂದಕ್ಕೆ ಬರಬೇಕು. ಇಬ್ಬರೂ ಮಕ್ಕಳಿಂದ ಮಾಡಿಸಬೇಕಾದ ಕೆಲಸಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡು ಮಾಡಿಸಬೇಕು. ಉದಾ : ತಂದೆ ಮನೆಕೆಲಸ ಮಾಡಿಸಿದರೆ, ತಾಯಿ ಮಲಗುವ ಕೆಲಸ ಮಾಡಿಸಬೇಕು. ಎಲ್ಲವನ್ನು ಒಬ್ಬರೇ ಮಾಡಿಸಿದರೆ ಅವರಿಲ್ಲದಾಗ ಅದರ ದುರುಪಯೋಗವನ್ನು ಮಕ್ಕಳು ಮಾಡಿಕೊಳ್ಳುತ್ತಾರೆ.

### ಕೆಟ್ಟದ್ದನ್ನು ಊಹಿಸುವುದು

ಹನ್ನೆರಡು ವರ್ಷದ ಮಗು, ಅವನ ತರಗತಿಯ ಹುಡುಗ 'ತನ್ನನ್ನು ಗುದ್ದಿದ' ಎಂದು ಹೇಳಿದಾಗ ನೀವು 'ನೀನೇನೋ ಅವನಿಗೆ ಮಾಡಿದ್ದಿ. ಅದಕ್ಕೆ ಅವನು ಹೊಡೆದಿದ್ದಾನೆ' ಎನ್ನಬೇಡಿ ಹೀಗೆ ಅವನಲ್ಲಿ ನೀವು ತಪ್ಪು ಹೊರಿಸಿದರೆ ಅವನು ನಿಜವಾಗಿಯೂ ಸ್ವಭಾವದಲ್ಲಿ ಕೆಟ್ಟವನು ಎಂಬ ಅಭಿಪ್ರಾಯ ಅವನಲ್ಲಿ ಮೂಡಿಸಿದಂತಾಗುತ್ತದೆ.

ಅದರ ಬದಲು ಕೆಲಸದ ಮೇಲೆ ಗಮನ ವಿರಲಿ. ವ್ಯಕ್ತಿಯ ಮೇಲಲ್ಲ. 'ಯಾವಾಗಲೂ' ಎನ್ನುವ ಪದವನ್ನು (ಉದಾ: ಯಾವಾಗಲೂ ನೀನು ನಿನ್ನ ಸಾಮಾನುಗಳನ್ನು ಎಲ್ಲಾ ಕಡೆ ಹರಡುತ್ತಿ.) ಮತ್ತು 'ಎಂದಿಗೂ' ಪದವನ್ನು ಉಪಯೋಗಿಸಬೇಡಿ ಅವುಗಳನ್ನು ತಿಳಿಯಪಡಿಸಲು ಬೇರೆ ರೀತಿ ಹೇಳಿ. ಉದಾ: ನಿನ್ನ ಷೂವನ್ನು ಅದರ ಜಾಗದಲ್ಲಿಡಲು ಮರೆತಿದ್ದಿ' ಎಂದು ತಿಳಿಸಿ. ಅವಳಿಗೆ ನಿಮ್ಮ ಅನಿಸಿಕೆಗಳನ್ನು ಪೂರೈಸಲು ಸಾಧ್ಯ. ಎನ್ನುವ ತಿಳಿವಳಿಕೆ ಬರಲಿ. ಈಗ ಮಾಡಿರದಿದ್ದರೂ ಮುಂದೆ ಮಾಡುವೆ' ಎಂಬ ನಂಬಿಕೆ ಬರಲಿ.

ನಿಮ್ಮ ಮಗುವಿಗೆ ಏನಾದರೂ ತೊಂದರೆ ಇದ್ದರೆ ಅವನ ಅನಿಸಿಕೆಗಳನ್ನು ಮೊದಲು ಕೇಳಿ. 'ನಿಮ್ಮ ಒತ್ತಾಸೆ ಅವನಿಗೆ ಸಹಾಯವಾಗುತ್ತದೆ' ಎನ್ನುತ್ತಾರೆ ಟುರೇಕಿ

ಮಕ್ಕಳಿಗೆ 'ನೀವು ಅವರಕಡೆಗೆ ಇದ್ದೀರಿ' ಎಂಬ ತಿಳಿವಳಿಕೆಯುಂಟಾದರೆ ಅವರು ಒಳ್ಳೆಯ ರೀತಿಯಲ್ಲಿ ವರ್ತಿಸುತ್ತಾರೆ.



ಹಿಂಸೆ ಮನುಷ್ಯನ ಕೆಲಸವಲ್ಲ. ಅದು ರಾಕ್ಷಸೀ ಕೆಲಸ, ಹಿಂಸೆಯ ಯೋಚನೆ ಮಾಡುವುದು ಕೂಡಾ ರಾಕ್ಷಸೀತನವೆನಿಸುವುದು.

—ಬುದ್ಧ

ಅಹಿಂಸೆ ಹೇಡಿತನವಲ್ಲ, ಆತ್ಮಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿ ಮುಟ್ಟಲು ತಾಳ್ಮೆ ಮಾತ್ರ ಬೇಕು.

—ಗಾಂಧೀಜಿ

# ಆನಂದದ ಕ್ಷಣಗಳ ಸ್ಮೃತಿಲೋಕ

ಟಿ. ವಿ. ಅನ್ನಪೂರ್ಣಮ್ಮ

[ಅತೀತದ ಉಲ್ಲಾಸಮಯ ದಿನಗಳನ್ನು ನೆನಸಿಕೊಳ್ಳುವುದು ಬೇಸರದ ಸಮಯ ವನ್ನು ಗೆಲ್ಲುವ ಅತ್ಯುತ್ತಮ ಮಾರ್ಗ.]

೧೯೮೭ರ ಮಾರ್ಚಿ ೧೨ರ ಮಾತು. ನನ್ನ ಉದ್ಯೋಗದಲ್ಲಿ ಒಂದು ಹೊಡೆತ ಬಿತ್ತು. ಆದರಿಂದ ಆದ ಆರ್ಥಿಕ ನಷ್ಟದ ಬಗ್ಗೆ ನನಗೆ ಯೋಚನೆಯಿಲ್ಲ. ಅದಕ್ಕಾಗಿ ನಾನು ಅಳು ವುದೂ ಇಲ್ಲ. ಆಗ ಬಹಳ ಸಮಯದವರೆಗೆ ನಾನು ಚಿಂತಿತನಾಗಿದ್ದೆ. ನನ್ನ ಎಲ್ಲಾ ಪ್ರಯತ್ನಗಳೂ ನಿಷ್ಫಲವಾದ ಕಾರಣ ಇಷ್ಟು ಪಶ್ಚಾತ್ತಾಪ ಆಗಲೇಬೇಕಿತ್ತು.

ನಾನು ನನ್ನ ಅಧ್ಯಯನದ ಕೊಠಡಿ ಸೇರಿದೆ. ಅಲ್ಲಿ ಗೋಡೆಯಮೇಲಿದ್ದ ಒಂದು ಕ್ಯಾಲೆಂಡರನ್ನು ತೆಗೆದುಕೊಂಡೆ. ಅದರಲ್ಲಿನ, ನನ್ನ ಕಳೆದುಹೋದ ಆನಂದದ ದಿನಾಂಕ ಗಳನ್ನು ನೋಡಿ ಸಂತೋಷದ ಆ ಕ್ಷಣ ಗಳನ್ನು ಮೆಲಕುಹಾಕುತ್ತಾ, ವಿಫಲತೆಯ ನೋವಿನಿಂದ ಕ್ರಮೇಣ ಮುಕ್ತನಾದೆ. ಮನಸ್ಸನ್ನು ಪುನಃ ಪ್ರಫುಲ್ಲಗೊಳಿಸಿಗೊಂಡೆ.

ಈ ಕ್ಯಾಲೆಂಡರನ್ನು ನಾನು ಸಂತಸದ ಕ್ಯಾಲೆಂಡರ್'' ಎಂದು ಕರೆಯುತ್ತೇನೆ. ೧೯೮೨ರಲ್ಲಿ ಸಹ ಉದ್ಯೋಗದಲ್ಲಿ ಇಂತ ಹುದೇ ಒಂದು ಹೊಡೆತವನ್ನು ಸಹಿಸ ಬೇಕಾಯಿತು. ಆಗ ಈ ಸಮಸ್ಯೆಗಳನ್ನು ಮರೆಯಲು ನಾನು ಈ ಕ್ಯಾಲೆಂಡರನ್ನು ರಚಿಸಿದ್ದೆ. ತಾರೀಖುಗಳ ಚೌಕಗಳು ವಿಶಾಲ ವಾಗಿರುವಂತಹ ಒಂದು ಕ್ಯಾಲೆಂಡರನ್ನು ನಾನು ಕೊಂಡುತಂದೆ. ಆನಂದದ ಕ್ಷಣ ಗಳನ್ನು ಅನುಭವಿಸಿದ ಸಮಯ, ಸ್ಥಳ ಮತ್ತು ವ್ಯಕ್ತಿಯ ಹೆಸರನ್ನು ಈ ಖಾಲಿ ಜಾಗದಲ್ಲಿ ಬರೆಯಲಾರಂಭಿಸಿದೆ. ಪ್ರತಿದಿನದ ಭೇಟಿಗಳಿಗೆ ಸಂಬಂಧಿಸಿದ ಕ್ಯಾಲೆಂಡರನ್ನು ನಾನು ಅನೇಕ ವರ್ಷಗಳಿಂದ ಇಟ್ಟು ಕೊಳ್ಳುತ್ತಾ ಬಂದಿದ್ದೇನೆ. ಈ ವಿಶೇಷವಾದ ಕ್ಯಾಲೆಂಡರಿನಲ್ಲಿ, ನನ್ನ ಜೀವನದಲ್ಲಿ ಅತ್ಯಂತ ಆನಂದದಿಂದ ನಾನು ಕಳೆದ ೩೬೫ ದಿನಗಳ ಒಂದು ದಾಖಲೆ ಸಿದ್ಧವಾಯಿತು.

ನನ್ನ ಕೆಲಸದ ರೀತಿ ಪ್ರಾರಂಭದಿಂದಲೇ ಬಹಳ ಸರಳವಾಗಿತ್ತು. ನನ್ನ ಸಂತಸದ

---

೧೯೮೭ರ ಏಪ್ರಿಲ್ ತಿಂಗಳಿನ 'ಸರ್ವೋತ್ತಮ್' ಹಿಂದಿ ಮಾಸಪತ್ರಿಕೆಯಲ್ಲಿ ಪ್ರಕಟವಾದ ಜಾನ್ ಕಲಹೆನ್ ಅವರ "ಆನಂದ್ ಕೆ ಕ್ಷಣೋಂ ಕಾ ಸ್ಮೃತಿಲೋಕ್" ಎಂಬ ಲೇಖನದ ಅನುವಾದ.

ಕ್ಯಾಲೆಂಡರಿನ ಜನವರಿ ತಿಂಗಳ ಪುಟದಲ್ಲಿ ನಾನು ಈ ರೀತಿ ಬರೆದೆ. "ನಾನು ಕೇವಲ ಆನಂದಮಯ ದಿನಗಳನ್ನು ನೆನೆಸಿಕೊಳ್ಳುತ್ತೇನೆ." ನನ್ನ ಬಾಲ್ಯದಲ್ಲಿ ಒಂದು ಗಡಿಯಾರದ ಮೇಲೆ ಈ ವಾಕ್ಯ ಬರೆದದ್ದನ್ನು ನೋಡಿದ್ದೆ. ನಾನು ಒಂಬತ್ತು ವರ್ಷದವನಾಗಿದ್ದಾಗ ನನ್ನ ತಂದೆಯವರು ಅಮೆರಿಕದ ಸೈನ್ಯಕ್ಕೆ ಸೇರುವಾಗ ತಮ್ಮ ದೈನಿಕ ಭೇಟಿಗಾಗಿ ಇಟ್ಟುಕೊಂಡಿದ್ದ ಕ್ಯಾಲೆಂಡರನ್ನು ನನಗೆ ಕೊಟ್ಟಿದ್ದರು. ಏಕೆಂದರೆ, ಅವರು ೧೯೪೪ರಲ್ಲಿ ಅದನ್ನು ಉಪಯೋಗಿಸುವಂತಿರಲಿಲ್ಲ. ಆಗಿನಿಂದ ನಾನು ಈ ರೀತಿಯ ಕ್ಯಾಲೆಂಡರನ್ನು ಇಟ್ಟುಕೊಳ್ಳುತ್ತಾ ಬರುತ್ತಿದ್ದೇನೆ. ಆ ಗಡಿಯಾರದ ಮೇಲಿನ ವಾಕ್ಯವನ್ನು ಬರೆದ ಅನಂತರ, ಈ ಎಲ್ಲ ಹಳೆಯ ಕ್ಯಾಲೆಂಡರು ಮತ್ತು ಸಂಸ್ಮರಣ ಪುಸ್ತಕಗಳಲ್ಲಿ ನನ್ನ ಆನಂದಮಯ ದಿನಗಳನ್ನು ಹುಡುಕತೊಡಗಿದೆ.

ಮೇಲೆ ಹೇಳಿದ ವಸ್ತುಗಳನ್ನು ಹುಡುಕಿ, ಬಾಲ್ಯದಿಂದ ೧೯೬೩ರ ಆ ವಾರದ ವರೆಗೆ ನನ್ನ ಜೀವನದ ಅತ್ಯಂತ ಹರ್ಷಮಯ ದಿನಗಳ ಪಟ್ಟಿ ಮಾಡಿದೆ. ನಂತರ ಈ 'ಸಂತಸದ ಕ್ಯಾಲೆಂಡರನ್ನು' ಅತ್ಯಂತ ಆಧುನಿಕವನ್ನಾಗಿ ಮಾಡಲು ಮೂರು ಭಾಗಗಳ ನಿಯಮ ಕಲಿಸಿದೆ. ಮೊದಲ ಭಾಗದಲ್ಲಿ ಪ್ರತಿ ತಿಂಗಳ ಅಂತ್ಯದಲ್ಲಿ ಬಳಕೆಯಲ್ಲಿರುವ ನನ್ನ ಕ್ಯಾಲೆಂಡರಿನಿಂದ ಅತ್ಯಂತ ಆನಂದವಾಗಿ ಕಳೆದಿರುವ ಮೂರು ನಾಲ್ಕು ದಿನಗಳನ್ನು ಆರಿಸಿಕೊಳ್ಳುತ್ತೇನೆ ಆ ದಿನಗಳನ್ನು ಆ ತಿಂಗಳ ಪುಟದ ಮೇಲ್ಭಾಗದಲ್ಲಿ ಶೀರ್ಷಿಕೆಯಂತೆ ಬರೆಯುತ್ತೇನೆ. ಉದಾಹರಣೆಗೆ ೧೯೬೩ರ ಶೀರ್ಷಿಕೆ ಈ ರೀತಿ ಇತ್ತು, ಮೈಕೇಲ್ ಮತ್ತು ಟಿ.ಎಚ್‌ರಿಂದ ರಜಾ ದಿನದ ಪಾರ್ಟಿಗಳಲ್ಲಿ ಸಂಗೀತ, ಹಿಂಡ್ ಮತ್ತು ನಾನು ವರ್ಜಿಲ್‌ನ ಹುಟ್ಟುಹಬ್ಬವನ್ನು ಆಚರಿಸಿದೆವು. ಮೈಕೆಲ್ ಮತ್ತು ಟಿ.ಎಚ್. ಎಂದರೆ ಥಾಮಸ್ ಹೆನ್ರಿ ನಮ್ಮ ಮಕ್ಕಳು. ಅವರು ಜನವರಿ ತಿಂಗಳ ಒಂದು ಮತ್ತು ಎರಡನೆ ದಿನಾಂಕಗಳಂದು ಬಹಳ ಮಧುರವಾಗಿ ಗಿಟಾರು ನುಡಿಸಿದ್ದರು. ಹಿಂಡ್, ನನ್ನ ಪತ್ನಿ, ನಾವು ಜನವರಿ ೧೧ರಂದು, ನಮ್ಮ ಮಿತ್ರ ವರ್ಜಿಲ್ ಬರನೆಟ್‌ನ ಜನ್ಮದಿನದಂದು ಪಾರ್ಟಿ ಕೊಟ್ಟಿದ್ದೆವು.

ಎರಡನೇ ಭಾಗದಲ್ಲಿ, ಕಳೆದ ವರ್ಷದ ಪ್ರತಿ ತಿಂಗಳ ಶೀರ್ಷಿಕೆಗಳಲ್ಲಿ ಆರಿಸಿ, ಆ ದಿನಾಂಕದ ಸಹಿತ 'ಸಂತಸದ ಕ್ಯಾಲೆಂಡರಿ' ನಲ್ಲಿ, ನವವರ್ಷದ ದಿನದಂದು ಬರೆದಿಡುವುದು (ಹೊಸ ವರ್ಷದಲ್ಲಿ ಹೊಸದಾಗಿ ಏನಾದರೂ ಮಾಡುತ್ತೇವೆಂದು ಸಂಕಲ್ಪ ಮಾಡುವ ಬದಲು, ಈ ಕ್ಯಾಲೆಂಡರಿನಲ್ಲಿ ಗುರುತು ಹಾಕುವುದು ಬಹಳ ಸುಲಭ.)

"ನಿಗದಿಯಾದ ದಿನಾಂಕದಂದು, ಅತ್ಯಂತ ಆನಂದದಿಂದ ಕಳೆದ ದಿನವನ್ನು ನಮೂದಿಸಿದ ಅನಂತರ, ಪುನಃ ಅದನ್ನು ಬರೆಯಬೇಕಾದ ಆವಶ್ಯಕತೆ ಏನು?" ಎಂದು ನನ್ನನ್ನು ಕೆಲವರು ಕೇಳಿದರು.

ಮೂರನೆ ಭಾಗ ಇದಕ್ಕೆ ಉತ್ತರವೇ ಆಗಿತ್ತು. ಹೊಸ ಆನಂದಮಯ ದಿನದ ವಿವರಣೆಯನ್ನು ನಾನು ಕ್ಯಾಲೆಂಡರಿನ ಹಿಂಭಾಗದಲ್ಲಿ ಬರೆಯುತ್ತೇನೆ. ನನ್ನ ಜೀವನದ ಆನಂದಮಯ ವರ್ಷ ಪೂರ್ಣವಾದ ಅನಂತರ ಇನ್ನೊಂದು ವರ್ಷವನ್ನು ಪ್ರಾರಂಭಿಸುತ್ತೇನೆ. ಇಷ್ಟಾಗಿಯೂ ಜೀವನ

ದಲ್ಲಿ ಅನೇಕ ವರ್ಷಗಳು ಅತ್ಯಂತ ಸುಖದಾಯಕವಾಗಿರುವುದಿಲ್ಲ.

'ಸಂತಸದ ಕ್ಯಾಲೆಂಡರಿನ' ಉಪಯೋಗ ಹೇಗೆ ಮಾಡಬಹುದು, ಎಂಬುದನ್ನು ಅವಲೋಕಿಸಲು ಕೆಲವು ಅಂಶಗಳನ್ನು ಪ್ರಸ್ತುತಪಡಿಸುತ್ತೇನೆ. ಅನಿವಾರ್ಯವಾಗಿ ಬರುವ ಕಷ್ಟ ಸಮಯದಲ್ಲಿ, ದುಃಖವನ್ನು ಕಡಿಮೆಮಾಡಿಕೊಳ್ಳಲು ಈ ಕ್ಯಾಲೆಂಡರ್ ಹೇಗೆ ಸಹಾಯಮಾಡಬಲ್ಲದು ಎಂಬುದನ್ನು ಕೊನೆಯ ಅಂಶದಿಂದ ತಿಳಿಯಬಹುದು.

**ಜನವರಿ:** ೧೯೬೬ರ ೩೦ನೇ ದಿನಾಂಕ ಅತ್ಯಂತ ಆನಂದಮಯ ದಿನವಾಗಿತ್ತು ನನ್ನ ಕ್ಯಾಲೆಂಡರ್ ಈ ರೀತಿ ಸೂಚಿಸುತ್ತಿದೆ. "ರಿವರ್‌ಡೇಲ್, ಎನ್. ವೈಪುತ್ರರ ಜೊತೆ ಸ್ಲೈಡಿಂಗ್, ಸೈಕೆಲ್–೪, ಟಿ.ಎಚ್–೩" ನನ್ನ ಇಬ್ಬರು ಮಕ್ಕಳನ್ನು ನನ್ನ ಬೆನ್ನಿನ ಮೇಲೆ ಕುಳಿತುಕೊಳ್ಳಲು ಹೇಳಿದೆ. ಅನಂತರ ನಾವು ಹೆನ್ರಿಹಡ್ಸನ್‌ನ ಪ್ರತಿಮೆಯಿಂದ ಮಂಜುಕವಿದ ಬೆಟ್ಟದಲ್ಲಿ ಜಾರುತ್ತಾ ಬುಡಕ್ಕೆ ಬಂದೆವು. ಈ ವಿಷಯ ವಿವರಣೆಯಿಂದ ನೆನಪಿಗೆ ಬರುತ್ತದೆ.

**ಫೆಬ್ರವರಿ:** ಫೆಬ್ರವರಿ ೭, ನಾನು ಹುಟ್ಟಿದ ದಿನ, ಚಾರ್ಲ್ಸ್ ಡಿಕೆನ್ಸ್ ಹುಟ್ಟಿದ ದಿನವೂ ಇದೇ "ಚಾರ್ಲ್ಸ್ ಡಿಕೆನ್ಸ್‌ರವರ ಜನ್ಮದಿನದಂದು ಚಾರಿತ್ರಿಕ ತಕ್ಕ ಉಡುಪಿನ ನಾಟಕದ ಏರ್ಪಾಡು" ಎಂದು ಬರೆದ ಆಹ್ವಾನ ಪತ್ರವನ್ನು ನಾನು ಮತ್ತು ನನ್ನ ಪತ್ನಿ ೧೯೭೭ನೇ ಫೆಬ್ರವರಿ ೭ ರಂದು ಕಳುಹಿಸಿದೆವು ಚಾರ್ಲ್ಸ್ ಡಿಕೆನ್ಸ್‌ನ ಎರಡು ಸುಪ್ರಸಿದ್ಧ ಪಾತ್ರಗಳಲ್ಲಿ ಒಂದಾದ ಪಿಕ್‌ವಿಕ್‌ನ ವೇಷವನ್ನು ನಾನು ಧರಿಸಿದ್ದೆ. ಆಲಿವರ್‌ಟ್ವಿಸ್ಟ್‌ನ ನಿರ್ವಾಹಕ ಸೋವರ್ ಬೆರಿಯ ವೇಷವನ್ನು ನನ್ನ ಮಿತ್ರ ಮಾರಿ ಬ್ರಿಸ್ಲೊ ಧರಿಸಿದ್ದ. ಅಂದು ಬಹಳ ಸೊಗಸಾದ ಸಂಜೆಯಾಗಿತ್ತು. ಒಳ್ಳೆಯ ಮಿತ್ರರಿದ್ದ ಕಡೆ, ಆನಂದ ಮತ್ತು ಉಲ್ಲಾಸ ವಿರುತ್ತದೆ ಎಂಬ ನಂಬಿಕೆಗೆ ಪುಷ್ಟೀಕರಣ ದೊರೆತಿತ್ತು.

**ಮಾರ್ಚಿ:** ೧೯೮೫ರ ಮಾರ್ಚಿ ೨೭ ರಂದು ನಾನು ಕ್ಯಾಲಿಫೋರ್ನಿಯದ ತೀರಕ್ಕೆ ಬರುತ್ತಿದ್ದ ಬೂದು ಬಣ್ಣದ, ತಿಮಿಂಗಲಗಳ ಜಾತಿಗೆ ಸೇರಿದ್ದ ಮೀನುಗಳನ್ನು ನೋಡಿದ್ದೆ. ಅವುಗಳನ್ನು ನೋಡಿ ನನ್ನ ಮನಸ್ಸು ಆನಂದದಿಂದ ಕುಣಿದಾಡಿತು. ಆ ತಿಮಿಂಗಿಲಗಳನ್ನು ನೋಡಿ ಅಷ್ಟೊಂದು ಸಂತೋಷ ನನಗೇ ಕಾಯಿತೆಂದು ನಾನು ಹೇಳಲಾರೆ. ಆದರೆ ವಾಸ್ತವವಾಗಿಯೂ ಆ ದಿನ ನನ್ನ ಜೀವನದ ಅತ್ಯಂತ ಆನಂದದ ದಿನಗಳಲ್ಲೊಂದಾಗಿತ್ತು, ನಿಜವಾಗಿಯೂ ಆನಂದಕ್ಕೆ ಪ್ರತಿಯೊಬ್ಬರಿಗೂ ಅವರದೇ ಆದ ಭಿನ್ನ ಭಿನ್ನ ಪರಿಭಾಷೆ ಇರುತ್ತದೆ.

**ಏಪ್ರಿಲ್:** ನನ್ನ ಜೀವನದಲ್ಲಿ ಅತ್ಯಂತ ಸಂತೋಷಕರ ಕೆಲಸ ಮಾಡಿದ ದಿನ ೧೯೫೯ರ ಏಪ್ರಿಲ್. ೮ರಂದಾಗಿತ್ತು. ನಾನು ರಾಕ್ ಫೋರ್ಡ್‌ನ ಇಲ್ಲಿನಾಯ್‌ನಲ್ಲಿ" 'ರಿಜಿಸ್ಟರ್ ರಿಪಬ್ಲಿಕ್' ಪತ್ರಿಕೆಯ ವರದಿಗಾರನಾಗಿದ್ದೆ. ಕವಿ ಕಾರ್ಲ್‌ಸ್ಯಾಂಡ್‌ಬರ್ಗ್‌ರವರ ಗೌರವಾರ್ಥ ಪದವೀದಾನ ಸಮಾರಂಭದ ವರದಿ ಬರೆಯುವ ಕೆಲಸವನ್ನು ರಾಕ್‌ಫೋರ್ಡ್ ಕಾಲೇಜಿನವರು ನನಗೆ ಒಪ್ಪಿಸಿದ್ದರು. ಸ್ಥಳೀಯ ವಸ್ತುಸಂಗ್ರಹಾಲಯವನ್ನು ನೋಡುವಾಗ ರಾಕ್‌ಫೋರ್ಡ್‌ನ ನಿವೃತ್ತ ಕೃಷಿಕ ಎಕ್ಸೆಲ್ ಪಾರ್ಚೆ ರವರಿಂದ ಮಾಡಲ್ಪಟ ಮರದ

ಕಲಾಕೃತಿ ಸ್ಪೈಂಡ್‌ಬರ್ಗ್‌ರವರಿಗೆ ಬಹಳ ಇಷ್ಟವಾಗಿತ್ತು ಎಂಬ ಸಂಗತಿ ತಿಳಿದು ಆನಂದವಾಯಿತು.

ಸಮಾರಂಭಕ್ಕೆ ಬರುವ ಮೊದಲು, ವಯೋವೃದ್ಧ ಸ್ಪೈಂಡ್‌ಬರ್ಗ್‌ರವರಿಗೆ ಸ್ವಲ್ಪ ಸಮಯ ನಿದ್ರಿಸಿ ವಿಶ್ರಾಂತಿ ತೆಗೆದು ಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಆದರೆ ಅವರು ನಿದ್ರಿಸುವ ಬದಲು ಆ ಕೃಷಿಕ ನಲ್ಲಿಗೆ ಹೋಗಿ, ಆತನು ಮಾಡಿದ ಕೆಲಸದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಬೇಕೆಂದು ಆಗ್ರಹಪಡಿಸಿದ್ದ ಒಬ್ಬ ವ್ಯಕ್ತಿಯನ್ನು ಪ್ರಶಂಸಿಸುವ ಅವಕಾಶ ಪಡೆಯುವುದು ಎಷ್ಟು ಮಹತ್ವಪೂರ್ಣವಾದ ವಿಷಯ ಎಂಬುದಕ್ಕೆ ಆ ದಿನ ನಾನು ಕಲಿತೆ. ನನ್ನ ವರದಿ ಪತ್ರಿಕೆಯ ಪ್ರಥಮ ಪುಟದಲ್ಲಿ ಮುದ್ರಿತವಾಗಿತ್ತು. ಇದಕ್ಕಾಗಿ ನನಗೆ 'ಅಸೋಸಿಯೇಟೆಡ್ ಪ್ರೆಸ್ ಫೀಚರ್ ರೈಟಿಂಗ್' ಸ್ಪರ್ಧೆಯ ಪುರಸ್ಕಾರ ದೊರಕಿತು.

**ಮೇ:** ೧೯೫೫ರ ಮೇ ೭ರಂದು ಕಾಲೇಜಿ ನಲ್ಲಿ ಪ್ರಸ್ತುತ ಪಡಿಸಿದ 'ಅಂತಿಗೊನೆ' ನಾಟಕದ ವಿಮರ್ಶೆ ಬರೆಯಲು 'ರಿಜಿಸ್ಟರ್, ರಿಪಬ್ಲಿಕ್'ನವರು ನನ್ನನ್ನು ಕೇಳಿದ್ದರು. ಬಾಗದಾದಿನ ವಿದ್ಯಾರ್ಥಿನಿ ಹಿಂಡ್ ರಜ್ಜಾಬ್ ಎಂಬಾಕೆ ಈ ನಾಟಕದ ನಾಯಕಿಯ ಪಾತ್ರ ವಹಿಸಿದ್ದಳು. ವಿಮರ್ಶೆ ಯಲ್ಲಿ, ನಾನು ಆಕೆಯ ಪಾತ್ರವನ್ನು ಪ್ರಶಂಸಿಸಿದ್ದೆ. ಈ ಪ್ರಶಂಸೆಯ ಪುಷ್ಟೀಕರಣ ವೆಂಬಂತೆ ಆಕೆಯನ್ನೇ ವಿವಾಹವಾದೆ. ಇಂತಹ ಆನಂದದಾಯಕ ಕ್ಷಣಗಳ ಸ್ವಾಗತಕ್ಕೆ ಸಿದ್ಧರಾಗಿ.

**ಜೂನ್:** ೧೯೫೬ರ ಜೂನ್ ಎರಡು ನನಗೆ ಇನ್ನೊಂದು ಅತ್ಯಂತ ಸಂತೋಷದ ದಿನವಾಗಿತ್ತು. ಅಂದೇ ನಾನು ಕಾಲೇಜಿನ ಪದವೀಧರನಾದೆ. ಅದೇ ದಿನ ನನ್ನ ತಾಯಿಯ ಜನ್ಮದಿನವೂ ಆಗಿತ್ತು. ಅದಾದ ನಂತರ ಜೂನ್ ತಿಂಗಳುಗಳು ೨೯ ಕಳೆದಿವೆ. ಇತರ ತಿಂಗಳುಗಳಂತೆಯೇ ಜೂನ್ ತಿಂಗಳಿ ನಲ್ಲೂ ಒಳ್ಳೆಯ, ಒಳ್ಳೆಯದಲ್ಲದ ದಿನಗಳು ಬಂದುವು. ಅನಂತರ ಇದ್ದಕ್ಕಿದ್ದಂತೆಯೇ ಬಂದಿತು ೧೯೮೫ರ ಜೂನ್. ಹಿಂಡ್ ಮತ್ತು ನಾನು, ನನ್ನ ತಾಯಿಯನ್ನು ಕರೆದುಕೊಂಡು ಹಾರ್ವರ್ಡ್‌ಗೆ ಹೋದೆವು. ಅಲ್ಲಿ ಪದವೀದಾನ ಸಮಾರಂಭದಲ್ಲಿ ಟಿ. ಹೆಚ್ (ಥಾಮಸ್ ಹೆನ್ರಿ)ಗೆ ಆ ದಿನ ಡಿಗ್ರಿ ದೊರೆಯಲ್ಲಿತ್ತು. ಹೀಗಾಗಿ ಜೂನ್ ತಿಂಗಳ ೬ನೇ ತಾರೀಖು ನನ್ನ ಜೀವನದ ಅತ್ಯಂತ ಆನಂದದಾಯಕ ದಿನಗಳಲ್ಲಿ ಒಂದಾಗಿತ್ತು.

**ಜುಲೈ:** ೧೯೮೦ರ ಜುಲೈ ೪ರಂದು ಅಮೆರಿಕಾದ ಸ್ವಾತಂತ್ರ್ಯ ದಿನ. ಅಂದು ನಾನು ವಿಮಾನದಲ್ಲಿ ಕ್ಯಾಲಿಫೋರ್ನಿಯಾ ದಿಂದ ನ್ಯೂಯಾರ್ಕಿಗೆ ಹೋಗುತ್ತಿದ್ದೆ. ಹವಾಮಾನ ಬಹಳ ಚೆನ್ನಾಗಿತ್ತು. ಸ್ವಚ್ಛ ವಾದ ನೀಲಾಕಾಶದಲ್ಲಿ ನಮ್ಮ ಪ್ರಯಾಣ ಸಾಗಿತ್ತು. ಆ ಐದು ಘಂಟೆಗಳ ಪ್ರಯಾಣ ದಲ್ಲಿ ಮದ್ಯ ಸೇವಿಸುತ್ತಾ, ವಿಮಾನದ ಕಿಟಕಿಯ ಗಾಜಿಗೆ ಮುಖವನ್ನಿಟ್ಟು, ನೀಲ ಸಮುದ್ರವನ್ನು ನೋಡುತ್ತಾ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದೆ.

**ಆಗಸ್ಟ್:** ಹಿಂಡ್ ಮತ್ತು ನಾನು ೧೯೮೮ರ ಆಗಸ್ಟ್ ೧೫ರಂದು ಲಂಡನ್

ತಲುಪಿದ್ದೆವು. ಲಂಡನ್ನಿನಲ್ಲಿ ಪ್ರಸರಿಸುತ್ತಿದ್ದ ಸೂರ್ಯೋದಯದ ಕಾಂತಿ ಮತ್ತು ಮನೋಹರ ದೃಶ್ಯವನ್ನು ನೋಡಲು ಆಗಸ್ಟ್ ೧೬ ರಂದು ಉಷಃಕಾಲಕ್ಕೆ ಮೊದಲೇ ನಾವು ಟ್ಯಾಕ್ಸಿಯನ್ನು ಹಿಡಿದು ವಾಟರ್‌ಲೂ ಸೇತುವೆ ತಲುಪಿದೆವು. ಅನಂತರ ಲಂಡನ್ನಿನ ಕೇಂದ್ರ ಮಾಂಸ ಮಾರ್ಕೆಟ್ ನಲ್ಲಿ ಕಸಾಯಿಗಳೊಡನೆ ಕುಳಿತು ಮುಂಜಾನೆಯೇ ಉಪಹಾರ ತೆಗೆದುಕೊಂಡಿದ್ದೆವು. ಹೋಟಲಿಗೆ ಹಿಂತಿರುಗಿ ಮಕ್ಕಳಂತೆ ಗಾಢ ನಿದ್ರೆ ಮಾಡಿದ್ದೆವು.

ಸೆಪ್ಟೆಂಬರ್ : ೧೯೮೫ರ ಸೆಪ್ಟೆಂಬರ್ ೨೭ರಂದು ನಾನು ಸಪತ್ನೀಕನಾಗಿ ಹಡಸನ್ ನದಿಯವರೆಗೆ ಕಾಲ್ನಡಿಗೆಯಲ್ಲಿ ಹೋಗಿದ್ದೆ. ಆ ಸಮಯದಲ್ಲಿ ಸುಂಟರಗಾಳಿ ಶಾಂತವಾಗುತ್ತಾ ಬಂದಿತ್ತು. ಪ್ರತಿ ವಸ್ತುವೂ ಮಸುಕುಮಸುಕಾಗಿ ಬೆಳ್ಳಗೆ ಕಾಣುತ್ತಿತ್ತು. ಆಕಾಶದಲ್ಲಿ ಮೋಡಗಳ ಓಟ, ಕ್ರಮವಾಗಿ ಮೇಲೇರಿಬರುತ್ತಿದ್ದ ನೀಲಿಬಣ್ಣ ಮೋಡವಾಗಿತ್ತು ನಮ್ಮ ಪಕ್ಕದಲ್ಲಿ ಇದ್ದ ವ್ಯಕ್ತಿ ಕೂಗಿ ನಮಗೆ ಹೇಳಿದ. "ಇದು ನನಗೆ ಬಹಳ ಇಷ್ಟವಾದ ವಾತಾವರಣ ಈ ಬಿರುಗಾಳಿ, ಸುಂಟರಗಾಳಿಗಳಿಂದ ಕೂಡಿದ ದಿನಗಳು ನನಗೆ ಬಹಳ ಇಷ್ಟ."

ಇದನ್ನು ಕೇಳಿ ನನಗೆ ನಡುಕ ಪ್ರಾರಂಭವಾಯಿತು. ಒಮ್ಮೆ ನಾನು ಕ್ಷೌರ ಮಾಡಿಸಿಕೊಳ್ಳುತ್ತಿರುವಾಗ ನನ್ನ ನಾಯಿಂದ ಜಿಮ್ಮಿ ನನಗೆ ಹೇಳಿದ್ದ. ಯಾವುದೋ ಹೆರಿಗೆ ಮಾಡಿಸಿ ಮನೆಗೆ ಬರುತ್ತಿವಾಗ, ನನ್ನ ತಾತನನ್ನು ನೋಡಿದ್ದನಂತೆ, ನನ್ನ ತಾತ ಕಲಹನ್ ಕೂಗಿ ಅವನಿಗೆ ಹೇಳಿದ್ದರಂತೆ "ಇದು ನನಗೆ ಬಹಳ ಇಷ್ಟವಾದ ಹವಾಮಾನ. ಈ ಬಿರುಗಾಳಿ, ಸುಂಟರಗಾಳಿಗಳಿಂದ ಕೂಡಿದ ದಿನಗಳು ನನಗೆ ಬಹಳ ಇಷ್ಟ.

ಹಾಯ್ ! ನನ್ನ ತಾತ ಈ ರೀತಿ ಹೇಳಿದ. ದಿನ, ಆ ತಾರೀಖು ನನಗೆ ತಿಳಿದಿದ್ದರೆ, ಅವರ ಪರವಾಗಿ ನಾನು ಈ ವಾಕ್ಯವನ್ನು ನನ್ನ ಸಂತಸದ ಕ್ಯಾಲೆಂಡರಿನಲ್ಲಿ ಬರೆದು ಬಿಡುತ್ತಿದೆ.

ಅಕ್ಟೋಬರ್ : ೧೯೬೫ ರ ಅಕ್ಟೋಬರ್ ೧೬ ರಂದು ಹಿಂಡ್ ಮತ್ತು ನಾನು ನಮ್ಮ ಮಕ್ಕಳನ್ನು ಸುತ್ತಾಡಿಸಲು ಕರೆದುಕೊಂಡು ಹೋದೆವು. ಆಗ ಆಕೆ ಹೇಳಿದ್ದಳು "ಇಲ್ಲಿ ನೋಡಿ, ನಿಮಗೆ ಎಲೆಗಳ ಮರ್ಮರ ಶಬ್ದ ಕೇಳಿಸುತ್ತಿದೆಯೇ?" ನಾನು ಹಿಂಡ್‌ನ ಈ ಶಬ್ದಗಳನ್ನು ಒಂದು ಲಕೋಟೆಯ ಮೇಲೆ ಬರೆದುಕೊಂಡಿದ್ದೆ. ಆ ಲಕೋಟೆ ೧೬ ವರ್ಷಗಳ ಅನಂತರ ನನ್ನ ಕಾಗದಗಳ ಮಧ್ಯೆ ಸಿಕ್ಕಿತ್ತು. ನಾನು ಅಕ್ಟೋಬರ್ ೧೬ ರಂದು ಸಾರಾಂಶ ರೂಪವಾಗಿ "ಎಲ್ಲ ಎಲೆಗಳು ಉದುರಿದ ದಿವಸ" ಎಂದು ಅಂಕಿತ ಮಾಡಿದ್ದೆ.

ನವಂಬರ್ : ೧೯೮೪ ರ ನವಂಬರ್ ೪ ರಂದು ತಮ್ಮ ಮನೆಯ ಪಕ್ಕದ ಮರದ ಮೇಲೆ ಒಂದು ಹಾಡುವ ಪಕ್ಷಿ 'ಮೋಕಿಂಗ್ ಬರ್ಡ್ಸ್" ಹಾಡುತ್ತಿದ್ದುದನ್ನು ಕೇಳಿದೆ. ನಾನು ಭಿನ್ನ ಭಿನ್ನ ಪ್ರಕಾರದ ಏಳು ಹಾಡುಗಳನ್ನು ಕೇಳಿದೆ. ಅದು ಪುನಃ ಪ್ರಾರಂಭದಿಂದ ಹಾಡು ಹಾಡಲಾರಂಭಿಸಿತು. ನಾನು ನನ್ನ ಟೇಪ್‌ರೆಕಾರ್ಡರ್ ತರಲು ಓಡಿದೆ. ಆದರೆ ಹಿಂತಿರುಗುವಾಗ ಪಕ್ಷಿ ಹಾರಿ ಹೋಗಿತ್ತು. ಇದರಿಂದ ನಾನು ಒಂದು ಪಾಠ ಕಲಿತೆ "ಒಂದು ಕ್ಷಣವೂ ನಿಧಾನಿಸ ಕೂಡದು" ಎಂಬುದೇ ಆ ಪಾಠವಾಗಿತ್ತು.

ಡಿಸೆಂಬರ್ : ಎಲ್ಲರಂತೆಯೇ, ಅನೇಕ ಡಜನ್ ಕ್ಯಾಲೆಂಡರುಗಳು ತುಂಬಿ ಹೋಗುವಷ್ಟು ನನ್ನ ರಜಾದ ದಿನಗಳು ಸಂತೋಷದಿಂದ ಕಳೆದಿವೆ. ಆದರೆ ರಜಾದ ಈ ಒಂದು ದಿನ ಅವಿಸ್ಮರಣೀಯವಾಗಿದೆ. ೧೯೮೫ರ ಕ್ರಿಸ್‌ಮಸ್‌ನ ಎರಡನೇ ದಿನ ಕುಟುಂಬದ ಸದಸ್ಯರು ಒಗಟುಗಳನ್ನು ಬಿಡಿಸುವ ಆಟ ಆಡುತ್ತಿದ್ದೆವು. ನನ್ನ ಸಹೋದರನ ಮಗಳು ಯಾಸ್ಮೀನ್ ರಿಜ್ವಾನ್ ಹತ್ತು ವರ್ಷಗಳಲ್ಲಿ ಮೊದಲಬಾರಿ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದಳು. ನಾವು ಚಲನಚಿತ್ರಗಳ ಒಗಟುಗಳನ್ನು ಬಿಡಿಸುತ್ತಿದ್ದೆವು.

ನನ್ನ ಭಾವಮೈದುನ ಜೋ ಕೀಟಿಂಗ್ ತನ್ನ ರಾಮಬಾಣವನ್ನು ಬಿಟ್ಟ. ೧೯೪೬ರ ಒಂದು ಚಲನಚಿತ್ರವನ್ನು ಉಲ್ಲೇಖಿಸಿದ. ಅದನ್ನು ಜನ ಮರತೇ ಹೋಗಿದ್ದರು. ದೂರದರ್ಶನ ಸಹ ಅದನ್ನು ಪ್ರದರ್ಶಿಸುತ್ತಿರಲಿಲ್ಲ. ನಾನು ಇಬ್ಬರ ಕೈಗಳನ್ನು ಜೋಡಿಸುವ ಮೂಕ ಅಭಿನಯ ಮಾಡಿ, 'ಮೀಟ್ಸ್' (ಸೇರುವುದು) ಎಂಬ ಮೂರನೆಯ ಶಬ್ದದೆಡೆಗೆ ಸಂಕೇತ ಮಾಡಿದೆ. ಯಾಸ್ಮಿನ್ ಕೂಗಿದಳು. "ಡಿಕ್ ಟ್ರೇಸಿ ಮೀಟ್ಸ್ ಕ್ಯೂಬಾಲ್."

ಇವಳಿಗೆ ಹೇಗೆ ಗೊತ್ತಾಯಿತೆಂದು ನಮಗೆಲ್ಲಾ ಆಶ್ಚರ್ಯ. ೧೯೭೫ರಲ್ಲಿ ಜೋ ಇದನ್ನು ತನ್ನ ಅಂತಿಮ ಅಸ್ತ್ರವಾಗಿ ಉಪಯೋಗಿಸಿ ಗೆದ್ದಿದ್ದ. ಆಗ ಎದುರು ಪಕ್ಷದ ತಂಡದವರು ಚಕಿತಗೊಂಡಿದ್ದರು.

ಉತ್ತರವೂ ಸಿಕ್ಕಿಹೋಯಿತು. ೧೯೭೫ರ ಒಗಟಿನ ಸ್ಪರ್ಧೆ ಒಂಬತ್ತು ವರ್ಷದ ಯಾಸ್ಮೀನ್‌ಳ ಜೀವನದಲ್ಲಿ ಮೊದಲ ಸ್ಪರ್ಧೆಯಾಗಿತ್ತು. ಗೆಲವು ಕೊಡಿಸಿದ ಆ ಚಲನಚಿತ್ರದ ಹೆಸರನ್ನು ಅವಳು ಮರೆತಿರಲಿಲ್ಲ. ಇದೇ ಕಾರಣದಿಂದ ಈ ರೀತಿ ನಮ್ಮ ತಂಡ ಭಾರಿ ಜಯ ಗಳಿಸಿತು.

ಇದರೊಂದಿಗೆ ನಾನು ನನ್ನ ೧೩ನೆಯ ಉದಾಹರಣೆಯನ್ನು ಪ್ರಸ್ತುತ ಪಡಿಸುತ್ತೇನೆ. ೧೯೮೬ರ ಮಾರ್ಚ್ ೧೨ನೇ ತಾರೀಖಿನ ಮೊದಲನೆಯ ದಿನ. ಆ ದಿನ ನಾನು ನನ್ನ ಸಂತಸದ ಕ್ಯಾಲೆಂಡರನ್ನು ನೋಡಿದೆ. ಆರು ವರ್ಷ ಮುಂಚೆ ಬರೆದ ಒಂದು ಅಂಕಿತವನ್ನು ಅನೇಕ ಬಾರಿ ಓದಿದೆ. ೧೯೮೦ನೆ ಮಾರ್ಚ್ ೧೨ರಂದು, ನಾನು ನನ್ನ ಚಿಕ್ಕ ಮಗ ಮತ್ತು ಅವನ ಪ್ರೇಯಸಿಯನ್ನು ನ್ಯೂಯಾರ್ಕ್‌ನಲ್ಲಿ ಚಾರ್ಲಿಚಾಪ್ಲಿನ್‌ನ ಒಂದು ಹಳೆಯ ಚಲನಚಿತ್ರ ತೋರಿಸಲು ನನ್ನ ಕಾರಿನಲ್ಲಿ ಕರೆದುಕೊಂಡು ಹೋಗಿದ್ದೆ. ಅಲ್ಲಿ ಬ್ರೌಂಕ್ಸ್ ಮೃಗಾಲಯದಲ್ಲಿನ ಕಾಡು ಮನುಷ್ಯರನ್ನು ನೋಡಿ ರಾತ್ರಿ ಹಡಸನ್ ನದಿಯ ದಡದಲ್ಲಿದ್ದ ಒಂದು ಹೋಟೆಲಿನಲ್ಲಿ ಊಟಮಾಡಲು ಹೋಗಿದ್ದೆವು. ಈಗ ನಮ್ಮ ಮಗ ನಮ್ಮಿಂದ ಬಹಳ ದೂರವಿದ್ದಾನೆ. ಬೋರ್ನಿಯೋದಲ್ಲಿ ಕಾಡುಮನುಷ್ಯರ ಬುಡಕಟ್ಟು ಜನಾಂಗದ ಬಗ್ಗೆ ಸಂಶೋಧನಾ ಕಾರ್ಯ ಮಾಡುತ್ತಿದ್ದಾನೆ. ಆದರೂ ಸಹ ಅಗಲಿಕೆಯ ಈ ದಿನಗಳು ಒಮ್ಮೆ ಆನಂದದಾಯಕವಾಗಿತ್ತೆಂಬುದನ್ನು ನನ್ನ ಕ್ಯಾಲೆಂಡರ್ ನೆನಪಿಸುತ್ತದೆ.

ಈ ವರ್ಷದ ಈ ತಿಂಗಳ ಈ ದಿನ ಎಷ್ಟೇ ಕಷ್ಟವಿರಲಿ, ಒಮ್ಮೆ ಇದೇ ದಿನ ಅತ್ಯಂತ ಸಂತೋಷಕರವಾದ ದಿನವಾಗಿತ್ತೆಂಬುದು ಈ ಉದಾಹರಣೆಯಿಂದ ಪುಷ್ಟೀಕರಿಸಲ್ಪಡುತ್ತದೆ.

ಮುಂಬರುವ ಯಾವುದಾದರೂ ವರ್ಷದಲ್ಲಿ ಇದೇ ದಿನ ಇನ್ನೂ ಆನಂದಮಯವಾಗಿ ಇರುವ ಸಾಧ್ಯತೆಯೂ ಇರಬಹುದು.

# ಅಂತರ

'ಗಂಗಾ' ಪಾದೇಕಲ್

*ಬಯಕೆಗಳು ಕುದುರೆಗಳಾದರೆ ತಿರುಕರು ಸವಾರರಾದಾರು! ಶ್ರೀಮಂತರು ಗುಣವಂತರೂ ಆದರೆ ಹೊನ್ನ ಹೂವಿಗೆ ಮಲ್ಲಿಗೆ ತಂಪು ಪೂಸಿದಂತಾದೀತು, ಇಲ್ಲ-ಪೂರ್ವ ಪೂರ್ವವೇ, ಪಶ್ಚಿಮ ಪಶ್ಚಿಮವೇ ಈ ವೈರುಧ್ಯಗಳ ನಡುವೆ ಎಂದೂ ಸಾಮರಸ್ಯ ಏರ್ಪಡದು. ನಿಜವೇ? ಈ ಕತೆ ಓದಿ.*

ಜಯಣ್ಣ ಶ್ರೀ ಗಿರಿಜಾಂಬ ಕಲ್ಯಾಣ ಮಂಟಪದ ಎದುರಿಗೆ ಬಂದು ನಿಂತಾಗ, ಆಗಲೇ ಹನ್ನೊಂದೂವರೆ ದಾಟಿತ್ತು. ತಡವಾಗಿ ಬಿಟ್ಟಿತೆ? ಎಂಬ ಕಳವಳದ ಜತೆಗೆ ತಾನು ಬಸ್ಸಿನಲ್ಲಿ ಬಂದವನೆಂದೂ ಯಾರಾದರೂ ಗುರುತಿಸಿದರೋ ಎಂಬ ಸಂಕೋಚವನ್ನೂ ಅನುಭವಿಸುತ್ತ ಆತನೊಮ್ಮೆ ಸುತ್ತಲೂ ವೀಕ್ಷಿಸಿದ. ಆದರೆ ಆ ಕಾರು, ಜೀಪು, ಜಿಪ್ಸಿ, ಮಾರುತಿ ವ್ಯಾನ್‌ಗಳ ಸಂತೆಯಲ್ಲಿ, ಒಳಗೆ ಪ್ರವೇಶಿಸಲು ಬಾಗಿಲ ಬಳಿ ಮುಕುರುತ್ತಿದ್ದ ಜನ ಜಂಗುಳಿಯಲ್ಲಿ ಇವನನ್ನು ಯಾರೂ ಗಮನಿಸಿದಂತೆ ಕಾಣಲಿಲ್ಲ. ಹೀಗಾಗಿ ತುಸು ನಿರಾಳವಾದರೂ ತನ್ನ ಉಡುಪು ಹೇಗಿದೆಯೋ ಎಂಬ ಶಂಕೆ ಕಾಡಿತು. ಮಡದಿಯೇನೋ ರಾಗ ಎಳೆದಿದ್ದಳು: "ನೀವು ರಿಕ್ಷಾದಲ್ಲಿಯೇ ಹೋಗಬಹುದಿತ್ತೇನೋ? ಬಸ್ಸಿನಲ್ಲಾದರೆ ಸಮಯವೂ ಹಾಳು, ಮತ್ತೆ ರಷ್ ಇದ್ದರೆ ಬಟ್ಟೆ ಸ್ಥಿತಿ ಗೋವಿಂದಾ!" ಅವಳು ಹಾಗೆಂದಳೆಂದು ತಾನು ರಿಕ್ಷಾ ಏರಿದರೆ ತನ್ನ ಒಂದು ತಿಂಗಳ ಬಸ್ಸಿನ ಓಡಾಟದ ದುಡ್ಡನ್ನೂ ಅದಕ್ಕೇ ಸುರಿಯಬೇಕಾದೀತೆಂಬ ಅರಿವು ತನಗಿತ್ತು. ಎಂದೇ ನೇರ ಬಸ್ ಹಿಡಿದುಬಿಟ್ಟಿದ್ದ ಮತ್ತು ಅವಳೆಂದ ಹಾಗೇ ರಷ್ಷೂ ಇತ್ತು, ತಡವೂ ಆಯಿತು. ತನ್ನಲ್ಲಿಯೇ ಚಿಂತಿಸಿದ ಜಯಣ್ಣ ಮತ್ತೆ ತನಗೆ ತಾನೇ ಸಮಾಧಾನ ಹೇಳಿಕೊಂಡ, "ಇರಲಿ, ಬಟ್ಟೆ ಹಾಗೇನೂ ಸುಕ್ಕು ಸುಕ್ಕಾಗಿಲ್ಲ." ಹಾಗೆಂದುಕೊಳ್ಳುತ್ತಲೇ ಬಾಗಿಲ ಬಳಿಗೆ ಬಂದು ಹೇಗೋ ತೂರಿಕೊಳ್ಳುತ್ತ ಒಳಬದಿಗಾದವನಿಗೆ ಕಂಡದ್ದು ಸ್ವಾಗತಕಾರರ ಮುಗುಳ್ನಗು.

ಸಿದ್ಧ ನಗುವನ್ನು ಮೋರೆಗೆ ಲೇಪಿಸಿಕೊಂಡು 'ಬನ್ನಿ, ಬನ್ನಿ' ಎನ್ನುತ್ತಿದ್ದ ಅವರುಗಳು ಎರಚಿದ ಪನ್ನೀರೂ, ಗುಂಪಿನಲ್ಲಿದ್ದ ತನ್ನನ್ನೇ ಕುರಿತೇನೋ ಎಂಬಷ್ಟು ಸಂಭ್ರಮಿತನಾದ ಅವನು, ಅವರುಗಳ ಮುಂದಿರಿಸಿದ್ದ ತಂಪು ಪಾನೀಯಗಳನ್ನು ಗಮನಿಸಿ ಮತ್ತೂ ಖುಷಿಯಾದ, ಆದರೆ ಹಿಂದಿನಿಂದ ಪ್ರವಾಹದಂತೆ ನುಗ್ಗಿ ಬರು

ತ್ತಿದ್ದ ಜನರ ತಳ್ಳಾಟಕ್ಕೆ ಗುರಿಯಾಗಿ ಬೇಗನೇ ಒಳಗೆ ದಬ್ಬಲ್ಪಟ್ಟ. ಹೀಗಿದ್ದರೂ ಒಳಗೆ ಹಾಸಿದ್ದ ಜಮಖಾನೆಯಲ್ಲಿ ಕುಳಿತಾಗ ತುಸುವೆ ದೂರದಲ್ಲಿ ಇಬ್ಬರು ಆಸರು ವಿತರಿಸುವುದು ಕಂಡಿತಾಗಿ ಮತ್ತೆ ಸಮಾಧಾನ ಮಾಡಿಕೊಂಡ. ಪರವಾಗಿಲ್ಲ, ಬಾಯಾರಿಕೆ ನೀಗಿಸಲು ಇಲ್ಲಿಯೂ ವ್ಯವಸ್ಥೆ ಉಂಟಲ್ಲ? ಹಾಗೆ, ಒಣಗಿದ್ದ ತುಟಿಗಳನ್ನು ನಾಲಿಗೆಯಿಂದ ಒದ್ದೆ ಮಾಡಿಕೊಳ್ಳುತ್ತ, ಆಸರಿನ ನಿರೀಕ್ಷೆಯಲ್ಲಿರುವಾಗಲೇ ಅವನ ನೋಟ ಇಡೀ ಪರಿಸರವನ್ನೂ ವೀಕ್ಷಿಸಿತು. ಸುಮಾರು ಸಾವಿರದೈನೂರು ಜನರು ಆರಾಮವಾಗಿ ಕೂರಬಹುದಾದಷ್ಟು ದೊಡ್ಡದಾಗಿದ್ದ ಆ ಜಾಗದಲ್ಲಿ ಜನ ಕಿಕ್ಕಿರಿದಿದ್ದರು. ಕೆಳಗೆ, ಅಂಗಣದಲ್ಲಿ ಹೀಗಾದರೆ, ಸಭಾಂಗಣದ ತುದಿಯ ವೇದಿಕೆಯಲ್ಲಿದ್ದ ವಧೂ-ವರರೇ ಯಾರಿಗೂ ಕಾಣಿಸದಂತೆ, ಅಲ್ಲಿಯೂ ಜನ ಘೇರಾಯಿಸಿದ್ದರು. "ಬಹುಶಃ ಧಾರೆ ಆಗುತ್ತಿರಬೇಕು. ಅದಕ್ಕೇ ಕುಟುಂಬದವರೆಲ್ಲ ಅಲ್ಲಿ ನೆರೆದಿರುವುದು." ಒಳಗೇ ಊಹಿಸಿದ ಜಯಣ್ಣನಿಗೆ, ಆ ಊಹೆಗೆ ಸಮಾಧಾನ ನೀಡಿತು. ಆದರೆ ತಾನು ಇಲ್ಲಿಗೆ ಬಂದದ್ದು ಶೀರ ತಡವಾಗಿ ಏನಲ್ಲ ಎನ್ನುವ ಆ ತೃಪ್ತಿಯೊಂದಿಗೇ ತರ್ಕವೂ ಮೇಲೇಳದೇ ಇರಲಿಲ್ಲ.

ಹಾಗೆ ನೋಡಿದರೆ ಇವರೇನು ತನ್ನ ಸಂಬಂಧಿಗಳಲ್ಲ, ಬರೀ ಒಂದೇ ಬೀದಿಯವರೆಂಬ ಕಾರಣ ಅಷ್ಟೆ. ಆದರೂ ಮೊನ್ನೆ ಗಂಡ, ಹೆಂಡತಿ ಇಬ್ಬರೂ ಕಾರಿನಲ್ಲಿ ಬಂದು ಅಕ್ಷತೆ ಕೊಟ್ಟು ಕರೆದಿದ್ದರಂತೆ. ಈ ವಿವಾಹದ ಬಗ್ಗೆ ತನ್ನ ನಿರುತ್ಸಾಹ ಗಮನಿಸಿ ತನ್ನ ಪತ್ನಿ ರೇಗಿ ಕೇಳಿದ್ದಳು. ಅಲ್ಲರೀ, ನಾವೇನು? ಅವರೇನು? ಲಕ್ಷಾಧಿಪತಿಗಳು ಅವರೂ, ಅವರಿಗೆ ನಮ್ಮಂತಹ ಪಾಪದವರು ಹೋದರೂ, ಬಿಟ್ಟರೂ ಒಂದೇ, ಆದರೂ ಒಂದೇ ಬೀದಿಯ ಮನೆಗಳವರೆಂದು ಕರೆದಿದ್ದಾರೆ. ಅದೂ ಹೇಗೆ? ಸ್ವತಃ ಮನೆಗೇ ಬಂದು. ಹಾಗಿರುವಾಗ ಹೋಗದೇ ಇದ್ದರೆ ನಾವೇ ದೊಡ್ಡಸ್ತಿಕೆ ಮಾಡಿದೆವೆಂದೇ ಆದೀತಪ್ಪೇ." ಮೊದಲಿಗೆ ಅವಳ ಮಾತು ಆಸಕ್ತಿ ಹುಟ್ಟಿಸಿರದೇ ಇದ್ದರೂ ನಂತರ, ತನಗೂ ಹೌದೆನ್ನಿಸಿತ್ತು. ಪ್ರಸಿದ್ಧ ಉದ್ಯಮಿಗಳಾಗಿರುವ ರಾಯರೆಲ್ಲಿ? ಖಾಸಗೀ ಕಂಪೆನಿ ಒಂದರಲ್ಲಿ ಕಾರಕೂನನಾಗಿರುವ ತಾನೆಲ್ಲಿ? ಇವರಿಗೂ ತಮ್ಮ ನಡುವೆ ಏನೇನೂ ಪರಿಚಯ ಇರಲಿಲ್ಲ ನಿಜವೇ. ಆದರಿನ್ನು ಈ ನೆವದಲ್ಲಿ ಆದರೂ ಬೆಳೆಯಬಾರದೆಂದಿಲ್ಲವಲ್ಲ? ಇಷ್ಟಕ್ಕೂ ಇವಳು ವಾದಿಸಿದಂತೆ ಈ ಪರಿಚಯದಿಂದ ಅವರಿಗೇನೂ ಲಾಭವಿಲ್ಲ, ಅದು ಆಗುವುದಿದ್ದರೆ ತನಗೆ ಹಾಗೆ ಕಂಡಾಗ ಮತ್ತೂ ಅನಿಸಿತ್ತು.' ಅದೂ ಅಲ್ಲದೆ ವೃಥಾ ದೊಡ್ಡಸ್ತಿಕೆಯೆಂಬ ಅಪವಾದವನ್ನೇಕೆ ಹೊರಬೇಕು? ಇಷ್ಟು ಖರ್ಚುಗಳೆಡೆಯಲ್ಲಿ ಇದೂ ಒಂದು ಆಗಿಬಿಡಲಿ ಎಂದು. ಆ ವಿಚಾರ ನೆನಪಿಗೆ ಬಂದಾಗ ಅವನ ದೃಷ್ಟಿ ಕೈಲಿದ್ದ ಉಡುಗರೆ ಕಟ್ಟನ್ನು ಸವರಿತು ಹಾಗೂ ಮತ್ತೆ ಮನಸ್ಸಿನೊಳಗೇ ಬಂದು ಇಷ್ಟು ಹೊತ್ತಾದರೂ ಒಬ್ಬರೂ ಮಾತೇ ಆಡಿಸಲಿಲ್ಲವಲ್ಲ" ಎಂಬ ಕಸಿವಿಸಿಯೂ ಆಯಿತು. ಆದರೆ ಅದೇ ವೇಳೆಗೆ ಅವನ ಪಕ್ಕವೆ ಕೂತಿದ್ದ ವ್ಯಕ್ತಿ, ಇನ್ನೊಬ್ಬರಲ್ಲಿ ಜಯಣ್ಣನಿಗೆ ಉಂಟಾದ ಸಂದೇಹವನ್ನೇ ವ್ಯಕ್ತಪಡಿಸಿದ್ದೂ, ಅದಕ್ಕೆ ಆ ಇನ್ನೊಬ್ಬರು "ನೀನೂ ಸರಿಯೇ. ನಮಗೆ ಪರಿಚಯ ಇರುವುದು ರಾಯರದು ಮಾತ್ರವೇ. ಅವರೋ ಮಹಾ

ದಲ್ಲಿದ್ದಾರೆ. ಇನ್ನು ಮಕ್ಕಳಿಗೆ ಹೇಗೆ ತಾನೇ ಗೊತ್ತಿರಬೇಕು!" ಎಂಬುದೂ ಕೇಳಿಸಿತು. ಅವರು ಹೇಳಿದ ವಿಚಾರ ಸರಿಯೇ, ತನಗಾದರೂ ಆಗಿದ್ದು ಹಾಗೇ ಅಲ್ಲವೆ" ಎಂದು ಜಯಣ್ಣ ತನ್ನಲ್ಲಿಯೆ ತರ್ಕಿಸಿದನಾದರೂ ಪರಿಚಯ ಇರಲಿ, ಇಲ್ಲದಿರಲಿ ಮನೆಯ ಸಮಾರಂಭಕ್ಕೆ ಬಂದ ಅತಿಥಿಗಳಲ್ಲಿ ಒಂದು ಸೌಜನ್ಯದ ನಗುವನ್ನಾದರೂ ಬೀರಿ ಬಂದಿರಾ ಎನ್ನುವ ಶಿಷ್ಟಾಚಾರವನ್ನು ಆ ಮಕ್ಕಳು ಪಾಲಿಸಬೇಕಿತ್ತೆಂದೂ ಕಾಣದೇ ಇರಲಿಲ್ಲ.

ಆ ವೇಳೆಗೆ ಮಧ್ಯಾಹ್ನವಾಗಿತ್ತು. ಹಾಗೂ ಧಾರೆ ಮುಗಿದು, ಬಂದ ಆಹ್ವಾನಿತರೆಲ್ಲ ಉಡುಗೊರೆ ನೀಡಿ ಬರಲು ವಧೂ-ವರರತ್ತ ಧಾವಿಸತೊಡಗಿದ್ದರು. "ಸರಿ, ತನ್ನದೂ ಆಗಲಿ" ಎಂದುಕೊಳ್ಳುತ್ತ ಜಯಣ್ಣನೂ ಎದ್ದನಾದರೂ ಬಂದಾಗಿನ ಆ ಉತ್ಸಾಹ ಈಗ ಅವನಲ್ಲಿ ಇರಲಿಲ್ಲ. ಇಷ್ಟು ಹೊತ್ತೂ, ಆ ತುಂಬಿದ ಸಭೆಯಲ್ಲಿ ಅನಾಥನಂತೆ, ಬಾಯಿ ಒಣಗಿಸಿಕೊಂಡೇ ಕೂತಿದ್ದುದು ಅವನೊಳಗೇ ಕುಟುಕುತ್ತಿತ್ತು. ಹೀಗಿದ್ದರೂ ರಾಯರು ಮಂಟಪದ ಬಳಿ ನಿಂತಿರುವುದೂ, ತನ್ನ ಸುತ್ತಲ ಜನರೆಲ್ಲ ಬಹಳ ಉತ್ಸಾಹದಿಂದ ಓಡಾಡುತ್ತಿರುವುದೂ ಅವನ ಒಳಗುದಿಗೆ ಸ್ವಲ್ಪ ಮಟ್ಟದ ಸಾಂತ್ವನ ನೀಡಿದವು. "ಛೇ, ತನಗೆ ಏನಾಗಿದೆಯೆಂದು ಈ ರೀತಿ ಖಿನ್ನನಾಗಬೇಕು? ಈ ಕೀಳರಿಮೆ ನಿಜವಾಗಿ ಒಳ್ಳೆಯದಲ್ಲ. ಇಷ್ಟು ದೊಡ್ಡ ಕಾರ್ಯಕ್ರಮಕ್ಕೆ ಆಹ್ವಾನಿತನಾಗಿರುವುದೇ ತನ್ನ ಯೋಗ್ಯತೆಗೊಂದು ಒರೆಗಲ್ಲು, ಅದೂ ತಿಳಿಯದಿದ್ದರೆ ಹೇಗೆ? ತನ್ನೊಳಗಿಗೆ ತಾನೇ ಉಪದೇಶಿಸಿಕೊಂಡು ತುಸು ಗೆಲುವನ್ನೂ ಪಡೆದ ಜಯಣ್ಣ. ಜನಪ್ರವಾಹದಲ್ಲಿ ತಾನೂ ಸೇರಿಕೊಂಡ. ಹಾಗೂ ಮಂಟಪದ ಬಳಿ ನಿಂತಿದ್ದ ರಾಯರ ಮುಗುಳ್ನಗೆಯಿಂದ ಸುಪ್ರೀತನಾಗಿ ತನ್ನ ಕೈಲಿದ್ದ ಉಡುಗೊರೆಯನ್ನು ಮದುಮಕ್ಕಳಿಗೆ ನೀಡಿ ಈಚೆಗೆ ಬಂದ.

ಅಂದು ತಿಂಗಳಿನ ಎರಡನೆ ಶನಿವಾರವಾಗಿದ್ದುದರಿಂದ ಜಯಣ್ಣನಿಗೆ ರಜವಿತ್ತು. ಬೆಳಗಿನ ಕಾಫಿಯಾಗಿ ಹೊರಗೆ ಪೇಪರ್ ಓದುತ್ತಿದ್ದಾಗ ಎಂದಳು ಅವನ ಪತ್ನಿ ಜಾನಕಿ "ಸ್ವಲ್ಪ ಅಂಗಡಿಗೆ ಹೋಗಿ ಬರುತ್ತೀರ? ಸಾಮಾನು ಖಾಲಿಯಾಗುತ್ತ ಬಂತು" ಅವಳು ಹಾಗೆಂದ ತಕ್ಷಣ ಬೆಚ್ಚಿದ ಅವನು, ಕೂಡಲೆ ಕೇಳಿದ. "ಅದೇನು ಈ ಸಲ ಇಷ್ಟು ಬೇಗ?" "ಬೇಗ?" ಜಾನಕಿಯೂ ಅವನಿಗೆ ಹಿಂದೆ ಬೀಳದೆ ಆ ಕ್ಷಣವೆ ಹೇಳಿದಳು "ಬೇಗ ಏನಲ್ಲ. ಮಾಮೂಲಿನಂತೆಯೇ. ಇಂದು ಎರಡನೆ ಶನಿವಾರ ನೆನಪಿಲ್ಲವೆ?" ಈಗ ಅವನು ಸ್ವಲ್ಪ ಪೆಚ್ಚಾದ. ಅವಳಂದದ್ದು ನಿಜವೇ. ಯಾವತ್ತೂ ಮನೆಗೆ ದಿನಸಿ ತರುವುದು ತಿಂಗಳ ಎರಡನೆ ಶನಿವಾರವೆ. ಆ ಹೊತ್ತಿಗೆ ಇತರ ಖರ್ಚುಗಳಾದ ಕರೆಂಟು, ಹಾಲು, ನೀರು, ಮನೆ ಬಾಡಿಗೆಗಳ ತಾಪತ್ರಯವೆಲ್ಲ ಮುಗಿದಿರುತ್ತದೆ. ಆಮೇಲೆ ತನ್ನ ತಿಂಗಳ ಖರ್ಚಿಗೆ ಒಂದಿಷ್ಟು ಇಟ್ಟುಕೊಂಡು ತರಕಾರಿ ಇತ್ಯಾದಿಗಳಿಗೆ ಜಾನಕಿಗೂ ಅಷ್ಟು ಹಣ ಕೊಟ್ಟು, ಉಳಿದುದರಲ್ಲಿ ದಿನಸಿ ತಂದು ಬಿಡುವುದು. ಈ ಸಲ ಸಂಬಳ ಸಿಕ್ಕಿದ ಆ ವಾರದಲ್ಲಿಯೆ ಮದುವೆಗೂ ಹೋಗಿದ್ದು. ಆಗ ಬಸ್ ಚಾರ್ಜ್, ಉಡುಗೊರೆ ಎಂದು ನೂರಕ್ಕೆ ಹತ್ತಿರ ಕೈಬಿಟ್ಟಿತ್ತು. ಹಾಗೆ ಕೈ ತುಸು

ಹೆಚ್ಚಾಗಿ ಖಾಲಿ ಆಗಿದ್ದಕ್ಕೇ ತನಗೆ ಅಷ್ಟು ಬೇಗ ಸಿಟ್ಟು ಬಂದದ್ದೇನೋ? ತನ್ನಲ್ಲಿಯೆ ಚಿಂತಿಸುತ್ತ ಅವನು ಮೌನಿಯಾಗಿದ್ದಾಗ ಜಾನಕಿ ಸಾಮಾನಿನ ಚೀಟಿಯನ್ನು, ಚೀಲಗಳನ್ನೂ ಅವನ ಮುಂದಿಟ್ಟು, ತುಸು ವಿಷಾದದ ದನಿಯಲ್ಲಿ ನುಡಿದಳು. "ಬಹುಶಃ ನಿಮ್ಮ ಕಿಸೆ ಖಾಲಿಯಾಗುತ್ತ ಬಂತೇನೊ? ಮೊನ್ನೆ ಮದುವೆಗೆ ಹೋಗಿದ್ದಲ್ಲವೆ? ಅದು ಹಾಗೆಯೇ ನಮ್ಮಂತಹ ಮಧ್ಯಮ ವರ್ಗದವರಿಗೆ ಯಾವಾಗಲೂ ಈ ತ್ರಿಶಂಕು ಸ್ಥಿತಿ ತಪ್ಪಿದ್ದಲ್ಲ."

ಅವಳು ಹಾಗೆಂದು ಒಳಗೆ ಹೋದ ನಂತರ ಬಯಣ್ಣ ಮೆಲ್ಲಗೆ ತಾನೂ ಎದ್ದು ಸಿದ್ಧನಾಗಿ ಪೇಟೆಗೆ ಹೊರಟ. ಮಡದಿ ಆಡಿದ್ದ 'ತ್ರಿಶಂಕು ಸ್ಥಿತಿ' ಅವನ ಮನಸ್ಸನ್ನು ಕಲಕಿತ್ತು. 'ನಿಜವೆ', ತಲೆಗೆಳೆದರೆ ಕಾಲಿಗಿಲ್ಲ, ಕಾಲಿಗೆಳೆದರೆ ತಲೆಗಿಲ್ಲ' ಎಂಬ ಗಾದೆಯಂತೇ ತಮ್ಮ ಸಂಸಾರದ ಪರಿಸ್ಥಿತಿ ಹಾಗೆಂದು ಅಗತ್ಯದ ಬಾಬತುಗಳನ್ನು ಕಡೆಗಣಿಸಲಾದೀತೆ?' ಮನಸ್ಸಿನೊಳಗೆ ಆ ಪ್ರಶ್ನೆ ಜನಿಸಿದಾಗ ಅವನಿಗೆ ತಟ್ಟನೆ ಸಹೋದ್ಯೋಗಿ ರಘುವಿನ ನೆನಪಾಯಿತು. ಮದುವೆಗಾಗಿ ರಜ ಹಾಕಿದ್ದ ತಾನು, ಮರುದಿನ ಆಫೀಸಿನಲ್ಲಿ ಆ ಸಮಾರಂಭದ ಗೌಜಿ ಸೇರಿದ್ದ ಜನ, ಊಟಕ್ಕಿದ್ದ ತರಹೇವಾರಿ ಖಾದ್ಯ, ಹಾಗೂ ಇವೆಲ್ಲಕ್ಕೂ ಕಳಶದಂತಿದ್ದ ರಾಯರ ಮುಗುಳ್ನಗುವಿನ ಬಗ್ಗೆ ವರ್ಣಿಸಿದ್ದಾಗ ಎಲ್ಲರೂ ಕಣ್ಣರಳಿಸಿ ಕೇಳಿದ್ದರೆ, ರಘು ಕೊಂಕಾಗಿ ಪ್ರಶ್ನೆ ಎಸೆದಿದ್ದ. "ಏನಾಯಿತು? ಅವರಿಗೇನೂ ನಷ್ಟವಾಗಿರಲಿಕ್ಕಿಲ್ಲ ನೀನು, ನಿನ್ನಂತೇ ಹೋದವರು ಕೊಂಡು ಹೋಗಿರಲಿಲ್ಲವೆ ಭಾರೀ ಉಡುಗೊರೆ?" ಅವನ ಮಾತಿನಲ್ಲಿ ಸತ್ವವಿತ್ತಾದರೂ ಆ ವ್ಯಂಗ್ಯ ಕೆಣಕಿತ್ತು ತನ್ನನ್ನು. ಎಂದೇ ಪ್ರತಿಕ್ರಿಯಿಸಿದ್ದ. "ಸರಿ, ಅವರಂಥ ಲಕ್ಷಾಧೀಶ್ವರರಿಗೆ ನಮ್ಮ ಉಡುಗೊರೆಯಿಂದೇನಾಗಬೇಕು! ಏನೋ ವಿಶ್ವಾಸದಿಂದ ಕರೆದರು. ನಾವೂ ಸಂಪ್ರದಾಯವೆಂದು ಉಡುಗೊರೆ" ತಾನಿನ್ನೂ ಹೇಳುತ್ತಿದ್ದಂತೆಯೇ ರಘು ಮಧ್ಯೆಯೇ ದನಿಏರಿಸಿದ್ದ.

"ಆಯಿತಪ್ಪ, ಉಡುಗೊರೆ ವಿಚಾರ ಹೇಗೇ ಇರಲಿ, ಒಂದಂತೂ ನಿಜ" ಹಾಗಂದವನು ಅನಂತರ ಎಲ್ಲರ ಲಕ್ಷ್ಯವೂ ಅವನ ಮೇಲೆಯೇ ಇರುವುದನ್ನು ಖಚಿತಪಡಿಸಿಕೊಂಡು ನಿರ್ಣಾಯಕ ಸ್ವರದಲ್ಲಿ ಸಾರಿದ್ದ. "ಆವಷ್ಟು ಹೆಚ್ಚಿಗೆ ಜನರನ್ನು ಕಲೆ ಹಾಕಿ ನನ್ನ ಮಗಳ ಮದುವೆಗೆ 'ಅಷ್ಟು' ಜನ ಬಂದಿದ್ದರು ಎಂದು ಕೊಚ್ಚಿಕೊಳ್ಳುವುದಕ್ಕೆ ಬೇಕಾಗಿಯೇ ಆತ ಹಾಗೆ ಮಾಡಿದ್ದು. ಈಗೆಲ್ಲ ಸೇರಿದ ಜನರ ಸಂಖ್ಯೆ ಕೂಡ ದೊಡ್ಡವರ ದೊಡ್ಡಸ್ತಿಕೆಯನ್ನಳೆಯುವ ಒಂದು ಮಾನದಂಡ ಆಗಿ ಬಿಟ್ಟಿದೆ. ಗೊತ್ತಿಲ್ಲವೆ ನಿಮಗೆ? "ಅವನ ಆ ಪ್ರಶ್ನೆಗೆ ಉಳಿದವರೆಲ್ಲ ಮೆಲುನಕ್ಕು ಮೌನ ಸಮ್ಮತಿ ಸೂಚಿಸಿದರೆ, ತನಗೆ ರೇಗಿತ್ತು. ಒಂದು ತರಹದ ಅಸಹಾಯಕತೆಯಿಂದ ಉಂಟಾದ ಸಿಟ್ಟದು. ತನ್ನ, ತನ್ನಂತೆಯೇ ಬಂದಿದ್ದ ಕೆಲವರ ಪ್ರಾತಿನಿಧ್ಯ, ಕೇವಲ ಜನಭರ್ತಿಗಾಗಿಯೆ ಆಗಿತ್ತೆ ಹಾಗಿದ್ದರೆ? ಎಂಬ ಪ್ರಶ್ನೆ ಆ ಕ್ಷಣವೆ ಹುಟ್ಟಿ, ಅದರ ಪ್ರಖರತೆಗೆ ಬೆವರಿದರೂ, ಚೇತರಿಸಿಕೊಳ್ಳಲು ಯತ್ನಿಸುತ್ತ ವಾದಿಸಿದ್ದ ತಾನು. "ಹಾಗೇನಲ್ಲ, ವ್ಯಕ್ತಿ, ವ್ಯಕ್ತಿಗಳ ನಡುವೆ ಪರಿಚಯ ಬೆಳೆಯಬೇಕಿದ್ದರೆ ಏನಾದರೊಂದು ಘಟಿಸಬೇಕಾಗುತ್ತದೆ. ಇಲ್ಲಿ

ಆ ಘಟನೆ ವಿವಾಹದ ರೂಪದಲ್ಲಿ ಬಂತಷ್ಟೇ!" "ಸರಿಯಪ್ಪ ಸರಿ, ಇಷ್ಟಕ್ಕೂ ನನಗೇನಂತೆ? ಈ ಬೂಟಾಟಿಕೆಗಳಿಗೆಲ್ಲ ಯಾಕೆ ಮರುಳಾಗುತ್ತೀರಿ ಎಂಬುದಕ್ಕಾಗಿ ಹಾಗೆ ಹೇಳಿದೆ. ನಿಮ್ಮ ನಿಮ್ಮೊಳಗಿನ ಪರಿಚಯ ಬೆಳೆದೂ ಸ್ನೇಹವಾದರೆ ಒಳ್ಳೆಯದೇ ಆಯಿತಲ್ಲ?" ತತ್‌ಕ್ಷಣವೆ ಹೇಳಿದ್ದ ರಘು, ಜತೆಗೆ, ತುಸು ವಿಷಾದದ ದನಿಯಲ್ಲಿ ಉಸುರಿದ್ದ. ಆದರೆ ನಿಮ್ಮ ನಡುವಿನ ವರ್ಗಭೇದ ಅದನ್ನು ಆಗಗೊಡುತ್ತವೆಯೆ ಎಂದು ನನಗೆ ತಿಳಿಯದು." ಈಗ ಆ ಮಾತುಗಳೆಲ್ಲ ನೆನಪಾಗಿ ಅವನಿಗೆ ತುಸು ಕಿರಿಕಿರಿ ಎನ್ನಿಸಿತಾದರೂ ಆ ವೇಳೆಗೆ ಅಂಗಡಿ ಸಮಾಪಿಸಿತ್ತಾಗಿ ತನ್ನ ಕಸವಿಸಿಯನ್ನಲ್ಲಿಗೇ ಅಣಗಿಸಿ ಸಾಮಾನಿನ ಚೀಟಿ ಬಿಡಿಸಿದ. ಹಾಗೂ ಸ್ವಲ್ಪ ಹೊತ್ತಿನಲ್ಲಿಯೆ ಎರಡೂ ಚೀಲಗಳ ಭರ್ತಿ ದಿನಸಿಯನ್ನು ಹೊತ್ತುಕೊಂಡು ಗೃಹಾಭಿಮುಖನಾದ. ಕೈಲಿದ್ದ ಹೊರೆಗಾಗಿ ರಿಕ್ಷಾ ಮಾಡುವಷ್ಟು ದುಬಾರಿತನ ಎಂದಿಗೂ ತೋರಿದವನೇ ಅಲ್ಲ ಅವನು. ಇಂದೂ ಎಂದಿನ ಹಾಗೆಯೆ ಭಾರ ಹೊತ್ತು, ಆ ದಣಿವಿಗೂ, ಮಧ್ಯಾಹ್ನದ ಆ ಬಿಸಿಲಿಗೂ ಬೆವರಿಳಿಸುತ್ತ ನಡೆವಾಗ ದಾರಿ ಬದಿ ನಿಂತಿದ್ದ ಕಾರಿನೊಳಗೆ ರಾಯರು ಮಂಡಿಸಿದ್ದು ಕಂಡಿತು. ತತ್‌ಕ್ಷಣವೆ ಅವನು ಪೆಚ್ಚಾಗಿ ಹೋದ. "ಛೇ, ತಾನು ನೋಡಲೇ ಇಲ್ಲವಲ್ಲ? ಈ ರೀತಿ, ಒಬ್ಬ ಕೂಲಿ ಆಳಿನಂತೆ ಇವರೆದುರಿಗೆ ಕಾಣಿಸಿಕೊಂಡೆನಲ್ಲ? ಮೊದಲೇ ಗಮನಿಸಿದ್ದಿದ್ದರೆ ಅಲ್ಲೇ ಎಲ್ಲಾದರೂ ನಿಂತು, ಕಾರು ಹೊರಟ ನಂತರವೇ ಹೊರಡಬಹುದಿತ್ತು."

ಜಯಣ್ಣನ ಒಳಗು ಹಾಗೆಂದರೂ ಹೊರಗೆ ಅವನು ನಕ್ಕ ಪೆಚ್ಚು ನಗೆಗೆ ಉತ್ತರವಾಗಿ ರಾಯರೂ ಮುಗುಳ್ನಕ್ಕರು. ಹಾಗೂ ಅದೇ ಕ್ಷಣದಲ್ಲಿ ಎಲ್ಲಿಗೋ ತೆರಳಿದ್ದ ಕಾರಿನ ಚಾಲಕ ಮರಳಿ ಸೀಟಿನಲ್ಲಿ ಕೂತವನು ರಾಯರಲ್ಲಿ ಕೇಳಿದ. "ಮನೆಗಲ್ಲವೆ ಸರ್?" ಅವನು ಆ ಪ್ರಶ್ನೆ ತನಗೂ ಕೇಳಿದ್ದರೆ ತಾನೂ ಈ ಕಾರಲ್ಲಿ ಸುಖವಾಗಿ ತೆರಳಬಹುದಿತ್ತು. ಈಗಲೂ ರಾಯರು ಹೇಳಿದರೆ? ಚಾಲಕನ ಪ್ರಶ್ನೆಯ ಬಗ್ಗೆ ತನ್ನೊಳಗೇ ಯೋಚಿಸಿದ ಜಯಣ್ಣ "ಇಷ್ಟಕ್ಕೂ ಮನೆಗಲ್ಲವೋ ಏನೋ?" ಎಂದು ಭಾವಿಸಿಕೊಳ್ಳುತ್ತ ಮುಂದಡಿ ಇಡಲಿದ್ದಾಗಲೇ ರಾಯರು ಚಾಲಕನಲ್ಲಿ "ಮನೆಗೆ ಬಿಡು" ಎಂದರು. ಹಾಗೂ ಜಯಣ್ಣನನ್ನುದ್ದೇಶಿಸಿ "ಪೇಟೆಗೆ ಬಂದಿರಾ?" ಎಂದು ಕೇಳಿದರು. ಈಗ ಜಯಣ್ಣ ಉಬ್ಬಿ ಹೋದ. "ವರ್ಗಭೇದದ ಬಗ್ಗೆ ಎಚ್ಚರಿಸಿದ ರಘು ಈಗಿಲ್ಲಿರಬೇಕಿತ್ತು" ಒಳಗೇ ಯೋಚಿಸುತ್ತ, ಹೊರಗೆ ತುಸೂ ನಿರಾಶಾಭಾವ ನಟಿಸುತ್ತ ಹೇಳಿದ. "ಹೂಂ, ಸ್ವಲ್ಪ ಖರೀದಿ ಇತ್ತು. ಆದರೆ ರಿಕ್ಷಾ ಒಂದೂ ಸಿಗಲಿಲ್ಲ" ಪರೋಕ್ಷವಾಗಿ ತಾನೂ ಮನೆಗೇ ಹೊರಟವನೆಂಬ ಆ ಮಾತನ್ನೂ, ರಿಕ್ಷಾ ಬಗ್ಗೆ ಅವನಿಂದ ಸುಳ್ಳನ್ನೂ ರಾಯರು ಹೇಗೆ ಸ್ವೀಕರಿಸಿದರೋ? ಹೊರಗಂತು ಏನನ್ನೂ ತೋರಿಸದೇ ಅದೇ ಸಿಹಿ ಮುಗುಳ್ನಗುವನ್ನು ಬೀರಿದ ಆತ "ಹೌದೆ?" ಎಂದವರು, ಜತೆಗೇ "ಬರಲೆ?" ಎಂದೂ ಕೇಳಿದರು. ಜಯಣ್ಣ ಬೆಪ್ಪನಂತೆ ತಲೆ ಆಡಿಸಬೇಕಿದ್ದರೇ ಕಾರು ಮುಂದೋಡಿತು. ಮಣ್ಣಿನ ಆ ರಸ್ತೆಯಲ್ಲಿ ಆ ಕ್ಷಣವೆ ಎದ್ದ ಧೂಳು ಜಯಣ್ಣನ ಕಣ್ಣು ಮೂಗುಗಳಿಗೆ ಮುತ್ತಿದಾಗ ಅವನು ವ್ಯಂಗ್ಯವಾಗಿ ನಗುತ್ತ ಹೇಳಿಕೊಂಡ ತನಗೆ! ಥೂ ನೀನೊಬ್ಬ ಮೂರ್ಖ.

# ಅಲ್ಜೀಮರ್ ರೋಗಿಯ ಜತೆ ಸಹಬಾಳ್ವೆ

**ಸರಸ್ವತಿ ಬಡೆಕ್ಕಿಲ**

ಇದೊಂದು ಗುಣಪಡಿಸಲಸಾಧ್ಯವಾಗದ ಕಾಯಿಲೆ. ಇದಕ್ಕೆ ಬಲಿಯಾದವರ ಮೆದುಳಿನ ಕಣಗಳು ಮುದ್ದೆಯಾಗುತ್ತಾ ಬಂದು ಗಟ್ಟಿಯಾದ ಮರದ ಕೊರಡಿನಂತೆ, ಮರದಲ್ಲಿ ಗಂಟುಗಳಿರುವಂತೆ, ಅಲ್ಲಲ್ಲಿ ಗಂಟುಗಳಾಗುತ್ತವೆ. ಇದಕ್ಕೆ ಬಲಿಯಾದವರ ಸ್ಮರಣೆ, ವಿವೇಕ, ವಿವೇಚನಾ ಶಕ್ತಿಗಳು ಕುಂಠಿತಗೊಂಡು ಕೊನೆಗೆ ನಿರ್ನಾಮವಾಗುತ್ತವೆ. ವ್ಯಕ್ತಿಯು ಅದುವರೆಗೆ ಸಂಪಾದಿಸಿದ ವಿದ್ಯೆ ಬುದ್ಧಿಮತ್ತೆಗಳೆಲ್ಲ ನಾಶಗೊಳ್ಳುತ್ತವೆ. ರೋಗಿಯನ್ನೂ, ಅವನ ಕುಟುಂಬವನ್ನೂ ಕೌಟುಂಬಿಕ ಸೌಖ್ಯವನ್ನೂ ನಿರ್ದಾಕ್ಷಿಣ್ಯವಾಗಿ ನೆಲಸಮ ಮಾಡುವ, ಮನೆಯಲ್ಲಿ ಜನರನ್ನೆಲ್ಲ ದಿಗ್ಭ್ರಮೆಗೀಡು ಮಾಡುವ ಈ ವಿಚಿತ್ರ ಕಾಯಿಲೆಗೆ ಯಾವ ಪರಿಹಾರವೂ ಇದುವರೆಗೆ ಲಭ್ಯವಾಗಿಲ್ಲ. ಆದರೂ ಸಂಶೋಧಕರು ಸರ್ವಪ್ರಯತ್ನಗಳಿಂದ ಇದಕ್ಕೊಂದು ಚಿಕಿತ್ಸೆಯನ್ನು ಅಥವಾ ಒಂದು ಔಷಧವನ್ನು ಶೋಧಿಸಲು ಬಿರುಸಿನಿಂದ ಹಗಲಿರುಳೆನ್ನದೆ ಹೆಣಗುತ್ತಾ ಇದ್ದಾರೆ!

ಎಲಿಜಬೆತ್‌ಗೆ ಹೀಗೆನಿಸುತ್ತಿತ್ತು : ತನ್ನ ಬುದ್ಧಿ ಮಂಕಾಗುತ್ತಿದೆ! ಸ್ಮರಣೆಯನ್ನೇ ಕಳೆದುಕೊಳ್ಳುತ್ತಾ ಇದ್ದೇನೆ! ನೆರೆಮನೆಯಾಕೆಯ ಹೆಸರೂ ನೆನಪಾಗುತ್ತಿಲ್ಲ! ಒಮ್ಮೊಮ್ಮೆ ನನ್ನ ಕೆಲಸಗಳು ವಿಲಕ್ಷಣವಾಗಿರುತ್ತವೆ. ಒಂದು ಮಾಡಲು ಹೋಗಿ ಇನ್ನೊಂದೇ ಮಾಡಿಬಿಡುತ್ತೇನೆ. ಇನ್ನು ಒಂದು ವರ್ಷದೊಳಗೆ–ಏಕೆ? ಒಂದೆರಡು ತಿಂಗಳಲ್ಲಿಯೇ ನನ್ನ ಪರಿಸ್ಥಿತಿ ಇನ್ನೂ ಕೆಡುವುದು ನಿಶ್ಚಯ. ಯಾವ ಔಷಧಿಯೂ ಇದನ್ನು ತಡೆಗಟ್ಟಲಾರದು. ಎಂಥ ಘನ ವೈದ್ಯರಿಂದಲೂ ನನ್ನ ಚಿಕಿತ್ಸೆ ಸಾಧ್ಯವಿಲ್ಲ. ಇದು ಅತ್ಯಂತ ಭಯಾನಕ ರೋಗ. ನನ್ನ ತಂದೆ, ಅಕ್ಕ, ನನ್ನಣ್ಣ ಕೂಡ ಇದಕ್ಕೆ ತುತ್ತಾದರು. ಅವರಿಗೂ ಪ್ರಾರಂಭದಲ್ಲಿ ಇದೇ ರೀತಿ ಆಗಿತ್ತು. ಅವರೆಲ್ಲರ ದುರವೃಷ್ಟದ ದುರಂತ ನಾಟಕವನ್ನು ಕಣ್ಣಾರೆ ಕಂಡಿರುವೆ.”

ಎಲಿಜಬೆತ್ತಳಿಗೆ ಪ್ರಾರಂಭವಾದ್ದು ಅಲ್ಜೀಮರ್ ಕಾಯಿಲೆ. ಈ ಹಂತಕ ವ್ಯಾಧಿಗೆ ಬಲಿಯಾದವರ ಶಾರೀರಕ ಶಕ್ತಿಸಾಮರ್ಥ್ಯಗಳೆಲ್ಲ ಒಂದೊಂದಾಗಿ, ಹಂತಹಂತವಾಗಿ, ಕಳಚಿಬೀಳುತ್ತವೆ. ಅವರ ವಿವೇಕ, ಚಿತ್ತಸ್ವಾಸ್ಥ್ಯ, ಆತ್ಮಾಭಿಮಾನ, ಸ್ವಪ್ರತಿಷ್ಠೆ

---

೧೯೮೯ರ ಆಗಸ್ಟ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಗ್ಲೋರಿಯಾ ಹಾಚ್‌ಮನ್ ಅವರ "ಕೆಪಿಂಗ್ ವಿತ್ ಅಲ್ಜೀಮರ್ಸ್" ಎಂಬ ಲೇಖನದ ಅನುವಾದ.

ಎಲ್ಲವೂ ನಾಶಗೊಳ್ಳುತ್ತವೆ. ಹೆಚ್ಚಾಗಿ ಮೊದಲಿಗೆ ಸ್ಮರಣೆ, ಬುದ್ಧಿಶಕ್ತಿ ಮಾಯವಾಗಲು ತೊಡಗಿ ಆಮೇಲೆ ಶರೀರದ ಅಂಗಾಂಗಗಳು ನಿಷ್ಕ್ರಿಯವಾಗುತ್ತ ಬರುತ್ತವೆ. ಎಲ್ಲವೂ ಮುಗಿದು ವ್ಯಕ್ತಿ ಜೀವಚ್ಛವವಾಗಿ ಬದಲಾವಣೆ ಹೊಂದುತ್ತಾನೆ. ಅಂದರೆ ತನ್ನ ಕೆಲಸಗಳನ್ನು ತಾನೇ ಮಾಡಲಾಗದ, ಊಟಬಟ್ಟೆ ಶೌಚಾದಿ ಸರ್ವಕಾರ್ಯಗಳನ್ನು ಇತರರೇ ಮಾಡಿಕೊಡುವ ಹೀನಸ್ಥಿತಿಗೆ ಮುಟ್ಟುವ ಮೊದಲು ಆತ ಹಲವು ವರ್ಷ, ಹಲವು ಹಂತಗಳನ್ನು ದಾಟುತ್ತಾ ದಾಟುತ್ತಾ ಬರಬೇಕಾಗುತ್ತದೆ. ಸಾಲದುದಕ್ಕೆ ಆತ ಅತ್ಯಂತ ಭಯಾನಕವಾದ ಭಾವನೆಗಳ ಘೋರ ತಿರುಗಣಿ ಸುಳಿಯೊಳಗೆ ಸಿಲುಕಿ ಜರ್ಜರಿತನಾಗಿಬಿಡುತ್ತಾನೆ. ಅವನ ಮಿದುಳಿನ ವ್ಯಾಪಾರಕ್ಕೆ ಸರಿಯಾದ ಉದಾಹರಣೆ ಮಕ್ಕಳು ಆಟವಾಡುವ ಕ್ಯಾಲಿಡೋಸ್ಕೋಪ್ (ಇದೊಂದು ಸಿಲಿಂಡರಿನೊಳಗೆ ಮೂರು ಕನ್ನಡಿಗಳನ್ನು ಅಳವಡಿಸಿ ಮಧ್ಯೆ ಬಣ್ಣಬಣ್ಣದ ಬಳೆ ಚೂರೋ ಇಲ್ಲವೇ ಅಂಥದೇ ಪಾರದರ್ಶಕ ಬಣ್ಣದ ವಸ್ತುಗಳನ್ನಿಟ್ಟು ಸಿಲಿಂಡರನ್ನು ತಿರುಗಿಸುತ್ತಾ ನೋಡುವಾಗ ವಿವಿಧ ಆಕೃತಿಗಳು ಮೂಡುತ್ತಾ ಹೋಗುತ್ತವೆ) ಮಿದುಳಿನಲ್ಲೂ ಈ ರೀತಿ ಭಾವನೆಗಳ ಹುಚ್ಚಾಟ ಉಂಟಾಗಿ ಆತ ಅತ್ಯಂತ ಭಯಗ್ರಸ್ತನಾಗುತ್ತಾನೆ. ಇಂಥ ಭಯಂಕರ ವಜ್ರಪ್ರಹಾರದಿಂದ ಅವನ ವ್ಯಕ್ತಿತ್ವವು ನಾಶವಾಗಿ ಅವನೊಬ್ಬ ಬೇರೆಯೇ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ. (ಅವನ ಸ್ವಭಾವವು ಒಮ್ಮೆ ಕಾಡುಮೃಗದಂತೆ ಕಂಡರೆ, ಇನ್ನೊಮ್ಮೆ ಮುಗ್ಧ ಬಾಲಕನಂತೆ, ಏನೂ ಅರಿಯದ ಹಸುಳೆಯಂತೆ ಬದಲಾಗುತ್ತದೆ) ಸಾಮಾಜಿಕ ಶಿಸ್ತು, ನಿಯಮ, ನೀತಿಗಳೊಂದೂ ಅವನ ಅಳವಿಗೆ ನಿಲುಕಲಾರವು. ಕ್ರಮಶಃ ಅವನ ಹಿಂದಿನ ಜೀವನದ ಘಟನೆಗಳು, ತಾನು ಯಾರು? ತನ್ನ ಶುಶ್ರೂಷೆ ಮಾಡುತ್ತಿರುವವರಾರು? ಇವರು ತನಗೆ ಉಪಕಾರಿಗಳೋ ಅಥವಾ ಶತ್ರುಗಳೋ ಎಲ್ಲವೂ ಘೋರ ವಿಸ್ಮರಣೆಯಲ್ಲಿ ಮುಳುಗಿಹೋಗುವುದು. ಅತ್ಯಂತ ಶೋಚನೀಯ ಸಂಗತಿಯೆಂದರೆ ಈ ಭಯ ವಿಹ್ವಲ ಭಾವೋನ್ಮಾದದ ಚಂಡಮಾರುತದಿಂದ ಜಾರುತ ನಿಶ್ಚೇಷ್ಟಿತನಾಗುತ್ತ ಬರಲು ಹಲವು ವರ್ಷಗಳೇ ತಗಲುವುದು! ಎಂಥ ದಾರುಣ, ಯಾತನಾಮಯ ಸನ್ನಿವೇಶ!

ಒಂದು ನಿರ್ದಿಷ್ಟ ಪ್ರಮಾಣದ ಮರೆವು ವೃದ್ಧಾಪ್ಯದಲ್ಲಿ ತಲೆದೋರುವುದು ಸ್ವಾಭಾವಿಕ. ಅರುವತ್ತೈದು ವರ್ಷ ವಯಸ್ಸಿನ ಮತ್ತು ಅದಕ್ಕೂ ಮೇಲ್ಪಟ್ಟ ವೃದ್ಧರು ತಮ್ಮ ಜ್ಞಾಪಕಶಕ್ತಿ ಕುಂದುತ್ತಿರುವುದೆಂದು ಹೇಳುತ್ತಿರುವವರೆಲ್ಲ ಆಲ್ಜೀಮರ್ ರೋಗಿಗಳೆಂದು ಯಾರೂ ಭಯಪಡಬೇಕಾಗಿಲ್ಲ. ಆದರೆ ಕೆಲವರಿಗೆ ಅದು ಇರುವುದೂ ವಾಸ್ತವ. ಅದರ ಪ್ರಾರಂಭಿಕ ಲಕ್ಷಣವೂ ವಿಸ್ಮರಣೆಯೇ ಎಂಬುದು ವಾಸ್ತವ ಮಾತ್ರವಲ್ಲ, ಗಮನಾರ್ಹ ಕೂಡ.

ಈ ವ್ಯಾಧಿ ಎಂಥ ಪ್ರತಿಭಾವಂತರಿಗೂ, ಎಂಥ ಮೇಧಾವಿಗೂ ಬರಬಹುದು. ಬುದ್ಧಿಶಕ್ತಿಯ ಮಟ್ಟಕ್ಕೂ ಈ ಕಾಯಿಲೆಗೂ ಏನೇನೂ ಸಂಬಂಧವಿಲ್ಲ. ಜೆನಿಫರ್ ಎಂಬ ಅಸಾಮಾನ್ಯ ಬುದ್ಧಿಶಾಲಿ ವಕೀಲಳಿಗೆ ತನ್ನ ಅರವತ್ತೆಂಟನೇ ವಯಸ್ಸಿನಲ್ಲಿ ತನ್ನ ಮಕ್ಕಳ ಹೆಸರೇ ಮರೆತು ಹೋಯಿತು. ಮೈಕೇಲ್ ಒಬ್ಬ ಖ್ಯಾತ ಮನೋವಿಶ್ಲೇಷಕ ವಿಜ್ಞಾನಿ. ಅವನಿಗೆ ಈಗ ೮೧ ವರ್ಷ ವಯಸ್ಸು.

ಅವನೊಡನೆ ಅಮೇರಿಕದ ಅಧ್ಯಕ್ಷನಾರೆಂದು ನೀವು ಕೇಳಿದರೆ ಹೇಳಲಾರ

ಜರ್ಮನಿಯ ಅಲೋಇಯಿಸ್ ಅಲ್‌ಜೀಮರ್ ಎಂಬ ನರರೋಗ ತಜ್ಞ ೧೯೦೭ ರಲ್ಲಿ ಈ ಕಾಯಿಲೆಯನ್ನು ಪ್ರಪ್ರಥಮವಾಗಿ ಗುರುತಿಸಿದ. ರೋಗಿ ೫೫ ವರ್ಷದ ಮಹಿಳೆಯಾಗಿದ್ದಳು. ಅವಳಿಗೆ ೪ ವರ್ಷದಿಂದ ಸ್ಮರಣ ಶಕ್ತಿ ಕಳೆದು ಹೋಗಿತ್ತು. ಜತೆಗೆ ಖಿನ್ನತೆ, ಕಳವಳ, ಮನೋವಿಕಲ್ಪ, ಭ್ರಾಂತಿ! ಯಾವುದೇ ವಿಚಾರವನ್ನು ಆಲೋಚಿಸುವ, ನಿಷ್ಕರ್ಷಿಸುವ ಸಾಮರ್ಥ್ಯ ಇಲ್ಲದಿರುವುದು ಇವೆಲ್ಲ ಸೇರಿತ್ತು. ಈ ರೀತಿಯ ಲಕ್ಷಣಗಳು ವೃದ್ಧಾಪ್ಯದಲ್ಲಿ ಕಾಣಿಸಿಕೊಳ್ಳುವುದನ್ನು ವೈದ್ಯರು ಎಷ್ಟೋ ಕಂಡಿದ್ದರು; ವಯಸ್ಸಾಗುತ್ತಾ ಆಗುತ್ತಾ ಕಾಣಿಸಿಕೊಳ್ಳುವ ಜರಾಜನ್ಯ ರೋಗವೆಂದು ಆ ಬಗ್ಗೆ ನಿರ್ಲಕ್ಷ್ಯ ತಾಳಿ ಅಂಥವರನ್ನು ಹಿಂದಕ್ಕೆ ಕಳುಹಿಸುತ್ತಲೂ ಇದ್ದರು. ಆದರೆ ೫೫ರ ಈ ಮಹಿಳೆಯನ್ನು ಮುದುಕಿ ಎನ್ನುವಂತಿಲ್ಲ. ಅದಲ್ಲದೆ ಅವಳ ಸ್ವಭಾವದಲ್ಲಾದ ವಿಚಿತ್ರ ಬದಲಾವಣೆಯೂ ಅತ್ಯಂತ ಜಟಿಲವಾದ ರಹಸ್ಯವೆಂದು ಮೊದಲಾಗಿ ಕಂಡುಕೊಂಡವರು ಡಾಕ್ಟರ್ ಅಲ್ಜೀಮರ್.

ಡಾ|| ಅಲ್ಜೀಮರ್ ಅಷ್ಟಕ್ಕೇ ಕೈ ಬಿಡಲಿಲ್ಲ. ಅವಳ ಮರಣಾನಂತರ ಅವಳ ಶವ ಪರೀಕ್ಷೆ ನಡಸಿದರು. ಆಗ ಮೆದುಳಿನ 'ಆಟೊಪ್ಸಿ' ಯಲ್ಲಿ ರೋಗದ ಮೂಲ ರಹಸ್ಯ ಪ್ರಕಟವಾಯಿತು. ಅಲ್ಲಿ ಅವರು ಕಂಡದ್ದೇನೆಂದರೆ ಮೆದುಳಿನ ಭಗ್ನಾವಶೇಷಗಳೋ ಎಂಬಂತೆ, ವಿಚಿತ್ರ ರೀತಿಯಲ್ಲಿ ಹೆಣೆದು ಹೋಗಿದ್ದ ಗಂಟು ಗಂಟಾದ ಗೊಂಚಲುಗಳು ಮುರಿದು ಬಿದ್ದ ಕುಪ್ಪೆಗಳಂತಾದ ಮಿದುಳಿನ ಭಾಗಗಳು. ಮುಂದೆ ಶೋಧಿಸುತ್ತಾ ಹೋದಂತೆ ಇವು ಮಿದುಳಿನ ನಿರ್ಜೀವಗೊಂಡ ಮಾಂಸಖಂಡಗಳ ಮತ್ತು ನರಜಾಲಗಳ ಅಗ್ರಭಾಗಗಳೆಂದು ಗುರುತಿಸಿದರು. ಮಿದುಳಿನಲ್ಲಾದ ಈ ಪರಿವರ್ತನೆಗಳೇ ವ್ಯಕ್ತಿಯ ಸ್ವಭಾವದಲ್ಲಿ ಬದಲಾವಣೆ ಮಾಡಿರಬೇಕು; ಉನ್ಮಾದ ಭ್ರಾಂತಿಗಳ ಗೊಂದಲಮಯ ಪರಿಸ್ಥಿತಿ ಉದ್ಭವವಾಗಿರಬೇಕು ಎಂದು ಅವರು ನಿರ್ಣಯಿಸಿದರು. ಜರಾಜನ್ಯರೋಗದಲ್ಲಿ ಈ ರೀತಿಯ ಮೆದುಳಿನ ಗಂಟುಗಳಿರಲಾರದೆಂದೂ ಊಹಿಸಿದರು ಅದನ್ನೇ ಪ್ರತಿಪಾದಿಸಿದರು. ಹೆಚ್ಚಾಗಿ ಕಡಿಮೆ ಮಧ್ಯವಯಸ್ಸಿನವರಲ್ಲಿ ಕಂಡು ಬರುವುದೆಂದೂ ಗ್ರಹಿಸಿದರು. ಹಲವಾರು ಮಧ್ಯ ವಯಸ್ಕರಲ್ಲಿ, ವೃದ್ಧಾಪ್ಯತೆ ಇನ್ನೂ ಕಾಲಿಡುವ ಮೊದಲೇ ಮೆದುಳಿನ ಕಣಗಳು ಈ ರೀತಿ ನಿರ್ಜೀವವಾದವರಲ್ಲಿ ಮಾತ್ರ ಈ ರೀತಿಯ, ವಿಶಿಷ್ಟವಾದ, ಪ್ರತ್ಯೇಕವಾದ ಸ್ವಭಾವ ಪರಿರ್ವನೆ ಕಂಡು ಬಂತು. ವೃದ್ಧರಲ್ಲಿ ರಕ್ತನಾಳಗಳು ಪೆಡಸಾಗುವುದರಿಂದಾಗಿ ಉಂಟಾಗುವ ಮರೆವು ಇತ್ಯಾದಿ ಲಕ್ಷಣಗಳು ತೋರಿಬಂದರೂ,ಅವರ ಮೆದುಳಿನಲ್ಲಿ ಮೇಲೆ ಹೇಳಿದ ಪರಿವರ್ತನೆಗಳಿರುವುದಿಲ್ಲವೆಂದು ನಿರ್ಣಯಿಸಿದರು. ಮುಂದೆ ಹಲವು ವರ್ಷ ಅಲ್ಜೀಮರರ ಈ ಅಭಿಪ್ರಾಯ ಪುರಸ್ಕೃತವೂ ಆಗಿತ್ತು. ಆದರೆ ಇಂದು ಅದು ಬದಲಾಗಿದೆ. ನರಮಂಡಲ ಮತ್ತು ಮಿದುಳು ಕ್ಷೀಣವಾಗಿ ಅವನತಿ ಹೊಂದುವುದು ಯಾವ ವಯಸ್ಸಿನಲ್ಲೂ ಘಟಿಸಬಹುದು.

ಇದೇ ಅಲ್ಜೀಮರ್ ಎಂದು ನಿಖರವಾಗಿ ನಿರ್ಣಯಮಾಡುವುದು ಈಗಲೂ ಕಠಿಣ ಕಾರ್ಯವಾಗಿಯೇ ಉಳಿದಿದೆ. ವಿವಿಧ ಲಕ್ಷಣಗಳ ಕಲಸುಮೇಲೋಗರದಂತಿರುವ ಮಿದುಳು ವ್ಯಾಧಿಗಳಲ್ಲಿ ಅಲ್ಜೀಮರನ್ನು

ಪ್ರತ್ಯೇಕಗೊಳಿಸುವುದು ಸುಲಭವಲ್ಲ ಪಾರ್ಕಿನ್‌ಸನ್ ಎಂಬುದು ಇನ್ನೊಂದು ಮಿದುಳಿಗೆ ಸಂಬಂಧಪಟ್ಟ ವ್ಯಾಧಿ, ರಕ್ತದ ಒತ್ತಡದಲ್ಲುಂಟಾಗುವ ಏರುಪೇರುಗಳಿಂದ, ಅಮ್ಲಜನಕದ ಅಭಾವದಿಂದ, ಉಂಟಾಗುವ ಸಣ್ಣಸಣ್ಣ ಘಾತಗಳಿಂದ ಮಿದುಳು ಮೆದುವಾಗಿ ಅಲ್ಜೀಮರ್ ಕಾಯಿಲೆಯ ಲಕ್ಷಣಗಳನ್ನೇ ತೋರಿಸುತ್ತದೆ ಇನ್ನು ಕೆಲ ಸಂದರ್ಭಗಳಲ್ಲಿ ಅಸ್ತಮಾ ಇತ್ಯಾದಿಗಳಿಂದ ತಾತ್ಕಾಲಿಕವಾಗಿ ಬಿಡುಗಡೆ ಹೊಂದಲಿಕ್ಕಾಗಿ ಕೊಡುವ ನರಮಂಡಲದ ನಿಯಂತ್ರಕ ಜಾಲಗಳ ಮೇಲೆ ತಡೆಯೊಡ್ಡುವ ಹಾಗೂ ನಿದ್ದೆ ಬರಿಸುವ ಔಷಧಗಳು, ರಕ್ತದ ಒತ್ತಡವನ್ನು ಕಡಿಮೆಮಾಡಲಿಕ್ಕಾಗಿ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಲ್ಲಿ ಉಪಯೋಗಿಸುವ ಎಲ್ಲ ಆಧುನಿಕ ಅಲೋಪತಿಯ ಔಷಧಗಳು ಮೆದುಳನ್ನು ಕ್ರಮೇಣ ಹಾಳು ಮಾಡುತ್ತ ಬರುವುದರಿಂದ ಅಲ್ಜೀಮರ್ ಲಕ್ಷಣಗಳನ್ನೇ ಶರೀರದಾದ್ಯಂತ ಉಂಟು ಮಾಡುತ್ತವೆ. ಮೇಲೆ ತಿಳಿಸಿದಂಥ ಎಲ್ಲ ಕಾಯಿಲೆಗಳಲ್ಲೂ ಪ್ರಭಾವ ಪರಿವರ್ತನೆ, ಖಿನ್ನತೆ, ಭಾವೋನ್ಮಾದಗಳು ತಲೆದೋರಬಹುದು. ಆರ್ಟೀರಿಯಲ್ ಕ್ಲೆರೋಸಿಸ್ ರೋಗವೂ ಇದೇ ಲಕ್ಷಣಗಳನ್ನು ತೋರಿಸುವುದಿದೆ. ಹಾಗಿದ್ದಲ್ಲಿ ಅಲ್ಜೀಮರ್ ಕಾಯಿಲೆ ಎಂದೇ ನಿಖರವಾಗಿ ನಿಶ್ಚಯಿಸಲು ಬೇಕಾದ ಮುಖ್ಯ ಲಕ್ಷಣಗಳು ಯಾವುವು? ನ್ಯೂಯಾರ್ಕಿನ ವಿಶ್ವವಿದ್ಯಾಲಯದ ವೈದ್ಯಕೀಯ ಮತ್ತು ವೃದ್ಧಾಪ್ಯ ಸಂಶೋಧನ ಕೇಂದ್ರದಲ್ಲಿ ವೃದ್ಧಾಪ್ಯದ ಮನೋವಿಕೃತಿ ಮತ್ತು ಚಿಕಿತ್ಸಾ ವಿಭಾಗದ ಮುಖ್ಯ ನಿರ್ದೇಶಕರಾದ ಡಾಕ್ಟರ್ ಬ್ಯಾರಿ ರೀಸ್‌ಬರ್ಗ್ ಈ ರೀತಿ ಹೇಳುತ್ತಾರೆ. ಇದೊಂದು ಹಲವು ಹಂತಗಳುಳ್ಳ ಕಾಯಿಲೆ. ಇದಕ್ಕೆ ಬಲಿಯಾದ ರೋಗಿ ಮೊದಲೇ ನಿಶ್ಚಿತವಾಗಿದೆಯೋ ಎನ್ನುವ ರೀತಿಯಲ್ಲಿ ಕೆಳಕ್ಕೆ ಇಳಿಯುತ್ತಾ ಬರುತ್ತಾನೆ. ಅವನು ಮುಂದೆ ಇದೇ ರೀತಿ ಆಗುತ್ತಾನೆಂದು ಭವಿಷ್ಯ ನುಡಿಯಬಹುದಾದಷ್ಟು ನಿಖರವಾಗಿರುತ್ತದೆ. ಅವನ ಈ ಹಿನ್ನಡೆ। ಆ ವ್ಯಕ್ತಿ ಸುಸ್ಪಷ್ಟವಾದ ಮತ್ತು ವಿಶಿಷ್ಟವಾದ ಘಟ್ಟಗಳನ್ನು ತಲಪುತ್ತಾ, ಅನುಭವಿಸುತ್ತಾ ಬರುತ್ತಾನೆ."

"ಮೊದಲಿಗೆ, ಹೆಚ್ಚಾಗಿ, ಅಂಥ ವಿಶೇಷವೇನೂ ಕಾಣದಂತಹ ಮರೆವು, ಕ್ರಮೇಣ ಮಾನಸಿಕ ಗೊಂದಲ, ಗಲಿಬಿಲಿಗಳಿಂದ ದಿಕ್ಕು ತೋಚದಂತಾಗುವ—ಮರೆವು ಮತ್ತು ನೆನಪುಗಳು ಕಲಸಿ ಹೋದಂತೆ ಒಂದು ವಿಚಿತ್ರ ಪರಿಸ್ಥಿತಿಗೆ ನಾಂದಿಯಾಗುತ್ತದೆ. ಕಾಲಸರಿದಂತೆ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸಂಪೂರ್ಣ ಅಸಹಾಯಸ್ಥಿತಿಗೆ ಬಂದು ಮುಟ್ಟುತ್ತಾನೆ" ಮುಂದುವರಿದು ಬ್ಯಾರಿಯವರು ಹೀಗೆನ್ನುತ್ತಾರೆ. "ಜೀವಿಗಳ ಸಾಮಾನ್ಯ ಬೆಳವಣಿಗೆಗೆ ವ್ಯತಿರಿಕ್ತವಾದ ರೀತಿಯ ಹಿನ್ನಡೆಯಲ್ಲಿ ಅಲ್ಜೀಮರ್ ರೋಗಿ ಸಾಗತೊಡಗುತ್ತಾನೆ. ಈ ಹಿನ್ನಡೆಯುವಿಕೆ* ಅಥವಾ ರೋಗ ಉಲ್ಬಣವಾಗುವ ವೇಗ ವ್ಯಕ್ತಿಯಿಂದ ವ್ಯಕ್ತಿಗೆ ಅಲ್ಪಸ್ವಲ್ಪ ವ್ಯತ್ಯಾಸಗೊಳ್ಳುವುದಾದರೂ, ಅದನ್ನು ಮೊದಲೇ ಲೆಕ್ಕಾಚಾರ ಹಾಕಿ ಹೇಳುವುದು ಸಾಧ್ಯವಿದೆ. ಕೆಲವರು ಒಂದು ಹಂತವನ್ನು ಮುಟ್ಟಿದ ಮೇಲೆ

---

*ಮಧ್ಯವಯಸ್ಕನೋ ವೃದ್ಧಾಪ್ಯಕ್ಕೆ ಕಾಲಿಡುವವನೋ ಆಗಿದ್ದಲ್ಲಿ ಅವನ ಮಾನಸಿಕ ಸ್ಥಿತಿ ಯೌವನಕ್ಕೆ ಮತ್ತೆ ಬಾಲ್ಯಕ್ಕೆ ಆಮೇಲೆ ಶೈಶವಾವಸ್ಥೆ ದಾಟುತ್ತದೆ.

ಹಲವಾರು ವರ್ಷ ಅದೇ ಸ್ಥಿತಿಯಲ್ಲೇ ಬಾಳುತ್ತ ಇರಬಲ್ಲರು!"

ಇದುವರೆಗೂ ಈ ಕಾಯಿಲೆಯ ಮೂಲ ಕಾರಣಯಾರಿಗೂ ತಿಳಿದಿಲ್ಲ ಕೆಲ ಸಂಶೋಧಕರು ಇದೊಂದು ನಿಧಾನಗತಿಯ ವೈರಸ್, ಶರೀರದಲ್ಲಿ ಹಲವು ಕಾಲ ಸುಪ್ತಾವಸ್ಥೆಯಲ್ಲಿದ್ದು ಅನುಕೂಲಕರ ಪರಿಸ್ಥಿತಿ ಅಥವಾ ಪರಿಸರ ದೊರಕಿದ ಕೂಡಲೇ ಬೆಳವಣಿಗೆ ಪಡೆದು ತಲೆ ಎತ್ತುತ್ತದೆಯೆಂದು ಊಹಿಸುತ್ತಾರೆ. ಆದರೆ ಈವರೆಗೆ ತಿಳಿದು ಬಂದಂತೆ ಯಾವದೇಅಂಥ ವಿಶಿಷ್ಟಪ್ರಕಾರದ ವೈರಸ್ಸೂ ಪತ್ತೆಯಾಗಿಲ್ಲ. ಇನ್ನು ಇತರರು, ಆದೊಂದು ಕಡೇ ಪಕ್ಷ ಅನುವಂಶಿಕವಾಗಿರುವ, ಜೀನ್‌ಗಳಲ್ಲಿ ಅಂಶತ ಸೇರಿಕೊಂಡಿರುವ ಸ್ವಭಾವವಾಗಿರಬಹುದೆಂದು ಭಾವಿಸುತ್ತಾರೆ. ನೂರಕ್ಕಿಂತಲೂ ಹೆಚ್ಚು ವೈಜ್ಞಾನಿಕ ಮತ್ತು ರಾಸಾಯನಿಕ ಪ್ರಯೋಗಾಲಯಗಳಲ್ಲಿ ವಿವಿಧ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ದುಡಿಯುತ್ತಿರುವುದು ಈ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆದಿರುವುದಕ್ಕೆ ಸಾಕ್ಷಿಯಾಗಿದೆ. ಈ ಸಂಸ್ಥೆಗಳು ಒಂದಲ್ಲ ಒಂದು ದಿನ ಇದರ ಚಿಕಿತ್ಸೆಯನ್ನು ಶೋಧಿಸದೆ ಇರಲಾರವು.

ಥಾಮಸ್ ಕ್ರೂಕ್ಸ್ ಎಂಬವರು ಮೇರಿಲ್ಯಾಂಡ್‌ನ ಬೆಥೆಸಾದ 'ಸ್ಮರಣ ಶಕ್ತಿಯ ರಹಸ್ಯಗಳ' ಬಗ್ಗೆ ಸಂಶೋಧನೆ ಮತ್ತು ಚಿಕಿತ್ಸೆ ನಡೆಸುವ ಮಹಾಸಂಸ್ಥೆಯ ಅಧ್ಯಕ್ಷರು, ಇವರು ಈ ರೀತಿ ತಿಳಿಸುತ್ತಾರೆ ಕಳೆದ ಹತ್ತು ವರ್ಷಗಳಿಂದೀಚೆಗೆ ನಾವು ಅಲ್ಜೀಮರನ್ನು ಗುರುತಿಸಲು, ಅರ್ಥೈಸಲು ಗಣನೀಯವಾಗಿ ಸಾಮರ್ಥ್ಯ ಹೊಂದುತ್ತ ಬರುತ್ತಿದ್ದೇವೆ. ಮುಂದಿನ ಐದರಿಂದ ಹತ್ತು ವರ್ಷದೊಳಗೆ ಅಲ್ಜೀಮರಿಗೆ ಸೂಕ್ತವಾದ ಮತ್ತು ನಿಜವಾದ ಚಿಕಿತ್ಸೆ ನಡೆಸಲು ಮತ್ತು ತಕ್ಕ ಔಷಧಿಯನ್ನು ಹುಡುಕಿ ಹಿಡಿಯುವುದರಲ್ಲಿ ಯಶಸ್ವಿಗಳಾಗಿಯೇ ತೀರುತ್ತೇವೆ! ಇದು ನನ್ನ ದೃಢವಾದ ವಿಶ್ವಾಸ."

ಒಂಬತ್ತು ವರ್ಷಗಳ ಹಿಂದೆ ಜೇನ್ ಎಂಬಾಕೆ ಅಲ್ಜೀಮರ್‌ನ ಹೆಸರೇ ಕೇಳಿರಲಿಲ್ಲ. ಅವಳ ಪತಿ ಟಾಮ್‌ಗೆ ವಿಚಿತ್ರ ರೀತಿಯ ಗಲಿಬಿಲಿಗಳಾಗ ತೊಡಗಿ ಅದರ ಕಾರಣವೇನೆಂದು ತಿಳಿಯಲಿಲ್ಲ. ಅವಳ ಕುಟುಂಬದ ವೈದ್ಯರಿಗೂ ಆಗ ಏನೂ ಅರ್ಥವಾಗಲಿಲ್ಲ. ಮನೋ ವೈಜ್ಞಾನಿಕರೊಬ್ಬರನ್ನು ಸಂದರ್ಶಿಸಿ ವಿವರಣೆ ಕೇಳಿದಾಗ ಅವರೂ ಸಮಸ್ಯೆಯನ್ನು ತಿಳಿಹೇಳಲು ಅಸಮರ್ಥರಾದರು. ಅವರೆಂದದು ಇಷ್ಟು. "ಎಲ್ಲವೂ ಸರಿಯಾಗಿಯೇ ಇದೆ." ಇಂದು ಆಕೆ ಹಳೆಯ ದಿನಗಳನ್ನು ನೆನಪಿಸಿಕೊಂಡು ಹೇಳುವ ವಿಚಾರ ಇದು."

ಟಾಮ್ ಯಾವತ್ತೂ ಸಭ್ಯಗೃಹಸ್ಥನಾಗಿಯೇ ಇದ್ದವನು. ಅವನ ನಡೆವಳಿಕೆಯಲ್ಲಿ ಶಿಸ್ತು ಇತ್ತು, ತನ್ನ ಕೆಲಸ ಕಾರ್ಯಗಳಲ್ಲೂ ಅಷ್ಟೇ ಪರಿಪೂರ್ಣತೆಯನ್ನು ಸೊಗಸನ್ನು ಅಪೇಕ್ಷಿಸುವವನಾಗಿದ್ದ ಕೈಗಾರಿಕಾ ಇಂಜಿನಿಯರನಾಗಿದ್ದ ಬೇರೆ ಹೀಗಿರುತ್ತ ಅವನ ಸ್ವಭಾವದಲ್ಲಿ ಹಟಾತ್ ಬದಲಾವಣೆ ಪ್ರಾರಂಭವಾಯಿತು. ತನ್ನ ಉದ್ಯೋಗಕ್ಕೆ ಸಂಬಂಧಿಸಿ ಒಂದು ಪ್ರವಾಸಕ್ಕೆ ಹೊರಟವನ್ನು ತನ್ನ ಜತೆಯಲ್ಲಿ ಸೂಟ್‌ಕೇಸ್ ತೆಗೆದು ಕೊಳ್ಳುವುದನ್ನೇ ಮರೆತು ಬಿಟ್ಟಿದ್ದ. ಮಾರ್ಗಮಧ್ಯದಲ್ಲಿ ಹೊಸ ಬಟ್ಟೆಬರೆ ಕೊಂಡು ಕೊಳ್ಳಬೇಕಾಯಿತು. ಮೊದಲೆಲ್ಲ ಅಂಕೆ ಸಂಖ್ಯೆಗಳ ಕೂಡಿಸುವುದು ಕಳೆಯುವುದೆಲ್ಲ ಅವನಿಗೆ ಲೀಲಾಜಾಲವಾಗಿತ್ತು. ಅಂಥವನಿಗೆ ಈಗ

ಅದೊಂದು ಹೋರಾಟದಂತಾಗತೊಡಗಿತ್ತು. ತನ್ನ ಆಯವ್ಯಯದ ಲೆಕ್ಕಗಳನ್ನು ರಾತ್ರಿಯೆಲ್ಲಾ ಕುಳಿತು ಬರೆದರೂ ಸರಿದೂಗಿಸಲು ಸಾಧ್ಯವಾಗುತ್ತಿರಲಿಲ್ಲ. ಬೆಳಗಿನ ಜಾವ ಅಲ್ಲೊಂದು ಅರ್ಥಶೂನ್ಯ ರೇಖೆಗಳ ಗುಂಪು ಕಂಡುಬರುತ್ತಿತ್ತು.

ಆಮೇಲೆ ಬಂತು ಸುತ್ತಾಡುವಿಕೆ-ಫಿಲೆಡೆಲ್ಫಿಯಾ ನಗರದ ಹೊರವಲಯದಲ್ಲಿದ್ದ ಅವರ ಮನೆಯಿಂದ ಖರೀದಿಗಾಗಿ ಹೊರಟವನು ನೆಟ್ಟಗೆ ಫಿಲೆಡೆಲ್ಫಿಯಾ ನಗರದ ದಾರಿ ಬಿಟ್ಟು, ಪಕ್ಕದ ಬೇರೊಂದು ನಗರ ಅಲ್ಟೂನಾದ ಮಾರ್ಗದಲ್ಲಿರುತ್ತಿದ್ದ ಅಥವಾ ಇನ್ನೆಲ್ಲಿಗೋ ಹೋಗಿಬಿಡುತ್ತಿದ್ದ. ರೈಲಿನಲ್ಲಿ ಪ್ರಯಾಣಿಸುತ್ತಿದ್ದರೆ ಇಳಿಯಬೇಕಾದ ಸ್ಟೇಷನ್ನೇ ಮರೆತುಹೋಗುತ್ತಿತ್ತು. ಗಂಟೆಗಟ್ಟಲೆ ಅತ್ತಿಂದಿತ್ತ ಶತಪಥ ಹಾಕುತ್ತಾ ಇದ್ದುಬಿಡುತ್ತಿದ್ದ. ಕ್ರಮೇಣ ಯಾವುದೇ ವಿಚಾರದಲ್ಲೂ ತೀರ್ಮಾನ ಕೈಕೊಳ್ಳಲು ಅವನಿಗೆ ಅಸಾಧ್ಯವೆನಿಸತೊಡಗಿತು. ಒಮ್ಮೆ ತನ್ನ ಚಡ್ಡಿಯಲ್ಲೊಂದ ಕಲೆಯಾಗಿದೆಯೆಂದು ರೆಸ್ಟೋರೆಂಟಿನ ಬಚ್ಚಲಿಗೆ ತೊಳೆಯಲು ಹೋದ. ಹೋಗಿ ಚಡ್ಡಿಗೆ ಬದಲಾಗಿ ಪ್ಯಾಂಟನ್ನೇ ಕಳಚಿ ತೊಳೆಯತೊಡಗಿದ. ಮತ್ತೆ ಪೂರ್ತಿ ಒದ್ದೆಮುದ್ದೆಯಾದ ಬಟ್ಟೆ ತೊಟ್ಟುಕೊಂಡೇ ಹೊರಬಂದ. ಅಂಥಾ ಯದ್ವಾತದ್ವಾ ಕಾರ್ಯಗಳು ಹೆಚ್ಚಾಗತೊಡಗಿ ಏಳು ವರ್ಷಗಳೇ ಸಂದಾಗ ನರರೋಗ ತಜ್ಞರು ಒಬ್ಬರು "ಟಾಮ್‌ಗೆ ಅಲ್ಜೀಮರ್ ಕಾಯಿಲೆ" ಎಂದು ಹೇಳಿದರು.

ಜೇನ್ ಹೇಳುತ್ತಾಳೆ. "ಅಂತೂ ಕಾಯಿಲೆ ಏನೆಂದು ಗೊತ್ತಾದ ಮೇಲೆ ಟಾಮ್‌ನ ವರ್ತನೆಗಳನ್ನು ಸಹಿಸಲು ಸ್ವಲ್ಪ ಸುಲಭವಾಯಿತು," ಹಾಗಿದ್ದರೂ ಅವಳ ದಿನರಾತ್ರಿಗಳು ಅಸಹನೀಯತೆಯ ಪರಾಕಾಷ್ಠೆಗೆ ಮುಟ್ಟುತ್ತಿದ್ದುವು. ಅವನನ್ನು ನೋಡಿಕೊಳ್ಳುವುದಕ್ಕೆ ಅವಳು ತನ್ನೆಲ್ಲ ಸಮಯವನ್ನು ವಿನಿಯೋಗಿಸಬೇಕಾಗುತ್ತಿತ್ತು. ಅವನಿಂದ ಸಾಧ್ಯವಿದ್ದ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಿಸುತ್ತಿದ್ದಳು. ಪದಬಂದ ಜೋಡಣೆಯಂಥ ಬುದ್ಧಿ ಚುರುಕುಗೊಳಿಸುವ ಕಾರ್ಯಗಳು ಜೊತೆಗೆ ತೋಟದಲ್ಲಿ ಬೀಳುವ ತರಗೆಲೆಗಳನ್ನು ಗುಡಿಸಿ ಕೂಡಿಹಾಕುವುದು ಇತ್ಯಾದಿ ಶಾರೀರಿಕ ಶ್ರಮದ ಕೆಲಸಗಳನ್ನು ಸೂಚಿಸುತ್ತಿದ್ದಳು. ಹೊರಗೆ ಹೋಗಬೇಕಾಗಿ ಬಂದರೆ, ತಂದೆಯನ್ನು ಕಾಯುತ್ತ ನೋಡಿಕೊಂಡಿರಲು ತಮ್ಮ ಮಕ್ಕಳಲ್ಲೊಬ್ಬರನ್ನು ನೇಮಿಸುತ್ತಿದ್ದಳು.

"ನನ್ನನ್ನು ಏನಾದರೂ ಕಾರ್ಯದಲ್ಲಿ ತೊಡಗಿಸಿಕೊಳ್ಳಲೇಬೇಕು. ಪತಿಯ ದುಸ್ಥಿತಿಯನ್ನು ನೋಡುತ್ತಾ ಕಾವಲು ಕಾಯುತ್ತಾ ಕುಳಿತಿರುವುದು ತುಂಬಾ ದುಃಖಕರ. ಅವನು ಹಿಂದೆ ಹೇಗಿದ್ದ, ಈಗ ಹೇಗಾದ ಎಂಬುದನ್ನು ಪ್ರತಿಕ್ಷಣವೂ ನೆನೆಯುತ್ತಾ ಅವನ ಬಳಿ ಕುಳಿತಿರುವುದು ಅತ್ಯಂತ ದುಃಖದಾಯಕ ಎಂದುಕೊಳ್ಳುತ್ತಿದ್ದಳು.

ಚಿಕಿತ್ಸಾತಜ್ಞರು ಈ ಕಾಯಿಲೆಗೆ ಬಲಿಯಾದ ವ್ಯಕ್ತಿಯ ಕುಟುಂಬಸ್ಥರ ನೋವನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ರೋಗಿಗೆ ಎಡೆಬಿಡದೆ, ಸತತವಾಗಿ ಮಾರ್ಗದರ್ಶನ ನೀಡುತ್ತಾ ಇರಬೇಕು. ರಾತ್ರಿ-ಹಗಲೆನ್ನದೆ ನೋಡಿಕೊಳ್ಳುವ ಕಾರ್ಯ ಎಂಥವರನ್ನೂ ಧೃತಿಗೆಡಿಸದಿರಲಾರದು. ವೃದ್ಧಾಪ್ಯದ ಬಗ್ಗೆ ಶೋಧನೆ ನಡೆಸುತ್ತಿರುವ, ಫಿಲೆಡೆಲ್ಫಿಯಾದ "ವೃದ್ಧಾಪ್ಯ ಕೇಂದ್ರ"ದ ಸಹನಿರ್ದೇಶಕರಾದ ಎಲೆನ್ ಬಾಡಿಯವರು ಈ ರೀತಿ ವಿವರಿಸುತ್ತಾರೆ: ಆ ರೋಗಿಯನ್ನು ನೋಡಿಕೊಳ್ಳುವ ವ್ಯಕ್ತಿ ಎಲ್ಲ ದೃಷ್ಟಿಕೋನದಿಂದಲೂ ಅತಿ

ಯಾದ ಬಾಧೆಗಳೊಳಗಾಗುತ್ತಾನೆ. ಅವಳ ಅಥವಾ ಅವನ ಜೀವವೇ ಹಿಂಸೆಗೊಳಗಾಗುತ್ತದೆ. ಆ ವ್ಯಕ್ತಿಯ ಪರಿಶ್ರಮಕ್ಕೆ ರೋಗಿಯಿಂದ ಯಾವ ಸಂತಸ ಅಥವಾ ಕೃತಜ್ಞತೆಯ ಪ್ರತಿಕ್ರಿಯೆಮೂಡುವ ಪ್ರಶ್ನೆಯೇ ಇರುವುದಿಲ್ಲ. ಸಹಕಾರ ಎಳ್ಳಷ್ಟೂ ಸಿಗುವ ಸಂಭವವಿರುವುದಿಲ್ಲ. ಇನ್ನು ಪ್ರೀತಿ-ಸ್ನೇಹದ ಮಾತೆಲ್ಲಿಯದು? ಈ ಕಾರಣದಿಂದಲೇ ನೋಡಿಕೊಳ್ಳುವ ವ್ಯಕ್ತಿಯ ಆಯುಷ್ಯವೇ ಕರಗಿಹೋದಂತೆ, ಕುಂಠಿತಗೊಂಡಂತೆ ಭಾಸವಾಗತೊಡಗುತ್ತದೆ.

ರೋಗಿಯ ಕುಟುಂಬದ ಸದಸ್ಯರ ಮನದೊಳಗೆ ಸುಪ್ತವಾಗಿದ್ದ ಅತೃಪ್ತಿ, ಅಶಾಂತಿಗಳ ಹಳೆಯ ಸಮಸ್ಯೆಗಳು ಈಗ ಭುಗಿಲೇಳುತ್ತವೆ. ಮಕ್ಕಳು ಹೆಣ್ಣಾಗಲಿ ಗಂಡೇ ಇರಲಿ ತಮ್ಮ ತಂದೆ ತಾಯಿಯರ ಜತೆ ಹೊಂದಿಕೊಳ್ಳಲು ಅಸಮರ್ಥರಾಗುತ್ತಾರೆ. ಅವರ ಪ್ರೀತಿಯ ಋಣವನ್ನು ತೀರಿಸಲಾಗದ ಖೇದ ಒಂದೆಡೆಯಾದರೆ, ಅಪರಾಧಿಪ್ರಜ್ಞೆ ಕಾಡುವುದು ಇನ್ನೊಂದೆಡೆ.

ಜೀವನ ಸಂಗಾತಿಗಳಂತೂ ತೀವ್ರ ಅಸಮಾಧಾನ, ರೋಷಗಳಿಗೆ ಒಳಗಾಗುತ್ತಾರೆ. ಅತ್ಯಂತ ದುಃಖಿಗಳೂ ಆಗುತ್ತಾರೆ. ಗಂಡ ಹೆಂಡಿರಲ್ಲಿ ಯಾರೊಬ್ಬರು ರೋಗಿಯಾದರೂ ತಮ್ಮ ಬಾಳ ಸಂಗಾತಿಯ ಕೊನೆಮೊದಲಿಲ್ಲದ ಬೇಡಿಕೆ, ಆಗ್ರಹಗಳಿಂದ ಬೇಸತ್ತು ಹೋಗುತ್ತಾರೆ, ಅದುವರೆಗಿನ ಅವರ ಸುಂದರ ಜೀವನದ ಬಂಗಾರದ ದಿನಗಳು ಗ್ರಹಣಗ್ರಸ್ತವಾದಂತೆಯೇ. ಅಷ್ಟೇಕೆ ಮತ್ತೆ ಪುನಃ ಕಾಣುವ ಆಸೆಯೇ ವ್ಯರ್ಥ. ಅವರು ಭಾವನಾತ್ಮಕವಾಗಿಯೂ, ಶಾರೀರಿಕವಾಗಿಯೂ ಹಿಂಡಿ ಹಿಪ್ಪೆಯಾಗುತ್ತಾರೆ. ಮತ್ತು ತಾವೇ ಕಾಯಿಲೆಗೀಡಾಗುತ್ತಾರೆ. ಪತ್ನಿಯೊಬ್ಬಳು ಗಂಡನ ಬಗ್ಗೆ ಸಿಟ್ಟಾಗುದೇನೂ ಆಶ್ಚರ್ಯವಲ್ಲ. ತನ್ನ ವರ್ತನೆಯನ್ನವನು ತಿದ್ದಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾನೆಂದು ಗೊತ್ತಿರುವುದರಿಂದ, ಆಕೆ ತನ್ನ ಮೇಲೆ ಆಕ್ರೋಶಗೊಳ್ಳಬಹುದು.

ಅಲ್ಜೀಮರ್ ರೋಗಿಗಳಲ್ಲಿ ಪ್ರತ್ಯೇಕ ವ್ಯಕ್ತಿಗೆ ಪ್ರತ್ಯೇಕವೇ ಆದ ಛಿದ್ರ ಕೇಂದ್ರಗಳಿರುತ್ತವೆ. ಮೊದಲಿದ್ದ ಸ್ವಭಾವವು ಛಿದ್ರಗೊಂಡು ಹೊಸತಾದ ಇಲ್ಲವೇ ದಮನಕ್ಕೊಳಗಾಗಿ ಸುಪ್ತವಾಗಿದ್ದ ಸ್ವಭಾವ ಕೇಂದ್ರಗಳು ಜಾಗೃತಗೊಳ್ಳುತ್ತವೆ"–ಹೀಗೆಂದು ಬ್ರ್ಯಾಡಿಯವರು ಅಭಿಪ್ರಾಯ ಪಡುತ್ತಾರೆ.

ಕೊನೆಯ ಹೆಜ್ಜೆ—

ಅಲ್ಜೀಮರ್ ರೋಗಿಗಳ ಕುಟುಂಬ ಬಹಳ ಜಟಿಲವಾದ ಆರ್ಥಿಕತೆ ಮುಗ್ಗಟಿನಲ್ಲಿ ಮತ್ತು ಕಾನೂನಿನ ತೊಡಕಿನಲ್ಲಿ ಸಿಕ್ಕಿಬೀಳುವುದು ಹೆಚ್ಚಾಗಿ ಕಂಡುಬರುತ್ತದೆ. ಅತ್ಯಂತ ಸಮರ್ಪಣಾಭಾವದ, ಸ್ನೇಹಪರ ಕುಟುಂಬದವರೂ ಕಟ್ಟಕಡೆಗೆ ಅಲ್ಜೀಮರ್ ರೋಗಿಯನ್ನು ನರ್ಸಿಂಗ್ ಹೋಮ್‌ಗೆ ಸೇರಿಸುವುದೊಂದೇ ಉಳಿದಿರುವ ಏಕೈಕ ಮಾರ್ಗವೆಂದು ಪರಿಗಣಿಸುವ ದಿನ ಬಂದುಬಿಡುತ್ತದೆ. ಇದೊಂದು ಕಠಿಣವಾದ ನಿರ್ಣಯವೇ. ಅದಕ್ಕೆ ಕುಟುಂಬದೊಳಗೆ ಪರಸ್ಪರ ವಿರೋಧವೂ ಸಾಮಾನ್ಯ.

ನ್ಯೂಜರ್ಸಿಯ "ಕೀನ್ ಕಾಲೇಜ್"ನ ವೃದ್ಧಾಪ್ಯ ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳ ಅಧ್ಯಯನ ಕಾರ್ಯಕ್ರಮಗಳ ನಿರ್ದೇಶಕರಾಗಿದ್ದ ರಾಬರ್ಟ್ ಫೆಮಿಂಗ್ ಹೆಟೀಯವರ ಅಭಿಪ್ರಾಯದಂತೆ ಈ ರೋಗಿಯ ಬಗ್ಗೆ ಮನೆಯವರೆಲ್ಲ ಸೋತು

ರೋಸಿಹೋದಾಗ, ಅನ್ಯಮಾರ್ಗವೇ ಇಲ್ಲವೆಂದು ಮನದಟ್ಟಾದರೆ ಮಾತ್ರ ಈ ಕಟ್ಟಕಡೆಯದಾದ ನಿರ್ಣಯ ಮಾಡಬೇಕಷ್ಟೆ.

ಈಗ ಏಳುಗಂಟೆ. 'ರೀ' ಊಟ ಮುಗಿಸಿದ್ದಾಳೆ. ಅವಳು ಪ್ರಸನ್ನತೆಯಿಂದಿದ್ದಾಳೆ. ಅವಳ ಪಕ್ಕದಲ್ಲೇ ಅವಳ ತರುಣ ಪುತ್ರ ನಿಂತಿದ್ದಾನೆ. ಅವನೂ ಪ್ರತಿಯಾಗಿ ಮುಗುಳು ನಗುತ್ತಿದ್ದಾನೆ—"ಈಗೇನಾಗುತ್ತೆ ಗೊತ್ತಿಲ್ಲ ನಿಂಗೆ?" ನೀನೀಗ ಒಂದು ಸುಂದರ ಬೊಂಬೆಯಂತೆ ಕಾಣುತ್ತೀಯೆ ನೋಡಮ್ಮಾ ಇರು.

ಯುವಕ ತನ್ನ ಪ್ಲಾಸ್ಟಿಕ್ ಚೀಲದಿಂದ ಒಂದೊಂದಾಗಿ ಪೌಡರ್, ಸ್ನೋ, ಹನಿ ಹನಿಯಾಗಿ ಪರಿಮಳ ಬೀರುವ ಸಿಂಪಡಿಸುವ ಪಿಚಕಾರಿ ಎಲ್ಲ ಸೌಂದರ್ಯ ಪ್ರಸಾದನಗಳನ್ನೂ ಹೊರತೆಗೆದು ಆಕೆಯ ಹಾಸಿಗೆಯ ಮೇಲಿರಿಸುತ್ತಾನೆ. ಮುಖಕ್ಕೆಲ್ಲ ಕ್ರೀಮ್ ಬಳಿಯುತ್ತ, "ಇದು ನಿನ್ನ ಮೆಚ್ಚಿನ ಸ್ನೋ" ಎನ್ನುತ್ತಾ ಎರಡೂ ಗಲ್ಲಗಳಿಗೆ ಗುಲಾಬಿ ಬಣ್ಣ ಹಚ್ಚಿ ತೆಳುವಾಗಿ ಪೌಡರ್ ಸವರುತ್ತಾನೆ. ಬ್ರಶ್ಶಿನಿಂದ ಸಮಗೊಳಿಸುತ್ತಾನೆ. ಹಣೆ, ಗದ್ದಗಳಿಗೂ ಮೃದುವಾಗಿ ಬ್ರಶ್ಶಿನಿಂದ ಪೌಡರ್ ಉದುರಿಸಿ ಮೆಲ್ಲನೆ ನೀವುತ್ತಾನೆ. ಅವಳ ಮೂಗಿಗೆ ಸಮೀಪ ಸುಗಂಧದ ಹನಿಗಳ ತುಂತುರು. ಮತ್ತೆ ಸ್ವಲ್ಪ ಹಿಂದೆ ಬಂದು ನಿಂತು "ಈಗ ನೋಡು, ನೀನು ಎಷ್ಟು ಚೆನ್ನಾಗಿ ಕಾಣಿಸ್ತಾ ಇದ್ದಿ! ತುಂಬಾ ಚೆಂದ ಇದ್ದೀ ಅಲ್ವಾ?" ಎನ್ನುತ್ತಾನೆ. ಅವಳ ಉತ್ತರವನ್ನೇನೂ ಆತ ಅಪೇಕ್ಷಿಸುವುದಿಲ್ಲ.

ತರುಣನ ಹೆಸರು ಬಿಲ್. ಅವಳ ಮಗ ಕಳೆದ ಒಂಬತ್ತು ವರ್ಷಗಳಿಂದ ಈ ಕ್ರಮದ ಪರಿಪಾಲನೆ–ಒಂದು ದಿನವೂ ತಪ್ಪದಂತೆ ನಡೆಸಿಕೊಂಡು ಬಂದಿದ್ದಾನೆ. ಅವನ ತಾಯಿಗೆ ಅಲ್ಜೀಮರ್ ಕಾಯಿಲೆ. ಅವಳು ಅತ್ತಿತ್ತ ನಡೆಯಲಾರಳು, ಮಾತೂ ಆಡಲಾರಳು. ತಾನೇ ಉಣ್ಣಲಾರಳು. ಆದರೆ ಸಹನೆಯಿಲ್ಲದವಳು. "ತನ್ನ ಪ್ರತಿದಿನದ ಭೇಟಿ ಅವಳ ಮೇಲೊಂದು ವಿಶೇಷ ಪರಿಣಾಮ ಬೀರುತ್ತದೆ" ಎಂದು ಬಿಲ್‌ಗೆ ಅನಿಸುತ್ತದೆ. ನರ್ಸಿಂಗ್ ಹೋಂನ ಸಿಬ್ಬಂದಿಯವರೂ ಆಶ್ಚರ್ಯಚಕಿತರಾಗುತ್ತಾರೆ. ಕೇಯಂತೆ ಸಂಪೂರ್ಣವಾಗಿ ಕೆಟ್ಟುಹೋದ ಮಿದುಳಿರುವ ಯಾವದೇ ಸ್ತ್ರೀ ತನ್ನ ಮಗನ ಪ್ರೀತಿಗೆ ಪ್ರತಿಕ್ರಿಯೆ ತೋರಿಸಬಲ್ಲಳೇ?

ಬಿಲ್ ಹೇಳುತ್ತಾನೆ—"ಬಹಳ ಕಾಲ ಹಿಂದೆ, ತಾಯಿ ಮನೆಯಲ್ಲೇ ಇದ್ದಾಗ ನಾನು ಹೋದಲ್ಲೆಲ್ಲ ನನ್ನ ಹಿಂದೆ ಅಳುತ್ತಾ ಬರುತ್ತಿದ್ದಳು. ಆಗ ಆಕೆಗೆ ನಾನು ಹೇಳುತ್ತಿದ್ದೆ. "ಅಗಲಮ್ಮಾ, ನೀನು ಹೇಗಾದರೂ ಇರು. ಚಿಂತೆ ಪಡಬೇಕಾಗಿಲ್ಲ. ನಾನಿಲ್ಲವೇ?" ಎಂದು ಅವಳನ್ನು ಸಮಾಧಾನ ಪಡಿಸುತ್ತಾ ಇದ್ದೆ.

ನಾನವಳಿಗೆ ವಾಗ್ದಾನ ಮಾಡಿದೆ. "ಕೊನೆವರೆಗೂ ನೀನು ಘನತೆಗೌರವಗಳಿಂದ ಇರುವಂತೆ ನೋಡಿಕೊಳ್ಳುತ್ತೇನೆ" ಎಂದು. "ಒಂಬತ್ತು ವರ್ಷಗಳ ಹಿಂದಿನ ವಾಗ್ದಾನವದು! ಆ ವಾಗ್ದಾನವನ್ನು ಮುಂದೆಯೂ ಪಾಲಿಸಿಕೊಂಡೇ ಬರುತ್ತೇನೆ. ಇದು ನನ್ನ ಅಚಲ ನಿರ್ಧಾರ."

---

# ಪುಸ್ತಕ ಪರಿಚಯ

**ಡಾ|| ಶ್ರೀಪಾದ ಶೆಟ್ಟಿ**

**'ಕುವೆಂಪು ಅವರ ಕೊನೆಯ ದಿನಗಳು'**—ಲೇಖಕರು : ದೇಜಗೌ ; ಪ್ರಕಾಶಕರು : ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಪುಟಗಳು–೮೦.

**ಕು**ವೆಂಪು ಒಂದು ಅದ್ಭುತ ಕೃತುಶಕ್ತಿ. ಸದಾ ಭೋರ್ಗರೆವ ಘನವಾರಿಧಿ. ಚಿಕ್ಕಪುಟ್ಟ ತೊರೆಗಳಿಗೂ ಭರತದಲ್ಲಿ ನೀರು ನೀಡುವ ಸಾಗರ, ನಮ್ಮ ನಡುವೆ ಬಾಳಿ ಬೆಳಗಿದ ಮಹಾ ಚೇತನ. ಈ ಮಲೆಯಣಗದಮ್ಮನ ಸುಳಿದಳಿರೆಲೆಯ ಪೀಪಿಯ ಗಾನದಿಂಡಿಗೆ ಇಡಿ ಮಲೆನಾಡಿನ ಪ್ರಕೃತಿ, ಕನ್ನಡನಾಡಿನ ಸುಕೃತಿ ತೆರೆದುಕೊಂಡಿತು. ಗಿಳಿ, ಗುಬ್ಬಿ, ಗೊರವಂಕ, ಏಂಚುಳ್ಳಿ, ಕೋಗಿಲೆ ಕಾಜಾಣ ಗಳ ಕೂಜನವೆ ಕವನವಾಗಿಸಿದ ಈ ಸಂತನ ನುಡಿಗೆ ಇಡಿ ನಾಡಿನ ನಾಡಿಯೆ ಮಿಡಿಯಿತು. ಕುವೆಂಪು ಬಗ್ಗೆ ಆಲೋಚಿಸುವಾಗೆಲ್ಲ ಪಶ್ಚಿಮ ಘಟ್ಟಗಳಲ್ಲಿ ದಟ್ಟ ವನಸಿರಿಯ ನಡುವೆ ಹರಿವ ತಂಪು ನೀರಿನ ತುಂಬು ನದಿ, ಹೆಮ್ಮರಗಳಿಂದ ನಿಬಿಡವಾಗಿರುವ ಕಾಡು ನೆನಪಾಗುತ್ತದೆ. ಮಲೆನಾಡಿನ ಮಣ್ಣು ತಾನೆ ತಾಯಿಯಾಗಿ ತನ್ನ ಸಮಸ್ತ ಶಕ್ತಿಯನ್ನು ಸಮಷ್ಟಿಯ ಧ್ವನಿಯಾಗವಂತೆ ತಾರೆಗಳ ಬೆಳಗಾಗುವಂತೆ ಕಸ್ತೂರಿಯ ಕಂಪಾಗುವಂತೆ ಕುವೆಂಪುವನ್ನು ಹೆತ್ತು ಕೃತಾರ್ಥಳಾದವಳು ಮಲೆನಾಡಿನ ಮಣ್ಣಿನ ಮಗ ಕುವೆಂಪು ಗಿಡವಾಗಿ ಮರವಾಗಿ ಬಯಲು ಸೀಮೆಯ ಮೈಸೂರಿನಲ್ಲಿ ಹೆಮ್ಮರವಾಗಿ ವಿಶ್ವ ಮಾನವತೆಯ ಗಂಧ ಕೇಸರಗಳನ್ನು ಜಗದ ಮೂಲೆ ಮೂಲೆಗೆ ತೂರಿದ ಮಹಾನ್ ವೃಕ್ಷವಾಗಿ ಬೆಳೆದರು. ತನ್ನೊಂದಿಗೆ ತನ್ನ ಪರಿಸರವನ್ನು ತನ್ನ ಸಂಪರ್ಕಕ್ಕೆ ಬಂದವ ರನ್ನು ಹಾಗೆ ಇಡಿ ಸಮುದಾಯವನ್ನು ಬೆಳೆಸಿದರು, ಬೆಳಗಿದರು.

ನಾವು ಆರಂಭದ ಬಗ್ಗೆ ಅಷ್ಟು ಉತ್ಸುಕ ರಾಗಿರುವದಿಲ್ಲ. ಹುಟ್ಟಿನ ಬಗ್ಗೆ ಯಾ ಕುತೂಹಲ ತಾಳುವದಿಲ್ಲ..ಬೆಳವಣಿಗೆಯನ್ನು ಗಮನಿಸುತ್ತೇವೆ. ಬೀಜ ಮೊಳೆವಾಗ ಗಿಡವಾದಾಗ ಗ್ರಹಿಸದ ನಾವು ಅದು ಹೂ ಬಿಟ್ಟಾಗ ನೋಡುತ್ತೇವೆ. ಅದು ಹಣ್ಣು ಗಳಿಂದ ತಲೆಬಾಗಿ ನಿಂತಾಗ ಬಳಿಸಾರುತ್ತೇವೆ. ಯಥೇಚ್ಛ ತನಿವಣ್ಣುಗಳನ್ನು ತಿಂದು ಸಂತೃಪ್ತಿಯ ತೇಗನ್ನು ತೇಗುತ್ತೇವೆ. ಮತ್ತೆ ಶಿಶಿರದಲ್ಲಿ ಆ ಮರ ಎಲೆಯುದುರಿ ಬೋಳಾಗಿ ನಿಂತಾಗ ಅತ್ತ ಮುಖ ಹಾಕುವುದಿಲ್ಲ. ಆ ಮರ ನಮಗೆ ನೀಡಿದ ತನಿವಣ್ಣುಗಳನ್ನು ನೆನಪು ಮಾಡಿಕೊಳ್ಳುವುದಿಲ್ಲ. ಇನ್ನೆಲ್ಲೊ

ಹಣ್ಣು ನೀಡುವ ಮರ ಹುಡುಕುತ್ತಾ ಹೋಗುತ್ತೇವೆ. ಮರೆವು ಪ್ರಜ್ಞಾ ಪೂರ್ವಕವಾದ ಮರೆವು, ಹಾಗೆ ಕೃತಜ್ಞತೆ ಇವು ನಾವು ರೂಢಿಸಿಕೊಂಡ ಪ್ರವೃತ್ತಿಗಳು. ಈ ಬಗೆಯ ಗುಣಗಳು ಸಾರ್ವತ್ರಿಕವಾಗಿರುವ ಸಂದರ್ಭದಲ್ಲಿಯೂ ಹಣ್ಣಿನ ಸವಿಯನ್ನು ಮರೆಯದವರು, ಅವನ್ನು ಮೆಚ್ಚುವ ಆ ಮರವನ್ನು ಕೃತಜ್ಞತೆಯಿಂದ ನೆನೆಯುವವರು ಇರುತ್ತಾರೆ. ಅವರು ಉಪಕೃತ ಮನೋಭಾವದವರು ಉಪಕಾರಶೀಲರೂ ನಯ– ವಿನಯ ಸಂಪನ್ನರೂ ಆಗಿರುತ್ತಾರೆ. ಕುವೆಂಪು ಎಂಬ ಈ ಮಹಾಮರದ ಮಾಮರದ ನೆರಳಿನಲ್ಲಿ ತಂಗಿದವರು ಅವರ ಪರಿಪಕ್ವ ಜ್ಞಾನದ ತನಿವಣ್ಣು ತಿಂದು ಸಂತೃಪ್ತಿಯನ್ನುಂಡವರು ಬಹಳ ಜನರಿದ್ದಾರೆ. ಕುವೆಂಪು ಅವರ ಶಿಷ್ಯರಾಗಿ ಹಾಗೆ ಹೇಳಿಕೊಳ್ಳುವುದೆ ತಮ್ಮ ಬಾಳಿನ ಸೌಭಾಗ್ಯ ಎಂಬ ತಿಳುವಳಿಕೆ ಹೊಂದಿದವರಾಗಿ ಕ್ರಿಯಾಶೀಲರಾಗಿರುವವರು ಕನ್ನಡದ ದಂಡನಾಯಕ ದೇ. ಜವರೇಗೌಡರು, ಅವರು ಸದಾ ತುಂಬಿ ಹರಿಯುವ ಮಹಾನದಿ. ಕುವೆಂಪು ಅವರ ಸಾನಿಧ್ಯದಲ್ಲಿ ಸಾಮಿಪ್ಯದಲ್ಲಿ ತಮ್ಮ ಆವಾಸ ಸ್ಥಾನವನ್ನು ನೆಲೆಗೊಳಿಸಿಕೊಂಡವರು. ಆ ಜೀವ ನದಿಯ ಸ್ಫಟಿಕ ಜಲವನ್ನು ಮನಸಾರೆ ಕುಡಿದು ಜ್ಞಾನತೃಷೆಯನ್ನು ಹಿಂಗಿಸಿಕೊಂಡವರು ಆ ಪುಣ್ಯವಾಹಿನಿಯ ತೀರ್ಥ ಜಲದಲ್ಲಿ ಮಿಂದು ಮೇಲೆದ್ದು ಕೃತಕೃತ್ಯರಾದವರು ಕೃತಾರ್ಥತೆಯನ್ನು ಕಂಡವರು. ಕ್ಷಣಕ್ಷಣಕ್ಕೂ ಹೊಸ ನೀರನ್ನು ತುಂಬಿ ಹರಿವ ಆ ನದಿಯ ಒಡಲಲ್ಲಿ ಪ್ರೀತಿಯ ದೋಣಿಯಲ್ಲಿ ಕುಳಿತು ತೇಲಿದವರು ಅವರು. ಕುವೆಂಪು ಅವರ ಬಾಳಿನ ಕೊನೆಯ ದಿನಗಳನ್ನು ಶಕ್ತ ಗದ್ಯದ ಮೂಲಕ ಕನ್ನಡ ಕುವರರ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ.

ವ್ಯಕ್ತಿಯ ಪ್ರವರ್ಧಮಾನ ಸ್ಥಿತಿಯಲ್ಲಿ ಅಧಿಕಾರದ ಉತ್ತುಂಗಕ್ಕೇರಿದ ಸಂದರ್ಭದಲ್ಲಿ ಬೆಲ್ಲದ ಪೆಂಟೆಗೆ ಮುತ್ತುವ ನೊಣದಂತೆ ಆತನ ಸುತ್ತಮುತ್ತ ಸುತ್ತಾಡುವ ಜನ ಆತ ಅಧಿಕಾರ ಕಳೆದುಕೊಂಡಾಗ ಮುಪ್ಪಡರಿ ಹಣ್ಣಾಗಿ ಅಸಹಾಯಕನಾದಾಗ ಅತ್ತ ಸುಳಿಯುವುದಿಲ್ಲ. ಆತನ ಕೊನೆಯ ದಿನಗಳು ಸನ್ನಿಹಿತವಾಗುವ ಸಂಗತಿ ಆಗಿದ್ದರೂ ಅವಜ್ಞೆಯಿಂದಿರುವುದನ್ನು ಮರೆಯುವುದಿಲ್ಲ. ಆತ ಕೊನೆಗೊಂಡಾಗ ಒಮ್ಮೆ ಬಂದು ಕಂಬನಿದುಂಬಿ ನಿಂದು ಮಾತಾಡಿ ಮುಂದೆ ಹೋದವರೆ ಮರೆತು ಬಿಡುತ್ತಾರೆ. ಆದರೆ ದೇಜಗೌ ಅವರು ಕುವೆಂಪು ಅವರ ಗುರುತ್ವವನ್ನು ತ್ರಿಕರಣದಿಂದ ಒಪ್ಪಿಕೊಂಡವರು. ಹಾಗೆ ಕುವೆಂಪು ಈಗ ಭೌತಿಕವಾಗಿ ನಮ್ಮ ನಡುವೆ ಇಲ್ಲದೆ ಕೀರ್ತಿಕಾಯರಾಗಿರುವಾಗಲೂ ಅವರ ಗುರುತ್ವಾಕರ್ಷಣೆಯ ಕಕ್ಷೆಯಲ್ಲಿಯೆ ಉಳಿದುಕೊಂಡು ತಮ್ಮ ಕ್ರಿಯಾಶೀಲತೆಯನ್ನು ಮೆರೆದವರು.

ಒಬ್ಬ ಮಹಾಕವಿ, ವಿಶ್ವಮಾನವ, ದಾರ್ಶನಿಕ, ಕನಸುಗಾರ, ಶಿಕ್ಷಣದ ಶಿಲ್ಪಿ, ಮಾನವ್ಯದ ಮಹೋನ್ನತ ವ್ಯಕ್ತಿ ತನ್ನ ಕೊನೆಯ ದಿನಗಳನ್ನು ಕಳೆದ ಬಗೆಯನ್ನು ದೇಜಗೌ ತಾವು ಬರೆದ ದಿನಚರಿಯ ಆಧಾರದೊಂದಿಗೆ ಕುವೆಂಪು ಒಡನಾಟದ ಅನುಭವದೊಂದಿಗೆ ಸಮುದಾಯದ ಪ್ರತಿಕ್ರಿಯೆಯ ನೆರವಿನೊಂದಿಗೆ ರೂಪಿಸುವ ಬಗೆ ಹೊಸದಾಗಿದೆ. ರಂಗಸ್ಥಳದಲ್ಲೇ ಇದ್ದವನು. ತನ್ನ

ಪಾತ್ರವನ್ನಾಗಲಿ ತನ್ನ ಎದುರಿಗಿರುವ ಪಾತ್ರವನ್ನಾಗಲಿ ಸಮೀಕ್ಷಿಸುವುದು, ವಿಮರ್ಶಿಸುವದು ಕಷ್ಟದ ಕೆಲಸ. ದೇಜಗೌ ಅವರು ರಂಗದಲ್ಲಿದ್ದು ರಂಗಸ್ಥಳದ ವಿದ್ಯಮಾನಗಳನ್ನು ರಂಗದೊಂದಿಷ್ಟು ದೂರನಿಲ್ಲುವ ತಮ್ಮ ಒಳಗಣ್ಣಿನ ನೋಟದಿಂದ ಕಂಡಿರಿಸುವ ಬಗೆ ಹೃದ್ಯವಾಗಿದೆ.

'ಲೋಕದಲ್ಲಿ ಸತಿ ನಿತ್ಯದಲ್ಲಿ ಭಗವತಿ' ಎಂದು ನಂಬಿದ ತಮ್ಮ ಪತ್ನಿ ಹೇಮಾವತಿಯನ್ನು ಕಳೆದುಕೊಂಡ ಬಳಿಕ ಹೇಮಾವತಿಯ ಗಂಡ ಕವಿ ಕುವೆಂಪು ಅನುಭವಿಸಿದ ನೋವನ್ನು ಮನೋವೇದನೆಯನ್ನು ದೇಜವರೇಗೌಡರು ಅತ್ಯಂತ ಆಪ್ತವಾಗಿ ಚಿತ್ರಿಸಿದ್ದಾರೆ. ಅರ್ಧಾಂಗಿಯನ್ನು ಕಳೆದುಕೊಂಡ ಅವರು ಅರ್ಧಾಂಗವಾಯುವಿನಿಂದ ಜರ್ಜರಿತರಾದುದಲ್ಲದೆ ತಾವು ಆ ಕಡೆಗೆ ತಮ್ಮ ಪಯಣದ ಸಿದ್ಧತೆಯನ್ನು ನಡೆಸಿದ ಬಗೆಯನ್ನು ಲೇಖಕರು ಹಂತ ಹಂತವಾಗಿ ಚಿತ್ರಿಸಿದ್ದಾರೆ. ಕುವೆಂಪು ಅವರ ಕೃತಿಗೆ ಕೃತುಶಕ್ತಿಗೆ ಅವರ ಪತ್ನಿ ಹಿನ್ನೆಲೆಯಾಗಿ ನಿಂತ ಬಗೆ ರಾಮಾಯಣ ದರ್ಶನದಲ್ಲಿ ಊರ್ಮಿಳೆ, ಅನಲೆ, ಮಂಡೋದರಿ ಮೊದಲಾದ ಪಾತ್ರಗಳ ಬಾಯಲ್ಲಿ ಹೊರಸೂಸುವ ಕಾವ್ಯದ ಸಾಲುಗಳಿಗೆ, ಹೇಮಾವತಿ ಕಾರಣರಾಗಿರುವುದನ್ನು ಲೇಖಕರು ನೆನಪು ಮಾಡಿಕೊಟ್ಟಿದ್ದಾರೆ.

ಕುವೆಂಪು ಅವರನ್ನು ಬೇರೆ ಬೇರೆ ದಿನಗಳಲ್ಲಿ ಹೋಗಿ ಕಂಡಾಗಿನ ಅವರ ಮನಃಸ್ಥಿತಿ ಅವರ ಮುಖಭಾವ ಪ್ರತಿಕ್ರಿಯೆ, ಪ್ರತಿಸ್ಪಂದನಗಳನ್ನು ದಿನಾಂಕದೊಂದಿಗೆ ದಾಖಲಿಸುವಾಗಲೂ ಅದನ್ನು ಒಂದು ಇತಿವೃತ್ತವಾಗಗೊಡದೆ ಕುವೆಂಪು ಒಡನಾಟದ ಸುಂದರ ಕ್ಷಣಗಳನ್ನಾಗಿ ಕುವೆಂಪು ಚೇತನದಲ್ಲಿ ಮಿಂಚಿದ ಮಿಂಚನ್ನಾಗಿ ಲೇಖಕರು ನಿರೂಪಿಸಿದ್ದಾರೆ. ಲೇಖಕರು ಒಂದೊಂದು ದಿನ ಹೋಗಿ ಕಂಡಾಗಲೂ ಕವಿ ಅವರಿಗೆ ಬೇರೆ ಬೇರೆಯಾಗಿಯೆ ಕಂಡಿದ್ದಾರೆ. "ಇದು ನಿಚ್ಚಂ ಪೊಸತು ಪೊಸತಿದು ಅರ್ಣವಂ ಬೋಲ್ ಅತಿ ಗಂಭೀರಂ! ಎಂಬ ಹಾಗೆ.

ಹಿರಿಕೊಡಿಗೆಯ ಸಂದೇಶ ಭವನದ ದರ್ಶನಕ್ಕೆ ಮಗಳು ತಾರಿಣಿಯ ಸಮ್ಮತಿಯಿಂದ ಖುಷಿಗೊಂಡು ಹೆಲಿಕ್ಯಾಪ್ಟರನಲ್ಲಿ ಹೋಗಿ ಬಂದರು ಕುವೆಂಪು. ಆ ಜಾಗ ಒಂದು ತಿಪ್ಪೆಯಾಗಿ ಉಳಿಯದೆ ನವಚೈತನ್ಯ ತುಂಬಿಕೊಂಡಿದ್ದನ್ನು, ಅಲ್ಲಿ ನೆಂಟರಿಷ್ಟರನ್ನು ಕಂಡಿದ್ದನ್ನು, ಅಲ್ಲಿ ಪುಟ್ಟಯ್ಯನಾಯ್ಕರ ಮತ್ತು ತಾಯಿಯ ನೆನಪಾದುದನ್ನು ಇಲ್ಲಿ ವಿವರಿಸಲಾಗಿದೆ. ಅದನ್ನು ನೋಡಿದರೆ ಹೇಮಾವತಿಯವರಿಗೂ ಸಂತೋಷವಾಗುತ್ತಿತ್ತು ಎಂದು ಭಾವಪರವಶರಾಗಿ ಕುವೆಂಪು ಮಾತನಾಡಿದ್ದನ್ನು ಲೇಖಕರು ಬರೆದಿದ್ದಾರೆ. ಆ ಬಳಿಕ ಮತ್ತೆ ಅವರು ಉದಯರವಿ ಬಿಟ್ಟು ಹೊರಗೆ ಹೋಗಲಾಗಲಿಲ್ಲ. ಆಮೇಲೆ ಲೇಖಕರು ಬೇರೆ ಬೇರೆ ವ್ಯಕ್ತಿಗಳು ಬಂದು ಭೆಟ್ಟಿಯಾದಾಗಿನ ಸಂದರ್ಭ, ಕುವೆಂಪು ಅವರ ಪ್ರತಿಕ್ರಿಯೆ ಅವರ ಆಸಕ್ತಿ, ಅನಾಸಕ್ತಿ, ಅಂತರ್ಮುಖತೆ ಧ್ಯಾನಲೀನರಾಗುವಿಕೆಯನ್ನು ಇಲ್ಲಿ ಚಿತ್ರಿಸಿದ್ದಾರೆ.

ಕವಿ ಚೇತನ ಪ್ರಕೃತಿಯ ಪ್ರಾಣಿಗಳು, ಜಿರಾಫೆಯ ಮರಿ. ಹಾರುವ ತಟ್ಟೆ ಭಾರತದ ರಾಜಕೀಯ ವಿದ್ಯಮಾನ, ಇವುಗಳ ಬಗೆಗೆ ಅವರು ಪತ್ರಿಕೆ ಓದಿಸಿ ಅಥವಾ ದೂರದರ್ಶನ ನೋಡಿ ಸ್ಪಂದಿಸುತ್ತಿದ್ದ ಬಗೆಯ ನಿರೂಪಣೆ ಈ ಕಿರುಹೊತ್ತಿಗೆಯಲ್ಲಿ ಚೆನ್ನಾಗಿ

ಮೂಡಿ ಬಂದಿದೆ. ಪತ್ನಿ ವಿಯೋಗದ ನಂತರ ಅವರ ಕಾರಯಿತ್ರೀ ಪ್ರತಿಭೆ ಸ್ಥಗಿತಗೊಂಡಿದ್ದನ್ನು ಭಾವಯಿತ್ರಿ ಪ್ರತಿಭೆ ಜಾಗ್ರತವಾಗಿರುವುದನ್ನು ದೇಜಗೌ ಇಲ್ಲಿ ದಾಖಲಿಸಿದ್ದಾರೆ.

ಲೇಖಕರನ್ನು ಕುವೆಂಪು ಗುರುತಿಸುವ ಬೇರೆ ಬೇರೆ ರೀತಿಗಳಲ್ಲಿ ಮಾತಿಲ್ಲದ ಮೌನ ದಾಟಿಯ ಅವರ ಪ್ರೀತಿಯ ಬಗ್ಗೆ ಊಟ ಉಪಚಾರದಲ್ಲಿ ನಿತ್ಯದ ದಿನಚರಿಯಲ್ಲಿ ಉಡುಪಿನಲ್ಲಿ ಕುವೆಂಪು ಅವರು ಹೇಗಿದ್ದರು ಹೇಗಾದರು ಎಂಬುದನ್ನು ಬಣ್ಣಿಸಿದ್ದಾರೆ.

ವಿಶ್ವಕನ್ನಡ ಸಮ್ಮೇಳನದ ವಿವರಗಳನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಈ ಹೊತ್ತಿಗೆಯಲ್ಲಿ ಚಿತ್ತರಿಸಿದ್ದಾರೆ. ಸಮ್ಮೇಳನದ ವಿರೋಧಿಗಳು ಕುವೆಂಪು ಅವರಲ್ಲಿಗೆ ಬಂದು 'ನೀವು ಸಮ್ಮೇಳನಕ್ಕೆ ಹೋಗಬೇಡಿ' ಎಂದು ಕೇಳಿಕೊಂಡಾಗ ಕುವೆಂಪು ಆ ಸಂದರ್ಭದಲ್ಲಿ ವ್ಯಕ್ತಪಡಿಸಿದ ಖಚಿತ ನಿಲವು, ಸಮ್ಮೇಳನದಲ್ಲಿ ಅವರು ನೀಡಿದ ವಿಶ್ವಮಾನವ ಸಂದೇಶ, ಅಂದಿನ ಸಂದರ್ಭವೊಂದರಲ್ಲಿ ಬಳಕೆಗೊಂಡ ಅನಿಷ್ಟ ಎಂಬ ಪದಕ್ಕಾಗಿ ಬ್ರಾಹ್ಮಣರ ವಿರೋಧ ಆದದ್ದು, ಅದು ಪಡೆದುಕೊಂಡ ತಿರುವು; ಆ ಸಂದರ್ಭದಲ್ಲಿ ಕುವೆಂಪು ಅವರಿಗಾದ ಕಿರಿ ಕಿರಿ; ಅದೊಂದು ಬ್ರಾಹ್ಮಣ ಚಳುವಳಿಯ ಸ್ವರೂಪ ಪಡೆವ ಸಿದ್ಧತೆ ನಡೆದಾಗ ಲೇಖಕರು ಅದಕ್ಕೆ ನೀಡಿದ ಪ್ರತಿ ಚಳುವಳಿಯ ಯೋಜನೆ, ಕೊನೆಗೆ ದೇಜಗೌ ಅವರಿಗೂ ತಿಳಿಯದೆ ಕುವೆಂಪು ಅವರ ಅನಾರೋಗ್ಯ-ಅಸಹಾಯಕತೆಯ ಸಂದರ್ಭದಲ್ಲಿ ದೇಹಾಲಸ್ಯದಿಂದ ಮೂಡಿದ ಅಧೀರತೆಯನ್ನು ಬಂಡವಾಳವಾಗಿಸಿಕೊಂಡು "ಕುವೆಂಪು ನನ್ನ ಮನಸ್ಸಿಗೆ ನೋವಾಗಿದೆ" ಎಂದು ಹೇಳಿದರೆ ಸಾಕು ಎಂದು ಕೆಲವರು ಹೇಳಿದ್ದು. ಕುವೆಂಪು ಅನುತಾಪ ವ್ಯಕ್ತಪಡಿಸಿದ್ದು ಈ ವಿವರಗಳು ಕುತುಹಲಕಾರಿಯಾಗಿವೆ. ಅನುತಾಪ ಪತ್ರಕ್ಕೆ ರುಜು ಮಾಡಿದರು. ಎಂದಾಗ ಲೇಖಕರು ಇದೊಂದು "ಧ್ಯೇಯ ದುರಂತ" ಎಂದು ಕರೆಯುತ್ತಾರೆ. ಪ್ರತಿಗಾಮಿ ಶಕ್ತಿಗಳು ಹುಟ್ಟು ಹಾಕುವ ಹುನ್ನಾರ ಸೃಷ್ಟಿಸುವ ಷಡ್ಯಂತ್ರವನ್ನು ಲೇಖಕರು ಇಲ್ಲಿ ಸಾದ್ಯಂತವಾಗಿ ನಿರೂಪಿಸಿದ್ದಾರೆ. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಾಗ ಅದು ಇಬ್ಬರು ಹಂಚಿಕೊಳ್ಳಬೇಕಾದ ಪರಿಸ್ಥಿತಿ ಅದಕ್ಕೆ ವಿ. ಸೀಯವರು ಕಾರಣರಾದ ಬಗೆಯನ್ನು ದೇಜಗೌ ಅವರು ಮುಚ್ಚುಮರೆಯಿಲ್ಲದೆ ಹೇಳಿದ್ದಾರೆ. ಕುವೆಂಪು ಅವರಿಗೆ ಪಂಪ ಪ್ರಶಸ್ತಿ ದೊರೆತಾಗ, ಮಾರ್ಚಿ ೮ರಂದು ನಡೆದ ಅದ್ದೂರಿ ಸಮಾರಂಭದ ಸಂದರ್ಭದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿಯವರು ಆಡಿದ ಮಾತುಗಳನ್ನು ಉದ್ಧರಿಸಿದ್ದಾರೆ. ಅಂದಿನ ಸಮಾರಂಭದ ಆಕರ್ಷಕ ವ್ಯವಸ್ಥೆಯ ವರ್ಣನೆಯಲ್ಲಿ ಲೇಖಕರು ತಮಗೆ ಸಿದ್ಧಿಸಿದ ಗದ್ಯ ಶೈಲಿಯ ಸಾಧ್ಯತೆಯನ್ನು ದುಡಿಸಿಕೊಂಡಿದ್ದಾರೆ. ಪ್ರಶಸ್ತಿವರಣ ಸಮಿತಿಯ ಅಧ್ಯಕ್ಷರಾದ ಗೋಕಾಕ ಅವರ ಭಾಷಣದ ಅವತರಣಿಕೆಯನ್ನು, ಕುವೆಂಪು ನೊಬೆಲ್ ಪ್ರಶಸ್ತಿಗೆ ಅರ್ಹರು ಎಂದು ಅವರು ಹೇಳಿದ್ದನ್ನು ಉದ್ಧರಿಸಿದ್ದಾರೆ. ಅಂದಿನ ಸಮಾರಂಭದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕ ಐ. ಎಂ. ವಿಠ್ಠಲಮೂರ್ತಿ, ಅದೇ ವಿಭಾಗದ ಸಚಿವ ಸಾಹಿತಿ ಶ್ರೀ ಎಂ. ಪಿ. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದ ಕುವೆಂಪು ಶಿಷ್ಯ ಅರಣ್ಯ

ಮಂತ್ರಿ ಬಿ. ರಾಚಯ್ಯ ಹಾಗೂ ಮಂದನಾ ಭಾಷಣದಲ್ಲಿ "ಸಂಪ ಪ್ರಶಸ್ತಿ ತಮ್ಮ ಕಾವ್ಯ ಸಮಸ್ತದಲ್ಲಿಯೂ ಪ್ರವಹಿಸುವ ವಿಶ್ವ ಮಾನವ ಸಂದೇಶಕ್ಕೆ ಸಂದ ಗೌರವ" ಎಂದು ಕುವೆಂಪು ಹೇಳಿದ್ದನ್ನು ಎಲ್ಲಾ ಮಹನೀಯರ ಭಾಷಣದ ಅವತರಣಿಕೆಗಳನ್ನು ಉದ್ಧರಿಸಿದ್ದಾರೆ.

ಕುವೆಂಪು ಅವರಿಗೆ ಕರ್ನಾಟಕರತ್ನ ಪ್ರಶಸ್ತಿ ಬಂದ ಸಂದರ್ಭ, ಅದನ್ನು ನಿರಾಕರಿಸುವಂತೆ ಬಂದ ತಂತಿ ಸಂದೇಶ. ಅತ್ಯಂತ ಸರಳವಾಗಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭ ಕುವೆಂಪು ಅವರಿಗೆ ಬೇರೆ ಬೇರೆ ವಿಶ್ವವಿದ್ಯಾಲಯಗಳು ನೀಡಿದ ಗೌರವ ಡಾಕ್ಟರೇಟ್ ಪ್ರಶಸ್ತಿ, ಆ ಸಂದರ್ಭದಲ್ಲಿ ಕುಲಪತಿಗಳು ವಾಚಿಸಿದ, ಪ್ರಶಸ್ತಿಯ ಕೆಲವು ವಿವರಗಳನ್ನು ಈ ಪುಸ್ತಕದಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ.

ಮಹಾಕವಿ ಕುವೆಂಪು ಅವರ ಅಂತ್ಯದ ಸಂದರ್ಭದಲ್ಲಿ ಲೇಖಕರನ್ನು ವ್ಯಾಪಿಸಿದ ಅನಾಥ ಪ್ರಜ್ಞೆ, ಕುವೆಂಪು ಶವವನ್ನು ನೋಡಬಂದ ಅಪಾರ ಜನಸ್ತೋಮ, ನಂತರದ ಶವಯಾತ್ರೆ, ಕುಪ್ಪಳ್ಳಿಯಲ್ಲಿ ನಡೆದ ವಿಶ್ವಮಾನವನ ಶವ ಸಂಸ್ಕಾರದ ವಿಧಿ, ಕುವೆಂಪು ನಿಧನಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳು ಬರೆದ ಲೇಖನಗಳ ವರದಿಗಳ ಸಾರಾಂಶ; ಬೇರೆ ಬೇರೆ ವ್ಯಕ್ತಿಗಳು ಬರೆದ ಪತ್ರದ ಸಾರವನ್ನು ದೇಜಗೌ ಈ ಹೊತ್ತಿಗೆಯಲ್ಲಿ ಸೇರಿಸಿದ್ದಾರೆ.

ಮಹಾಕವಿ ಕುವೆಂಪು ಅವರ ಕೊನೆಯ ದಿನಗಳನ್ನು ಸೂಕ್ಷ್ಮಾತಿಸೂಕ್ಷ್ಮ ಇತಿವೃತ್ತಗಳೊಂದಿಗೆ ನಿರೂಪಿಸುತ್ತಾ ದೇಜಗೌ ಅವರು ಬಿಂದುವಿನಲ್ಲಿ ಸಿಂಧುವನ್ನು ತಾಗಿಸಿದಂತೆ ಮಹಾಕವಿಯ ಮಹಾಚೇತನದ ಹೊಳಪನ್ನು ಝಳಕನ್ನು ಈ ಕಿರು ಪುಸ್ತಕದಲ್ಲಿ ಸೆರೆಹಿಡಿದಿದ್ದಾರೆ. ಕುವೆಂಪು ಅವರ ಕೊನೆಯ ದಿನಗಳನ್ನು ಅರಿಯುವ ಆಸಕ್ತಿಯೊಂದಿಗೆ ಓದುತ್ತಾ ಹೋದಂತೆ ಕೊನೆಗಾಲದ ಕುವೆಂಪು ವ್ಯಕ್ತಿತ್ವ ಹಣ್ಣು ಮಾಗಿ ತೊಟ್ಟು ಕಳಚಿ ಬೀಳುವಾಗಿನ ಸಂದರ್ಭದ ಆ ಕ್ಷಣ, ಅವರಿಗೆ ಸಂದ ಪ್ರಶಸ್ತಿಗಳ ಬಗ್ಗೆ ಅವರ ಕ್ರಿಯೆ ಪ್ರತಿಕ್ರಿಯೆ ತಾಟಸ್ಥ್ಯ ಧ್ಯಾನಲೀನತೆ ಅಂತರ್ಮುಖತೆ ಇವೆಲ್ಲವನ್ನು ಅತ್ಯಂತ ಸುಂದರವಾಗಿ ಮನಂಬುಗುವಂತೆ ಲೇಖಕರು ಇಲ್ಲ ನಿರೂಪಿಸಿದ್ದಾರೆ. ಕುವೆಂಪು ಕುರಿತು ಅಧ್ಯಯನ ಮಾಡುವವರಿಗೆ ಪುಟ್ಟಪ್ಪನವರ ವ್ಯಕ್ತಿತ್ವದ ವಿಭಿನ್ನ ಆಯಾಮಗಳನ್ನು ಅರಿತುಕೊಳ್ಳುವವರಿಗೆ ಇದೊಂದು ಗಮನಾರ್ಹ ಕೃತಿ. ಬಹುಕಾಲದಿಂದ ಕುವೆಂಪು ಅವರೊಡನೆ ಒಡನಾಡಿದ ದೇಜಗೌ ಅವರು ಕುವೆಂಪು ಭೌತಿಕವಾಗಿ ಇಲ್ಲವಾದ ಬಳಿಕ, ಅವರು ಅಳಿದ ಮೇಲೂ ಉಳಿಯುವಂತಹ ಎಷ್ಟೋ ಸಂಗತಿಗಳನ್ನು ಇಲ್ಲಿ ಒಡಮೂಡಿಸಿದ್ದಾರೆ. ಪುಟ್ಟಪ್ಪನವರ ಬಗೆಗೆ ಆಸಕ್ತಿಯುಳ್ಳವರು ಗದ್ಯ ಬರವಣಿಗೆಯ ಸ್ಯಾಂಪಲ್ಲು ಹೇಗಿರಬೇಕೆಂದು ತಿಳಿಯ ಬಯಸುವವರು ಓದಲೇ ಬೇಕಾದ ಪುಸ್ತಕ ಇದು. ಮಹಾಕವಿಯ ಮೇರು ವ್ಯಕ್ತಿತ್ವದ ವಿಶಿಷ್ಟ ವಿವರಗಳನ್ನು ದಾಖಲಿಸಿದ ದೇಜಗೌ ಅಭಿನಂದನಾರ್ಹರು.

**ಈ ಸಂಚಿಕೆಯ ಲೇಖಕರು—**

ಸರ್ವಶ್ರೀಗಳಾದ—

೧. ಕೃಷ್ಣವಟ್ಟಂ, ಪತ್ರಕರ್ತರು
ವಿದ್ಯಾರಣ್ಯಪುರಂ, ಮೈಸೂರು–೫೭೦ ೦೦೮

೨. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

೩. ಟಿ. ಆರ್. ನಾಗಪ್ಪ, ನಂ. ೨೯೦೪
ಚಾಮುಂಡಿಪುರಂ, ಮೈಸೂರು–೫೭೦ ೦೦೪

೪. ಜೆ. ಆರ್. ಲಕ್ಷ್ಮಣರಾವ್, ಮೈತ್ರಿ, ೧೨ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು- ೫೭೫ ೦೦೯.

೫. ಡಾ॥ ಪಿ. ಸಿ. ಆರಾಧ್ಯ, ಪ್ರವಾಚಕರು
ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

೬. ಶಂಸ ಐತಾಳ, ನಂ. ೬೧೧
'ಚಂದನ', ೭ನೇ ಕ್ರಾಸ್, ಅನಿಕೇತನ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೭. ಪಿ. ಶಿವಕುಮಾರಿ, ಹಿಂದಿ ಉಪನ್ಯಾಸಕಿ
ವಿಜಯಾ ಕಾಲೇಜ್, ಮೂಲ್ಕಿ
ಮಂಗಳೂರು–೫೭೪ ೧೫೪

೮. ಸತ್ಯಮೂರ್ತಿ, ೪೪, ೧೨ನೇ ತಿರುವು, ನವಿಲು ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೯. ಸುಧಾಹರೀಶ್, ನಂ. ೧೯೮/೧೯೯, ಸಿಂಹ ಕಾಟೇಜ್
೨ನೇ ಕ್ರಾಸ್, ೨ನೇ ಸ್ಟೇಜ್, ಗೋಕುಲಂ
ಮೈಸೂರು–೫೭೦ ೦೦೨

೧೦. ಪಿ. ಮಂಜುಳಾದೇವಿ, ಶಿಕ್ಷಕಿ,
ಸೋಮಾನಿ, ಪ್ರೌಢಶಾಲೆ ಕುವೆಂಪುನಗರ
ಮೈಸೂರು–೫೭೦ ೦೨೩.

೧೧. ಕೆ. ಎಸ್. ಜಯಸಿಂಹ, ೪೬೪,
"ನಾಗಸಿಂಹ", ಅಶೋಕ ಪಿಲ್ಲರ್ ರೋಡ್
೨ನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೧೧.

೧೨. ಟಿ. ವಿ. ಅನ್ನಪೂರ್ಣಮ್ಮ
ಎಂ. ಐ. ಜಿ–೫, "ಶ್ರೀಕರ", ಕುವೆಂಪುನಗರ
ಮೈಸೂರು–೫೭೦ ೦೨೩

೧೩. 'ಗಂಗಾ' ಪಾದೇಕಲ್
"ಗಣೇಶ ಕೃಪಾ", ಕರೋಪಾಡಿ ಅಂಚೆ
ವಯಾ ವಿಟ್ಲ. ದ.ಕ.–೫೭೪೨೮೦

೧೪. ಸರಸ್ವತಿ ಬಡೆಕ್ಕಿಲ, ನಂ. ೧೭೫೭
೪ನೇ ಅಡ್ಡ ರಸ್ತೆ, ಅನಿಕೇತನ ಮಾರ್ಗ, ಪಿ ಮತ್ತು ಟಿ ಬ್ಲಾಕ್
ಕುವೆಂಪುನಗರ, ಮೈಸೂರು–೫೭೦೦೨೩

೧೫. ಡಾ|| ಶ್ರೀಪಾದಶೆಟ್ಟಿ
ಜಿ. ಸಿ. ಕಾಲೇಜು, ಅಂಕೋಲಾ
ಉತ್ತರ ಕನ್ನಡ

**ಹೊಸದಾಗಿ ಕಲಿತವರಿಗೆ ಕಡಿಮೆ ದರದಲ್ಲಿ ಸಮಿತಿಯ ಪ್ರಕಟಣೆಗಳು :**

—ಹೊಸದಾಗಿ ಕಲಿತವರು ಈ ಹಿಂದೆ ಕಲಿತಿರುವುದನ್ನು ಉಳಿಸಿಕೊಂಡು ಬೆಳೆಸಿಕೊಳ್ಳುವುದು ಅತಿ ಮುಖ್ಯವಾಗಿದೆ.

—ಇದಕ್ಕಾಗಿ ನವಸಾಕ್ಷರರ ಓದುವ ಸಾಮರ್ಥ್ಯ, ವಿಷಯ ಗ್ರಹಿಕೆ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಶ್ರೇಣೀಕೃತ ಸಾಹಿತ್ಯ ಒದಗಿಸುವುದು ಅಗತ್ಯವಾಗಿರುತ್ತದೆ.

—ಈ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ನಾಡಿನ ಹೆಸರಾಂತ ಬರಹಗಾರರು ವಿವಿಧ ವಿಷಯಗಳಲ್ಲಿ ಕೃತಿಗಳನ್ನು ರಚಿಸಿಕೊಟ್ಟಿರುತ್ತಾರೆ. ಈ ಪುಸ್ತಕಗಳು ಸಮಿತಿಯಲ್ಲಿ ತಲಾ ರೂ. ೨.೫೦ ದರದಲ್ಲಿ ದೊರೆಯುತ್ತವೆ.

ಗುರುದೇವ ರವೀಂದ್ರರು—ಡಾ|| ಹಾ.ಮಾ. ನಾಯಕ

ಮಾನೌಮಿ ಪದಗಳು—ಕೆ.ಆರ್. ಲಿಂಗಪ್ಪ

ನೈಟಿಂಗೇಲ್ ಮತ್ತು ಇತರ ಕಥೆಗಳು—ಎಸ್. ರಜತಾದ್ರಿ

ಡಾ|| ಜಕೀರ್ ಹುಸೇನ್—ಭಾರತೀಸುತ

ರಾಜಕುಮಾರನ ಕನಸು—ಎಂ. ಶಾಮರಾವ್

ಅಕ್ಕಮಹಾದೇವಿ—ಎಸ್.ವಿ. ಪರಮೇಶ್ವರಭಟ್ಟ

ಪುಟಾಣಿಗಳ ರಾಜ್ಯ—ಎಸ್. ಅನಂತನಾರಾಯಣ

ನಂಬಿಕೆಯ ನಂಟ—ದೇವನೂರು ಮಹದೇವ

ಗೋಪಾಲಕೃಷ್ಣ ಗೋಖಲೆ—ಡಾ|| ದೇ. ಜವರೇಗೌಡ

ನಾಗಮಹಾಶಯ—ಉ.ಕಾ. ಸುಬ್ಬರಾಯಾಚಾರ್

ತಿರುವಲ್ಲುವರ್—ಸಿಂಪಿ ಲಿಂಗಣ್ಣ

ಅಶೋಕನ ಶಿಲಾಶಾಸನಗಳು—ಕೋ. ಚನ್ನಬಸಪ್ಪ

ಮಹಾಶ್ವೇತೆ—ಸಮೇತನಹಳ್ಳಿ ರಾಮರಾಯ

ಸೀತಾವನವಾಸ—ತ.ಸು. ಶಾಮರಾವ್

ದ್ರೌಪದಿಯ ಭಂಗ—ಕೂಡಲಿ ಚಿದಂಬರಂ

ಧರ್ಮಶಾಸ್ತ್ರ—ವಿ. ಸೀತಾರಾಮಯ್ಯ

ನಳಚರಿತ್ರೆಯ ಸಂಗ್ರಹ.. ಎಚ್. ಎಂ. ಶಂಕರನಾರಾಯಣರಾವ್

Reg. No. KRNN 29 / WPP 6

LICENSE No. 21
LICENSED TO POST WITH PAYMENT

**ಹೊಸದಾಗಿ ಕಲಿತವರಿಗೆ ತಲಾ ರೂ. ೨-೫೦ ದರದಲ್ಲಿ ಸಮಿತಿಯ ಪ್ರಕಟಣೆಗಳು :**

ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ

ಸರ್ ಸಿ. ವಿ. ರಾಮನ್—ಜಿ.ಎಸ್. ಭಟ್

ಮಲ್ಲಿಗೆಹಳ್ಳಿ ಜಾಣರು—ಭಾರತೀಸುತ

ಬಂಗಾರದ ಹೂ—ಚಿರಂತನ

ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ

ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ

ಜಪಾನ್—ಸಿಸು ಸಂಗಮೇಶ

ನನ್ನ ಮಗುವಿನ ಶಾಲೆ—ಮಿರ್ಜಿ ಅಣ್ಣಾರಾಯ

ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿ

ಮಕ್ಕಳನ್ನು ಹೊಡೆಯಬೇಕೆ—ಉಳವೀಶ

ನಾಗರಮರಿ—ತ.ರಾ.ಸು.

ಅಲ್ಲಮಪ್ರಭು—ಡಾ|| ಪ್ರಭುಶಂಕರ್

ಸಾಕ್ರಟೀಸ್—ಡಾ|| ಸಿ. ಪಿ. ಕೃಷ್ಣಕುಮಾರ್

ಶಕುಂತಲೆ—ವಿ. ಸೀತಾರಾಮಯ್ಯ

ಶಾರದಾದೇವಿ—ಉ.ಕ. ಸುಬ್ಬರಾಯಾಚಾರ್

ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ

ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್

ಹೆಚ್ಚಿನ ಮಾಹಿತಿಗೆ ಪ್ರಧಾನಕಾರ್ಯದರ್ಶಿ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಇವರನ್ನು ಸಂಪರ್ಕಿಸಿ.

Edited by Chandrashekhararadhya, Printed by H. V. Sreenivasa char, Printed and Published by Karnataka State Adult Education Council, 5/1, Vinoba Road, Manasa Gangothri, Mysore-570 006.